SAPTHAGIRI (KANNADA)
SPIRITUAL ILLUSTRATED MONTHLY
Volume:02, Issue:11, Pages:56
June - 2023, Price Rs.20/-

ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಆಧ್ಯಾತ್ಮಿಕ ಸಚಿತ್ರ ಮಾಸಪತ್ರಿಕೆ

ಜೂನ್ 2023
ಬೆಲೆ ರೂ. 20/-




ವಜ್ರಕವಚ ಸಮರ್ಪಣೆ
(02-06-2023)

ತಿರುಮಲೆ
ಸ್ವಾಮಿಯವರ ಜ್ಯೇಷ್ಠಾಭಿಷೇಕ
02-06-2023 ರಿಂದ
04-06-2023 ರ ವರೆಗೆ

ಮುತ್ತಿನಕವಚ ಸಮರ್ಪಣೆ
(03-06-2023)

ಸ್ವರ್ಣಕವಚ ಸಮರ್ಪಣೆ
(04-06-2023)

ತಿರುಮಲೆ ತಿರುಪತಿ ದೇವಸ್ಥಾನಗಳು

# ಪಂಚಗವ್ಯ ಉತ್ಪಾದನೆಗಳು

## ಉರ್ವಿನಾಸಲ್ ಡ್ರಾಪ್ಸ್

ನೆಗಡಿ, ತಲೆನೋವುಗಳನ್ನು ನಿವಾರಿಸುತ್ತದೆ. (ಕಣ್ಣು,ಮೂಗು, ಕಿವಿ)

## ಭೂಮಿಹರ್ಬಲ್ ಫ್ಲೋರ್ ಕ್ಲೀನರ್

ನೆಲದ ಮೇಲಿನ ಬ್ಯಾಕ್ಟೀರಿಯಾಗಳನ್ನು ನಾಶ ಪಡಿಸುತ್ತದೆ.

## ನಂದಿನಿ ಗೋ - ಆರ್ಕ್

ಸತತವಾಗಿ ಕ್ರಮದಿಂದ ಬಳಸಿದಲ್ಲಿ ದೀರ್ಘಾಯುಷ್ಯ ಜೀವನಕಾಲದ ಪ್ರಮಾಣ ವೃದ್ಧಿಸುತ್ತದೆ.

## ಕ್ಷಮಾ ಕೌ - ಡಂಗ್ ಕೇಕ್ಸ್

ಯಜ್ಞ,ಯೋಗಾದಿಗಳಿಗೆ ಉತ್ತಮವಾದ ವಾತಾವರಣವನ್ನು ಕಲ್ಪಿಸಿ ಕೊಡುತ್ತದೆ.

## ಭುವತಿ ಡಂಗ್ ಲಾಗ್ಸ್ (ಕೇಕ್ಸ್)

ಹೋಮ - ಹವನಾದಿಗಳಿಗೆ ಶ್ರೇಷ್ಠವಾದ ಪರಿಸರವನ್ನು ಕಲ್ಪಿಸಿ ಕೊಡುತ್ತದೆ.

## ಅವನಿಧೂಪ ಚೂರ್ಣ

ಸುವಾಸನೆಯನ್ನು ಪಸರಿಸುತ್ತದೆ.

## ಧರಣಿ ಊದುಬತ್ತಿ

ಆಹ್ಲಾದಕರ ವಾತಾವರಣವನ್ನು ನಿರ್ಮಿಸುತ್ತದೆ.

## ಧಾತ್ರಿ ಸಾಂಬ್ರಾಣಿ ಕಪ್ಸ್

ಉತ್ತಮ ಆರೋಗ್ಯವನ್ನು ಮೈಗೂಡಿಸುತ್ತದೆ.

## ವೈಷ್ಣವಿ ಧೂಪ್ ಸ್ಟಿಕ್ಸ್

ವಾತಾವರಣವನ್ನು ಶುಭ್ರವನ್ನಾಗಿ ಮಾಡುತ್ತದೆ.

## ವಾರಾಹಿ ಧೂಪ್ ಕೋನ್ಸ್

ಸುತ್ತಮುತ್ತಲಿನ ಪರಿಸರವನ್ನು ಪವಿತ್ರಗೊಳಿಸುತ್ತದೆ.

## ಪೃಥ್ವಿ ವಿಭೂತಿ

ಈಶ್ವರಾನುಗ್ರಹ ಪ್ರಾಪ್ತಿಯನ್ನು ಕಲ್ಪಿಸುತ್ತದೆ.

## ಧನ್ವಿಕ ಹರ್ಬಲ್ ಟೂತ್‌ಪೌಡರ್

ಹಲ್ಲು ಮತ್ತು ವಸಡುಗಳನ್ನು ರಕ್ಷಿಸುತ್ತದೆ.

## ಹಿರಣ್ಮಯಿ ಹರ್ಬಲ್ ಫೇಸ್ ಪ್ಯಾಕ್

ಕಾಂತಿ ಮತ್ತು ಮುಖದ ವರ್ಣವನ್ನು ವೃದ್ಧಿಸುತ್ತದೆ.

## ಮಹಿ ಹರ್ಬಲ್ ಸೋಪ್

ಚರ್ಮವನ್ನು ಸಂರಕ್ಷಿಸುತ್ತದೆ.

## ಕಶ್ಯಪಿ ಹರ್ಬಲ್ ಶಾಂಪೂ

ಕೇಶರಾಶಿಯನ್ನು ಸಂರಕ್ಷಿಸುತ್ತದೆ.

**ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ:**
**0877-2277777,2233333**





# ಭಗವದ್ಗೀತೆ

ಕಥಂ ಭೀಷ್ಮಮಹಂ ಸಂಖ್ಯೇ ದ್ರೋಣಂ ಚ ಮಧುಸೂದನ ॥

ಇಷುಭಿಃ ಪ್ರತಿಯೋತ್ಸ್ಯಾಮಿ ಪೂಜಾರ್ಹಾವರಿ ಸೂದನ ॥

(ಶ್ರೀಮದ್ಭಗವದ್ಗೀತೆ ಅಧ್ಯಾಯ - 2, ಶ್ಲೋಕ -4)

**ಅರ್ಜುನ :**

ಕೃಷ್ಣ ನನ್ನಿಂದ ಪೂಜೆಗೊಳ್ಳುವುದಕ್ಕೆ ತಕ್ಕವರಾದ ಭೀಷ್ಮನನ್ನೂ ದ್ರೋಣನನ್ನೂ ನಾನು ಯುದ್ಧದಲ್ಲಿ ಹೇಗೆ ಬಾಣಗಳಿಂದ ಹೊಡೆಯಲಿ?

ವೆಂಕಟಾಚಲನಿಲಯ ಎನ್ನ ಒಡೆಯಾ
ವೆಂಕಟಾಚಲ ನಿಲಯಾ ವಿಧಾತೃ ಸಂತರೊಡಿಯೆ
ಪಂಕಜ ಮುಖರಮಣ ಪಾವನ ಚರಣಾ

ಉದಯವಾಗದ ಮುನ್ನೆ ಉದರ ಪೋಷಣ ಚಿಂತೆ
ಅದರ ಮೇಲೆ ಧಾನ್ಯ ಧನದ ಚಿಂತೆ
ಮದನಯೌವ್ವನದ ಚಿಂತೆ ಮತ್ತ ಸತ್ವದ ಚಿಂತೆ
ಹೃದಯಲಿ ನಿಮ್ಮ ಚಿಂತೆಯನು ಮಾಡದಲೆ ಕೆಟ್ಟೆ

ಮಂದಗಮನೆಯರಾಶೆ ಮೇದಿನಿ ಆಳುವ ಆಶೆ
ನಂದನರ ಆಶೆ ನಾನಾ ಆಶೆಯು
ಬಂಧು ಬಳಗದ ಆಶೆ ಭಾಗ್ಯವುಳ್ಳವ ರಾಶೆ
ಒಂದು ದಿನ ನಿಮ್ಮಾಶೆಯನು ಮಾಡದಲೆ ಕೆಟ್ಟೆ


ಎದುರು ಇಲ್ಲವೆಂಬೊ ಗರ್ವ ಎದೆಯ ಬಿಗುವಿನ ಗರ್ವ
ವದನನಿಷ್ಠುರ ಗರ್ವ ವಿದ್ಯಾ ಗರ್ವವು
ಉದಧಿಶಯನ ನಮ್ಮ ವಿಜಯವಿಠಲರೇಯ
ಮದಗರ್ವದಿಂದ ನಿನ್ನ ನೆನಹು ಮಾಡದೆ ಕೆಟ್ಟೆ

- ಶ್ರೀ ವಿಜಯದಾಸರು



(ಒಂಬತ್ತನೆಯ ದಶಕ)

# ದಯಾ ಶತಕಮ್



- ಎನ್. ನರಸಿಂಹಾಚಾರ್ಯ

ಕೃಪೇ ವಿಗತವೇಲಯಾ (ವಿಧೃತಲೋಕಯಾ) ಕೃತಸಮಗ್ರ ಪೋಷೈಸ್ತ್ವಯಾ ಕಲಿಜ್ವಲನದುರ್ಗತೇ ಜಗತಿ ಕಾಲಮೇಘಾಯಿತಮ್।
ವೃಷಕ್ಷಿತಿಧರಾದಿಷು ಸ್ಥಿತಿಪದೇಷು ಸಾನುಪ್ಲವೈಃ ವೃಷಾದ್ರಿಪತಿವಿಗ್ರಹೈಃ ವ್ಯಪಗತಾಖಿಲಾವಗ್ರಹೈಃ ॥81॥

ಇದುವರೆಗೆ ಈ ದಯೆಯಿಂದ ಲೋಕಗಳಿಗೆ ಉಂಟಾಗುವ ಅನೇಕ ಉಪಕಾರಗಳು ಬಗೆಬಗೆಯಾಗಿ ಉಪನಿಷತ್ತೇ ಮೊದಲಾದ ಶಾಸ್ತ್ರಗಳಲ್ಲಿ ಹೇಳಿರುವಂತೆ ವರ್ಣಿಸಲ್ಪಟ್ಟಿವೆ. ಹತ್ತನೆಯ ದಶಕದಲ್ಲಿ ಒಂದೊಂದು ಪದ್ಯದಲ್ಲಿಯೂ ಆಚಾರ್ಯರು ತಮಗೆ ಸಂಬಂಧಿಸಿದ 'ಅಸ್ಮದ್' ಶಬ್ದವನ್ನು ಪ್ರಯೋಗಿಸಿ ದಯಾದೇವಿಯಲ್ಲಿ ತಮಗಾಗಿ ಕೆಲವು ಫಲಗಳನ್ನು ಪ್ರಾರ್ಥಿಸಿಕೊಳ್ಳುತ್ತಾರೆ. ಆದ್ದರಿಂದ ಒಂಭತ್ತನೆಯದಾದ ಈ ದಶಕದೊಡನೆಯೇ ಒಂದು ರೀತಿಯಿಂದ ಈ ಸ್ತೋತ್ರವೂ ಮುಗಿಯಿತೆನ್ನಬಹುದು. ದಯಾದೇವಿಯಿಂದ ಲೋಕಗಳಿಗೆ ಉಂಟಾಗಬಹುದಾದ ಉಪಕಾರಗಳಲ್ಲಿ ಉತ್ತಮೋತ್ತಮವಾದ ಉಪಕಾರವೆಂದರೆ ಪರಮಪುರುಷನನ್ನು ಶ್ರೀನಿವಾಸನೇ ಮೊದಲಾದ ಅರ್ಚಾರೂಪಗಳಲ್ಲಿಯೂ, ಮತ್ಸ್ಯ, ಕೂರ್ಮ, ರಾಮಕೃಷ್ಣಾದಿ ವಿಭವಾವತಾರಗಳಲ್ಲಿಯೂ ಅವತರಿಸುವಂತೆ ಮಾಡುವುದೇ. ಇದಕ್ಕಿಂತಲೂ ಉತ್ತಮವಾದ ಉಪಕಾರವು ಮತ್ತೊಂದಿಲ್ಲ. ಈ ಅವತಾರಗಳಿಂದಲೇ ಸಕಲ ಲೋಕಗಳೂ ಉಜ್ಜೀವಿಸುವುದು

"ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ

ಅಭ್ಯುತ್ಥಾನಮ ಧರ್ಮಸ್ಯ ತದಾತ್ಮಾನಂ ಸೃಜಾಮಹಂ ॥

ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ।

ಧರ್ಮಸಂಸ್ಥಾಪನಾರ್ಥಯ ಸಂಭವಾಯಿ ಯುಗೇ ಯುಗೇ " ಎಂದು ಅವನೇ ಹೇಳಿಲ್ಲವೆ! ಇಂತಹ ಉತ್ತಮವಾದ ಉಪಕಾರವನ್ನು ಹೇಳಿ, ಅರ್ಚಾವತಾರಗಳಲ್ಲಿಯೂ, ದಶಾವತಾರಗಳಲ್ಲಿಯೂ ಉಂಟಾಗಬಹುದಾದ ದಯಾಕಾರ್ಯವನ್ನು ತಿಳಿಸಿ , ಈ ದಶಕವನ್ನು ಮುಗಿಸುತ್ತಾರೆ. ಅದರಲ್ಲಿಯೂ ವಿಭವಾವತಾರಗಳಿಗಿಂತಲೂ ಅರ್ಚಾವತಾರಗಳೂ ಚೆನ್ನಾಗಿ ನಿರೂಪಿಸಿರುವರು. ಇದನ್ನು ಅನುಸರಿಸಿಯೇ ಆಚಾರ್ಯ ನಿಗಮಾಂತ ಮಹಾ ದೇಶಿಕರೂ ತಿರುಮಲೆಯೇ ಮೊದಲಾದ ದಿವ್ಯದೇಶಗಳಲ್ಲಿ ಅವತರಿಸಿರುವ ಶ್ರೀನಿವಾಸನೇ ಮೊದಲಾದ ಅರ್ಚಾಮೂರ್ತಿಗಳ ಹಿರಿಮೆಯನ್ನು ಮೊದಲಿನ ಈ ಪದ್ಯದಲ್ಲಿ ವರ್ಣಿಸಿರುತ್ತಾರೆ. ಮುಂದಿನ ಒಂಭತ್ತು ಪದ್ಯಗಳಲ್ಲಿ ಮತ್ಸ್ಯ ಕೂರ್ಮಾವತಾರಗಳಿಗೆ ಒಂದು ಪದ್ಯವನ್ನು ಉಳಿದ ಎಂಟು ಅವತಾರಗಳಿಗೆ ಎಂಟು ಪದ್ಯಗಳನ್ನೂ ರಚಿಸಿ ಈ ದಶಕವನ್ನು ಮುಗಿಸುತ್ತಾರೆ.

ಹಿಂದಿನ ಪದ್ಯದಲ್ಲಿ ಮೋಕ್ಷವನ್ನು ವರ್ಷಿಸುವ ಮೇಘದಂತೆ ಶ್ರೀನಿವಾಸನನ್ನು ವರ್ಣಿಸಿದರು, ಈ ಪದ್ಯದಲ್ಲಿ ಇತರ ಎಲ್ಲ ದಿವ್ಯ ದೇಶಗಳಲ್ಲಿರುವ ಅರ್ಚಾಮೂರ್ತಿಗಳೂ ಶ್ರೀನಿವಾಸನಂತೆಯೇ ಸಕಲ ವಿಧವಾದ ಪಾಪಗಳನ್ನೂ (ದುರ್ಭಿಕ್ಷಗಳನ್ನೂ) ಹೋಗಲಾಡಿಸಿ, ಸಕಲ ವಿಧವಾದ ಫಲಗಳನ್ನೂ (ಒಳ್ಳೆಯ ಬೆಳೆಯನ್ನೂ ) ಕೊಡುವಂತಹ ದೊಡ್ಡ ಕಾಳ ಮೇಘಗಳೆಂದು ವರ್ಣಿಸಿರುವರು.

ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಆಧ್ಯಾತ್ಮಿಕ ಸಚಿತ್ರ ಮಾಸ ಪತ್ರಿಕೆ

ಶ್ರೀ ಶೋಭಕೃತ್ ನಾಮಸಂವತ್ಸರ ಜ್ಯೇಷ್ಠ - ಆಷಾಢ ಮಾಸ ಸಂಚಿಕೆ

ಸಂಪುಟ : 02 ಜೂನ್ - 2023 ಸಂಚಿಕೆ : 11



ವೆಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋದೇವೋ ನ ಭೂತೋ ನ ಭವಿಷ್ಯತಿ

## ವಿಷಯಸೂಚಿಕೆ


| | | |
|---|---|---|
| ಸಂಪಾದಕೀಯ | | 06 |
| ಆಷಾಢ ಶುದ್ಧ ಏಕಾದಶಿ - ತಪ್ತಮುದ್ರಧಾರಣೆ | -ಡಾ॥ ಗುರುರಾಜ ಪೋಶೆಟ್ಟಿಹಳ್ಳಿ | 07 |
| ವಟ ಸಾವಿತ್ರಿ ವ್ರತ | -ಶ್ರೀಮತಿ. ಮಾಧುರಿ ದೇಶಪಾಂಡೆ | 10 |
| ವಿಜಯನಗರ ಸಾಮ್ರಾಜ್ಯ ಸ್ಥಾಪನಾಚಾರ್ಯರು ವಿದ್ಯಾರಣ್ಯರು (ಮಾಧವಾಚಾರ್ಯರು) | - ಡಾ॥ ಎಸ್. ನಂಜುಂಡಸ್ವಾಮಿ | 11 |
| ಮಣ್ಣೆತ್ತಿನ ಅಮಾವಾಸ್ಯೆ | -ಹನುಮಂತ ಮ. ದೇಶಕುಲಕರ್ಣಿ | 13 |
| "ಪ್ರಸನ್ನವೇಂಕಟಾ ಪರಬ್ರಹ್ಮ ಮುಕುಟಾ" | - ಡಾ॥ ಸುಭಾಸ ಕಾಖಂಡಕಿ | 15 |
| ಆರ್ಯುವೇದದ ಆರೋಗ್ಯ ಸೂತ್ರ | - ಡಾ॥ ಎಸ್.ಬಿ.ಎ. ಸಂಧ್ಯಾ | 17 |
| ಜಗನ್ನಾಥನ ರಥ ಯಾತ್ರೆಗೆ ಜನಜಾತ್ರೆ | - ಡಾ॥ ಪ್ರಕಾಶ್ ಕೆ. ನಾಡಿಗ್ | 19 |
| ಲಕ್ಷ್ಮೀ ಹೃದಯ | - ಡಾ॥ ಎ. ಕುಮುದ | 21 |
| ಮಹರ್ಷಿ ಅರಣ್ಯಕರು | - ಡಾ॥ ಪ್ರದೀಪ್ ಕುಮಾರ್ ಹೆಬ್ರಿ | 22 |
| ನಾರಾಯಣಘಟ್ಟದ ಶ್ರೀವರದರಾಜ ದೇವಾಲಯ | -ಕೆಂಗೇರಿ ಚಕ್ರಪಾಣಿ | 23 |
| ಶ್ರೀ ವೇಂಕಟೇಶ್ವರಸ್ವಾಮಿ ಆಲಯ | -ದಿ॥ ಬಿ.ಎನ್. ಶ್ರೀನಿವಾಸನ್ | 24 |
| ವಿಶ್ವ ಸಂಗೀತ ದಿನ | -ಶ್ರೀಮತಿ. ಪಾರಿಜಾತ ಬಿ.ಎಸ್. | 31 |
| ಸಾಗರಕಟ್ಟೆ ಮಠ ಸಂಸ್ಥಾಪಕ ಶ್ರೀ ಪದ್ಯುಮ್ನತೀರ್ಥರು | -ಶ್ರೀಧರ ರಾಯಸಂ | 33 |
| ತಿರುಮಲೆ ಕಾಲಮಾನಾಚರಣೆಗಳು | -ಶ್ರೀಮತಿ | 34 |
| ಮುದ್ರಾಯೋಗಾ | -ಡಾ॥ ಲೀಲಾ ಬಸವರಾಜು | 36 |
| ಶ್ರೀ ಪಾದರಾಜರ ಆರಾಧನಾ ಮಹೋತ್ಸವ | - ಪ್ರಣವ | 38 |
| ಆಳ್ವಾರುಗಳು ಕಂಡ ತಿರುವೇಂಗಡ | - ಎಂ. ಆರ್. ನರಸಿಂಹನ್ | 39 |
| ತಿರುನರಯೂರ್ (108 ದಿವ್ಯದೇಶಗಳು) | -ಸೂರ್ಯವಂಶಿ | 41 |
| ಆರೋಗ್ಯ ಪ್ರದಾಯಿನಿ ಬೀಟ್ರೂಟ್ | - ಡಿ.ಎಸ್. ಬದ್ರಿನಾಥ್ | 43 |
| ರಾಶಿ ಫಲಗಳು | - ಬ್ರಹ್ಮಶ್ರೀ ಟಿ.ವಿ.ಕೆ.ಪೂರ್ಣ ಪ್ರಸಾದ್ ಸಿದ್ಧಾಂತಿ | 44 |
| ಸಂಸ್ಕೃತ ಕಲಿಯೋಣ | - ವಿ. ಪ್ರದೀಪ್ ಕುಮಾರ್ | 45 |
| ಶ್ರೀ ವೆಂಕಟಾಚಲ ಮಹಾತ್ಮ್ಯೆ | -ಶ್ರೀಮತಿ. ಎನ್. ಪಾರ್ವತಿ | 46 |
| ನೀತಿ ಕಥೆ - ಎಲ್ಲರನ್ನೂ ಪ್ರೀತಿಸೋಣ, ಮತ್ಸರವನ್ನು ಇಲ್ಲವಾಗಿಸೋಣ | - ಕೃಪೆ | 48 |
| ರಸಪ್ರಶ್ನೆಗಳು | | 50 |
| ಚಿತ್ರ ಕಥೆ - ಏಕಾದಶಿ | - ಶ್ರೀನಿವಾಸ ದೀಕ್ಷಿತರು | 52 |


ಮುಖಚಿತ್ರ -ಸ್ವಾಮಿಯವರ ಜ್ಯೇಷ್ಠಾಭಿಷೇಕ , ತಿರುಮಲೆ

ಹಿಂಬದಿಚಿತ್ರ - ನಮ್ಮಾಳ್ವಾರ್, ಚಿತ್ರಕಲೆ -ಪಿ. ಶಿವಪ್ರಸಾದ್

**ಗೌರವ ಸಂಪಾದಕರು**
ಎ.ವಿ. ಧರ್ಮಾರೆಡ್ಡಿ , ಐ.ಡಿ.ಇ.ಎಸ್.
ಕಾರ್ಯನಿರ್ವಹಣಾಧಿಕಾರಿ, (ಎಫ್.ಎ.ಸಿ.)
ತಿ.ತಿ.ದೇ., ತಿರುಪತಿ.

**ಪ್ರಧಾನ-ಸಂಪಾದಕರು**
ಡಾ॥ ಕೆ. ರಾಧಾರಮಣ, ಎಮ್.ಎ.ಎಮ್.ಫಿಲ್.ಪಿಎಚ್.ಡಿ.

**ಸಂಪಾದಕರು**
ಡಾ॥ ವಿ.ಜಿ. ಚೊಕ್ಕಲಿಂಗಂ, ಎಮ್.ಎ.ಪಿಎಚ್.ಡಿ.

**ಮುದ್ರಣ**
ಶ್ರೀ .ಪಿ. ರಾಮರಾಜು , ಎಮ್.ಎ.
ವಿಶೇಷಾಧಿಕಾರಿ,
ತಿ.ತಿ.ದೇ., ಮುದ್ರಣಾಲಯ, ತಿರುಪತಿ.

**ಡಿ.ಟಿ.ಪಿ.**
ಪ್ರಧಾನ ಸಂಪಾದಕರ-ಕಾರ್ಯಾಲಯ
ತಿ.ತಿ.ದೇ. ತಿರುಪತಿ.

**ಛಾಯಾಗ್ರಹಣ**
ಶ್ರೀ ಪಿ.ಎನ್.ಶೇಖರ್,
ಸಹಾಯ ಛಾಯಾಗ್ರಹಣ, ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ,
ಸಹಾಯ ಛಾಯಾಗ್ರಹಣ ತಿ.ತಿ.ದೇ.

ಲೇಖನ / ಚಂದಾ ಮಿಕ್ಕ ವಿವರಗಳಿಗೆ
ಪ್ರಧಾನ ಸಂಪಾದಕರು
ತಿ.ತಿ.ದೇವಸ್ಥಾನಗಳು,
ಕೆ.ಟಿ.ರಸ್ತೆ, ತಿರುಪತಿ - 517 507

**ಇತರ ವಿವರಗಳಿಗೆ**
ಕಾರ್ಯಾಲಯ : 0877 - 2264543
: 0877 - 2264359
ಸಂಪಾದಕರು : 0877 - 2264360

24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ
0877 - 2277777, 2233333
ಸಲಹೆ/ದೂರುಗಳಿಗೆ ಟೋಲ್ ಫ್ರೀ ಸಂಖ್ಯೆ :
1800-425-4141
ಸಲಹೆ/ಸೂಚನೆ/ದೂರುಗಳಿಗಾಗಿ
sapthagiri.helpdesk@tirumala.org
ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು
www.tirumala.org
ಮೂಲಕ ಓದಬಹುದು.

| | |
|---|---|
| ಬಿಡಿ ಪ್ರತಿ | ರೂ. 20/- |
| ವಾರ್ಷಿಕ ಚಂದಾ | ರೂ. 240/- |
| ಆಜೀವ ಚಂದಾ (12 ವರ್ಷಗಳು) | ರೂ. 2400/- |
| ವಿದೇಶಿ ವಾರ್ಷಿಕ ಚಂದಾ | ರೂ. 1030/- |

ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ

**ಸಂಪಾದಕೀಯ**

# ಯೋಗಾಗ್ನಿಯಲ್ಲಿ ಧನ್ಯರಾಗೋಣ

''ಯೋಗ'' ಅಂದರೆ ''ಯುಜ್'' ಎಂಬ ಸಂಸ್ಕೃತ ಧಾತುವಿನಿಂದ ಹುಟ್ಟಿದೆ.

''ಯುಜ್'' ಎಂದರೆ ''ಸೇರ್ಪಡೆ'' ಎಂದರ್ಥ. ''ಯಜ್ಯತ್ ಏತದಿತಿಯೋಗಃ'' ಯಜ್ಯತೇ ಅನೇನ ಇತಿ ಯಾಗಃ ಎಂಬ ವ್ಯುತ್ಪತ್ತಿಯ ಮೂಲಕ ನೋಡಿದರೆ - ಇಂದ್ರಿಯಗಳನ್ನು ವಶಪಡಿಸಿಕೊಂಡು, ಮನಸ್ಸನ್ನು ಪರಮಾತ್ಮನಲ್ಲಿ ಕೇಂದ್ರೀಕರಿಸಿಕೊಳ್ಳುವುದೇ ಎಂಬ ಅರ್ಥಬರುತ್ತದೆ.

ಈ ಯಾಗ ವಿಧಾನವನ್ನು ಪತಂಜಲಿ ಮಹರ್ಷಿ ತನ್ನ ಯೋಗ ಸೂತ್ರಗಳ ಮೂಲಕ ವಿವರಿಸಿದ್ದಾನೆ. ಆ ಯೋಗ ಶಾಸ್ತ್ರ ಸಮಾಧಿ, ಸಾಧನೆ, ವಿಭೂತಿ, ಕೈವಲ್ಯ ಪದಗಳೆಂದು ನಾಲಕ್ಕು ವಿಭಾಗಗಳಲ್ಲಿ ರಚಿಸಲ್ಪಟ್ಟಿದೆ.

ಯೋಗವೆಂದರೆ ''ಚಿತ್ತವೃತ್ತಿ'' ಸ್ಥಿರವೆಂದು ಹೇಳಿ, ಆ ಚಿತ್ತವೃತ್ತಿಯು ನಿರಂತರ ಅಭ್ಯಾಸದಿಂದ ವೈರಾಗ್ಯದಿಂದ ನಮಗೆ ಸುಲಭವಾಗಿ ಲಭಿಸುತ್ತದೆ ಎಂದು ಪತಂಜಲಿ ಮಹರ್ಷಿ ಅಭ್ಯಾಸ ವೈರಾಗ್ಯಭ್ಯಾಂ ಚಿತ್ತವೃತ್ತಿ ನಿರೋಧಃ ಎಂಬ ಸೂತ್ರಗಳ ಮುಖಾಂತರ ತಿಳಿಸಿದ್ದಾರೆ. ಆದ್ದರಿಂದ ಯೋಗಾಭ್ಯಾಸ ಕರ್ತವ್ಯವಾಗಿ ಹೇಳಲಾಗಿದೆ.

''ಯೋಗಾ'' ಕೇವಲ ಎರಡು ಅಕ್ಷರಗಳ ಹೆಸರು! ಆಧುನಿಕ ಮಾನವನ ಜೀವನಕ್ಕೆ ದಿವ್ಯೌಷಧವಾಗಿದೆ! ಯೋಗ ಎಂಬುದು ಒಂದು ಸಮಗ್ರ ಜೀವನ ವಿಧಾನ! ಇದರಲ್ಲಿ ಅನೇಕ ಪ್ರಕ್ರಿಯೆಗಳಿವೆ, ಪ್ರಾಣಾಯಾಮದ ಜೊತೆಯಲ್ಲಿ ಇತರ ಭೌತಿಕ ಪದ್ಧತಿಗಳ ಮೂಲಕ ಶರೀರವನ್ನು ಆರೋಗ್ಯ ವಾಗಿರಿಸಿಕೊಳ್ಳುವುದಕ್ಕೆ ಇದು ಸರಿಯಾದ ಪದ್ಧತಿಯಾಗಿದೆ. ''ಯೋಗ'' ಎಂದರೆ ಕೇವಲ ಆಸನಗಳಿಂದ ಸರಿ ಹೋಗುವುದಲ್ಲ. ಇದು ವೃತ್ತಿ ಜೀವನದಲ್ಲಿ ಸಂಭವಿಸುವಂತಹಾ ವಿಪ್ಲವವೆಂದೇ ಹೇಳಬಹುದು. ಅಂದರೆ ಅಲ್ಲಿಯವರೆಗೂ ಸ್ತಬ್ದತೆಯಿಂದ, ನಿರ್ಲಕ್ಯತೆಯಿಂದ ವ್ಯವಹರಿಸದೆ ಅವರು ಕ್ರಮಶಿಕ್ಷಣದಿಂದ ಅಸ್ತವ್ಯಸ್ತವಾಗಿರುವ ಜೀವನ ಶೈಲಿಯನ್ನು ಸರಿಪಡಿಸಿಕೊಳ್ಳುವುದೇ ಆಗಿದೆ, ಹೇಗೆಂದರೆ ನಿದ್ದೆಯಿಂದ ಎದ್ದೇಳುವ ಸಮಯದಿಂದ ರಾತ್ರಿ ನಿದ್ರಿಸುವವರೆಗೂ ಆಹಾರದ ಅಭ್ಯಾಸಗಳೊಂದಿಗೆ ಎಲ್ಲಾ ವಿಷಯಗಳಲ್ಲೂ ಸಮತೋಲನವನ್ನು ಸಾಧಿಸುವುದು. ಇವೆಲ್ಲವೂ ಯೋಗಾಭ್ಯಾಸದೊಂದಿಗೆ ಸಾಧ್ಯವಾಗುತ್ತದೆ. ಆ ಹಂತದಲ್ಲಿ ಪಯಣಿಸಿದವರೇ ನಮ್ಮ ಮಹರ್ಷಿಗಳು, ಯೋಗಿಗಳಾದ ವಸಿಷ್ಠರು, ವಿಶ್ವಾಮಿತ್ರರು, ರಾಮಕೃಷ್ಣಪರಮಹಂಸರು, ಭಗವಾನ್ ರಮಣ ಮಹರ್ಷಿಗಳು.

ಆಧುನಿಕರು ಒಂದೊಮ್ಮೆ ಯೋಗಾಭ್ಯಾಸವನ್ನು ಯೋಗ್ಯವಲ್ಲವೆಂದು ಭಾವಿಸಿದ್ದರು. ಆದರೆ ಇಂದು ಪ್ರಪಂಚವೆಲ್ಲಾ ಅದರ ಮೇಲೆ ಶ್ರದ್ಧೆಯನ್ನು ತೋರಿಸುತ್ತಿದೆ. ಅದಕ್ಕೇ ಏನೋ ೨೧ ನೆ ಯ ತಾರೀಖಿನಂದು ಐಕ್ಯರಾಜ್ಯ ಸಮಿತಿಯವರು ಆ ದಿನವನ್ನು ''ಅಂತರಾಷ್ಟ್ರೀಯ ಯೋಗಾದಿನೋತ್ಸವ''ವೆಂದು ಆಚರಿಸುತ್ತಿದ್ದಾರೆ.

ಇನ್ನು ಕಲಿಯುಗ ವೈಕುಂಠವಾದ ತಿರುಮಲೆಯಲ್ಲಿನ ಸಪ್ತಗಿರೀಶನಿಗೆ ಪ್ರತಿ ವರ್ಷ ''ಅಭಿದೇಯಕ ಅಭಿಷೇಕ - ಜ್ಯೇಷ್ಠಾಭಿಷೇಕ''ವನ್ನು ಈ ಮಾಸದ ಜ್ಯೇಷ್ಠಶುಕ್ಲ ತ್ರಯೋದಶಿಯಂದು ಆರಂಭಿಸಿ, ಹುಣ್ಣಿಮೆಯ ದಿನದಂದು ಸಮಾಪ್ತಿಯಾಗುವಂತೆ ನಡೆಸುತ್ತಾರೆ. ಈ ಅಭಿಷೇಕದಿಂದಾಗಿ ಸ್ವಾಮಿ ಶ್ರೀವೇಂಕಟೇಶ್ವರನ ಅರ್ಚಾವತಾರವಾದ ಉತ್ಸವಮೂರ್ತಿ ಶ್ರೀಮಲೆಯಪ್ಪಸ್ವಾಮಿಯು ಅಮಿತವಾದ ತೇಜಸ್ಸಿನಿಂದ ಪ್ರಕಾಶಿಸುತ್ತಾ ವೈಭವದಿಂದ ಕಂಗೊಳಿಸುತ್ತಾ ಜ್ಯೇಷ್ಠಾಭಿಷೇಕವನ್ನು ನೆರವೇರಿಸಿಕೊಳ್ಳುತ್ತಾನೆ. ಈ ವಿಷಯವನ್ನು ವೈಖಾನಸ ಗ್ರಂಥರಾಜವಾದ ''ಕ್ರಿಯಾಧಿಕಾರ''ವು ತಿಳಿಸುತ್ತಿದೆ. ಈ ಅಭಿಷೇಕವನ್ನು ವೀಕ್ಷಿಸಿದ ಭಕ್ತರಿಗೆ ಶ್ರೀನಿವಾಸನ ದಿವ್ಯಾಶೀರ್ವಾದಗಳು ಪರಿಪೂರ್ಣವಾಗಿ ಲಭಿಸುತ್ತವೆ.

ಈ ಮಾಸದಲ್ಲೇ ಭಕ್ತಾಗ್ರೇಸರರಾದ, ಪನ್ನಿದ್ದಳ್ವಾರರು ಎಂದು ಹೆಸರುವಾಸಿಯಾಗಿರುವ ''ನಮ್ಮಾಳ್ವಾರ್'', '' ಪೆರಿಯಾಳ್ವಾರ್'' ಶಾತ್ತುಮೊರೆ ಸೇವೆಯೂ ನಡೆಯುವುದು ವಿಶೇಷವಾದುದಾಗಿದೆ. ಇನ್ನು ಇದೇ ತಿಂಗಳಿನಲ್ಲಿ ಪೂರಿಜಗನ್ನಾಥ ರಥಯಾತ್ರೆಯು ಅತ್ಯಂತ ವೈಭವದಿಂದ ನಡೆಯುತ್ತದೆ. ಸಕಲ ಸಮೈಕ್ಯತೆಗೆ ಮತ್ತೊಂದು ಹೆಸರೆಂದರೆ ಪೂರೀಕ್ಷೇತ್ರ. ''ಸರ್ವಂ ಜಗನ್ನಾಥಂ'' ಎಂಬ ವಿಷಯವನ್ನು ನೆನೆಸಿಕೊಂಡು ಜಗನ್ನಾಥ ಸ್ವಾಮಿಯನ್ನು ಸ್ಮರಿಸಿದರೆ ಮುಕ್ತಿದಾಯಕವಾಗುತ್ತದೆ.

**ಓಂ ನಮೋ ವೇಂಕಟೇಶಾಯ**

# ಆಷಾಢ ಶುದ್ಧ ಏಕಾದಶಿ – ತಪ್ತಮುದ್ರಧಾರಣೆ

–ಡಾ॥ ಗುರುರಾಜ ಪ್ರೋಶೆಟ್ಟಿಹಳ್ಳಿ
97393 69621



### ಆಷಾಢ ಏಕಾದಶಿ ಏನು ವಿಶೇಷ ?

ಎಲ್ಲ ಮಠ ಮಂದಿರಗಳಲ್ಲಿ ಆಷಾಢಮಾಸದ ಮೊದಲ ಏಕಾದಶೀ ದಿನದಂದು ತಪ್ತಮುದ್ರಾಧಾರಣೆ ಮಾಡಿಸಿಕೊಳ್ಳುತ್ತಾರೆ. ಎಲ್ಲರೂ ಆ ದಿನವೇ ಮುದ್ರಾಧಾರಣೆ ಮಾಡಿಸಿಕೊಳ್ಳಲು ಏನು ವಿಶೇಷ? ನಿಜವಾಗಿ ನೋಡಿದರೆ ಆಷಾಢ ಏಕಾದಶೀ ಮಾತ್ರ ಮುದ್ರಾಧಾರಣೆ ಮಾಡಿಸಿಕೊಳ್ಳಬೇಕು ಎಂದು ಹೇಳಿಲ್ಲ. ವಾಸಿಷ್ಠಸ್ಮತಿ ಹೇಳುವಂತೆ ಜಾತಕರ್ಮ, ಚೌಲ, ಉಪನಯನ ಮೊದಲಾದ ಸಂಸ್ಕಾರಗಳನ್ನು ನಡೆಸುವ ಸಂದರ್ಭಗಳಲ್ಲಿ ಮತ್ತು ಮಂತ್ರಾಧ್ಯಯನ ಸಮಯದಲ್ಲಿ ಮತ್ತು ಸ್ತ್ರೀಯರಿಗೆ ವಿವಾಹ ಸಂಸ್ಕಾರ ಸಮಯದಲ್ಲಿ ತಪ್ತ ಮುದ್ರಾಧಾರಣೆ ಮಾಡಿಸಿಕೊಳ್ಳಬೇಕಾದದ್ದು ಅವಶ್ಯಕ ಜೊತೆಗೆ ತಮ್ಮ ತಮ್ಮ ಗುರುಗಳ (ಮಠಾಧೀಪತಿಗಳ) ದರ್ಶನ - ಸಮಾಗಮ ಯಾವಾಗ ಆಗುತ್ತದೆ. ಆ ಕಾಲದಲ್ಲಿ ಗುರುಗಳಿಂದ ತಪ್ತ ಮುದ್ರಾಧಾರಣೆ ಮಾಡಿಕೊಳ್ಳಬೇಕು.ಆದರೂ ಆಷಾಢಮಾಸದ ಮೊದಲ ಏಕಾದಶಿಯಂದು ಎಲ್ಲರೂ ಮುದ್ರಾಧಾರಣೆ ಮಾಡಿಕೊಳ್ಳಲು ಒಂದು ವಿಶೇಷ ಕಾರಣವೆಂದರೆ ಆಷಾಢ ಮೊದಲ ಏಕಾದಶೀಯಂದು ಒಳ್ಳೆಯ ಸತ್ಕರ್ಮಗಳನ್ನು ಮಾಡುತ್ತಾ ಹೊಸ ಸಂವತ್ಸರವನ್ನು ಆರಂಭಿಸುವಂತೆ, ಶಾಕವ್ರತ-ದಧಿವ್ರತ ಪಯೋವ್ರತ ದ್ವಿದಲವ್ರತಗಳನ್ನು ಆಚರಿಸಲು ಹೊರಟ ಸಂದರ್ಭದಲ್ಲಿ ಮೊದಲಿಗೆ ಮೈ ಮನಗಳನ್ನು ಶುದ್ಧ ಮಾಡಿಕೊಂಡು ವ್ರತವನ್ನು ಆಚರಿಸಬೇಕಾದ್ದರಿಂದ, ಗುರುಗಳಿಂದ ತಪ್ತ ಮುದ್ರಾಧಾರಣೆ ಪಡೆದು, ದೇಹವನ್ನು ಮನಸ್ಸನ್ನು ಶುದ್ಧಮಾಡಿಕೊಂಡು ಶುದ್ಧವಾದ ದೇಹ ಇಂದ್ರಿಯಗಳಿಂದ ವ್ರತವನ್ನು ಆಚರಿಸುವುದು ಶಾಸ್ತ್ರೀಯ ವಿಧಿ.

ದೇವರ ಮಂತ್ರ ಜಪಿಸುವವನು ಮೊದಲು ದೇವರ ಚಿಹ್ನೆಯನ್ನು ದೇಹದಲ್ಲಿ ಧರಿಸಿಕೊಳ್ಳಬೇಕು(ಮದಂಕಾಕಿತಃ ಮನ್ಮಂತ್ರಂ ಜಪ). ಇದು ಭಗವಂತನ ಆದೇಶ, ಇದನ್ನು ಭಕ್ತರು ಅನುಸರಿಸಬೇಕು. ದೇವರ ಭಕ್ತನಾದವನು ದೇವರ ಪವಿತ್ರವಾದ ಆಯುಧಗಳನ್ನು ದೇಹದ ಮೇಲೆ ಧರಿಸಿಕೊಳ್ಳುವುದರಿಂದ ದೇಹ ಪವಿತ್ರವಾಗುತ್ತದೆ ಎನ್ನುವ ಅನುಸಂಧಾನ ನಮ್ಮ ಹಿರಿಯರದ್ದಾಗಿದೆ.

ಈ ಹಿನ್ನೆಲೆಯಲ್ಲಿ ಬೆಳಗ್ಗಿನ ಸ್ನಾನದ ನಂತರ ನಿತ್ಯ ವಿಧಿಗಳನ್ನು ಪ್ರಾರಂಭಿಸುವ ಮೊದಲು ಗೋಪಿ ಚಂದನ ಮತ್ತು ಮುದ್ರಾಧಾರಣೆ ಸಂಪ್ರದಾಯಕವಾಗಿ ಬೆಳೆದು ಬಂದಿದೆ. ವೈಷ್ಣವತ್ವದ ಸೂಚಕ ಆಚರಣೆ ಇದಾಗಿದೆ.

ಸೋದೆ ಶ್ರೀವಾದಿರಾಜರು ರಚಿತ ತಪ್ತ ಸುದರ್ಶನ ಶಂಖ ಧಾರಣವನು ಭುಜ ಯುಗದೊಳು ಮಾಡಿ, ಎನ್ನುವ ಸಂದೇಶ ನಾರಾಯಣ ನೆನೆ ಮನವೆ ನಾರಾಯಣ ನೆನೆ ಹಾಡಲ್ಲಿದೆ.

ಚಕ್ರ ಅಜ್ಞಾನ ನಿವಾರಕ, ಶಂಖ ಜ್ಞಾನ ಪ್ರದ. ಆಧುನಿಕ ಯುಗದಲ್ಲಿ ವಿಪರೀತ ಅರಿವು ನಾಶವಾಗಿ ಸಮೀಚೀನ (ಉತ್ತಮ) ಅರಿವು ಬರಲು ಮುದ್ರಾಧಾರಣೆ ಅತ್ಯಾವಶ್ಯಕ. ವೈಷ್ಣವ ಸಂಪ್ರದಾಯದಲ್ಲಿ ನಡೆದು ಬಂದು ತಪ್ತ ಮುದ್ರಾಧಾರಣೆಗೆ ಜಾತಿಯ ಚೌಕಟ್ಟಿಲ್ಲ.ಶರೀರವೇ ದೇವಸ್ಥಾನವಾದರೆ ದೇವರ ಮನೆಯ ಶುದ್ಧಿಗೆ ಮುದ್ರಾಧಾರಣೆ, ದೇವರ ಆಯುಧಗಳ ಚಿಹ್ನೆ ಹೊಂದುವುದರ ಹಿಂದೆ ಈ ಶರೀರ ಭಗವಂತ ಕೊಟ್ಟದ್ದು ಎನ್ನುವ ಭಗವತ್ ಪ್ರಜ್ಞೆಯಿದೆ. ಅಹಂ ಮಮತಾದಿಗಳು ನಾಶವಾಗುತ್ತವೆ. ಹೀಗೆ ನಮ್ಮ ಒಳ ಹೊರಗಿನ ಶುದ್ಧೀಕರಣವಾಗುತ್ತದೆ. ತಪ್ತ ಮುದ್ರಾಧಾರಣೆ ಮಾಡದೇ ಇದ್ದರೆ ಅಪವಿತ್ರ ದೇಹದಿಂದ ಮಾಡಿದ ಯಾವುದೇ ಕಾರ್ಯವಿಧಿಗಳು ಸಿದ್ದಿಸದು. ಆಚರಣೆ /ವ್ರತ ಪರಿಪಕ್ವತೆ ಮುದ್ರಾಧಾರಣೆ ಅತ್ಯಗತ್ಯ.

ತಪ್ತಮುದ್ರಾಧಾರಣೆ ಹಿಂದೆ ಹಿರಿಯರ ವೈಜ್ಞಾನಿಕ ಚಿಂತನೆಯಿದೆ. ಮಳೆಗಾಲದಲ್ಲಿ ರೋಗ ರುಜಿನಗಳು ಹೆಚ್ಚಿರುವ ಹಿನ್ನೆಲೆಯಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚಳಕ್ಕೆ ತಪ್ತ ಮುದ್ರಾಧಾರಣೆಯನ್ನು ಧಾರ್ಮಿಕ ನೆಲೆಯಲ್ಲಿ ಮಾಡಲಾಗುತ್ತಿದೆ.

ಆಯುರ್ವೇದದಲ್ಲಿ ಅಗ್ನಿ, ಕರ್ಮ ಚಿಕಿತ್ಸಾಪ್ರಕಾರವಿದೆ. ಶರೀರದ ಕೆಲ ಭಾಗಗಳಿಗೆ ಬೆಳ್ಳಿ, ತಾಮ್ರ ಇತ್ಯಾದಿ ಲೋಹಗಳನ್ನು ಹದವಾಗಿ ಬಿಸಿ ಮಾಡಿ ಇಡುವುದರಿಂದ ರೋಗ ನಿವಾರಣೆಯಾಗುತ್ತದೆ. ಆಷಾಢ ಮಾಸ



ದಲ್ಲಿ ರೋಗ ಹೆಚ್ಚು, ಹೀಗಾಗಿ ಮುಂಜಾಗರೂಕತಾ ಕ್ರಮವಾಗಿ ಮತ್ತು ರೋಗ ನಿರೋಧಕ ಶಕ್ತಿ ಹೆಚ್ಚಳಕ್ಕೆ ತಪ್ತ ಮುದ್ರಾಧಾರಣೆ ಪೂರಕ.

ಪ್ರಪಂಚವನ್ನು ಪ್ರಯಾಸವಿಲ್ಲದೆ ಪಾಲಿಸುತ್ತ ಪಾಲ್ಗಡಲಲ್ಲಿ ಪವಡಿಸಿದವನೇ ಪರಮಾತ್ಮನು, ಕಾಣುವ, ಕಾಣದ ಜಗವೆಲ್ಲ ಈತನ ಅಧೀನವೇ. ಈತನೇ ಪೃಥ್ವ್ಯಾದಿ ಸಕಲ ಭೂತಾಭೂತಗಳ ಚಾಲಕ, ಪ್ರೇರಕ, ಪರಿಪಾಲಕ ಎಲ್ಲರ ಒಡಲೊಳಗೆ ತಾನೇ ಪ್ರಧಾನನಾಗಿರುವುದರಿಂದ ಈತ ವಿಷ್ಣು.

ಅಂತರಂಗದಲ್ಲಿ ಶ್ರೀರಂಗನ ಅನಂಗ ಸುಖಾನುಭವನ್ನು ಹೊಂದುತ್ತ. ಅವನ ಜ್ಞಾನಾಂಗ ದಾನಂದವನ್ನು ಇಚ್ಛಿಸುತ್ತ ಹೊಂದುವ ಜ್ಞಾನ ದೀಕ್ಷೆಯೇ ಅಂತರ್ದೀಕ್ಷೆ. ಅಂತರಂಗದಲ್ಲಿ ಶ್ರೀ ಹರಿಯನ್ನು ಕಾಣಲು ದೇಹದ ಹೊರಗೆ ಹೊರುವ ದೀಕ್ಷೆಯೇ ಬಾಹ್ಯದೀಕ್ಷೆ ಜ್ಞಾನಿ-ಅಜ್ಞಾನಿಗಳೀರ್ವರಿಗೂ ಈ ದೀಕ್ಷೆ ಅನಿವಾರ್ಯ. ಈ ದೀಕ್ಷೆಯಲ್ಲಿ ಮತ್ತೆರೆಡು ಉಪ ಬೇಧಗಳಿವೆ. ಒಂದು ಊರ್ಧ್ವ ಪುಂಡ್ರಧಾರಣೆ ಮತ್ತೊಂದು ತಪ್ತ ಮುದ್ರಾಧಾರಣೆ ವಿಷ್ಣು ಭಕ್ತಿಯ ಪರಿಪಕ್ವ ಅವಸ್ಥೆಗೆ ಸಲ್ಲುವ ಒಂದು ಬಿರುದು.



ಸೂರ್ಯ ದಕ್ಷಿಣಕ್ಕೆ ವಾಲುತ್ತಿರಲು ಭಗವಂತ ಶೇಷನೆಡೆಗೆ ವಾಲುತ್ತಾನೆ. ಅಂದರೆ "ಭಗವಂತ ಮಲಗಿದಾಗ ನಾವು ಮಲಗಿ ಆತನನ್ನು ಮರೆಯಬಾರದು. ಆತನ ಚಿಹ್ನೆಯಾದ ಶಂಖ ಮತ್ತು ಚಕ್ರಗಳು ನಮ್ಮದೇಹದಲ್ಲಿ ಅಚ್ಚೊತ್ತಿರಬೇಕು'' ಎಂಬ ಭಾವನೆಯಿಂದಲೆ ಶಯನೈ ಕಾದಶಿಯಂದು ತಪ್ತ ಮುದ್ರಾಧಾರಣೆ ಸಂಸ್ಕಾರ ಬೆಳೆದು ಬಂದಿದೆ.




"ವ್ಯಕ್ತಿಗಳಿಗಿಂತ ಸಂಸ್ಥೆ ದೊಡ್ಡದು'' ಎಂದು ಆಚಾರ್ಯ ಮಧ್ವರು ಹಾಕಿಕೊಟ್ಟ ಸತ್ಪರಂಪರೆಯಿಂದ ತಪ್ತ ಮುದ್ರಾಧಾರಣೆಯಲ್ಲಿ ಮಠಗಳಿಗೆ ಪ್ರಧಾನ್ಯ ತಾವೇ ಮುದ್ರೆ ಹಾಕಿಕೊಳ್ಳುವುದು ಗುರು ಪೀಠಗಳಿಗೆ ತೋರುವ ಅನಾದರವಾಗುತ್ತದೆ. ಹೀಗಾಗಿ ಚಾತುರ್ಮಾಸ ಪ್ರಾರಂಭದ ಏಕಾದಶಿಯಂದು ಪರಮಹಂಸ ಪೀಠಾಧೀಶರಿಂದಲೇ ತಪ್ತ ಮುದ್ರಾಧಾರಣೆಯನ್ನು ಸ್ವೀಕರಿಸಬೇಕೆಂಬ ನಿಯಮವಿದೆ.

ಕಾಯಿಕ, ವಾಚಿಕ, ಮಾನಸಿಕ ಯಾವುದೇ ತರವಾದ ಸಾಧನೆಗೆ ದೇಹ ಅತ್ಯವಶ್ಯಕ. ದೇಹದಿಂದಲೇ ಯಜ್ಞ, ದಾನ, ತಪಸ್ಸು, ದೇಹದಿಂದಲೇ ಶ್ರವಣ, ಮನನ, ಧ್ಯಾನ,ಒಟ್ಟಾರೆ ದೇಹದಿಂದಲೇ ಎಲ್ಲ ಒಂದೆಡೆ ದೇಹ ಹೇಯ, ತುಚ್ಛ, ಮೋಹದ ಕುಳಿ, ಮಮತೆಯ ಬೇಲಿ ಎಂಬೆಲ್ಲ ನಿಂದನೆ, ನಿಂದಿತ ದೇಹವನ್ನು ಪವಿತ್ರ ಸಾಧನೆಗೆ ಅಣಿಗೊಳಿಸಲು ಸಂಸ್ಕಾರಬೇಕು. ದೇಹಸಂಸ್ಕಾರ ನಾನಾ ಬಗೆ, ಜಾತಕರ್ಮ ಉಪನಯನಾದಿಗಳು, ಸ್ನಾನಶೌಚಾದಿ, ಶುಚಿ ಭೋಜನಾದಿ, ಉಪವಾಸಾದಿ, ಸ್ವಯಂ ಶ್ರೀಹರಿಯ ಆಯುಧಗಳ ಮುದ್ರಾಧಾರಣ, ಇದರಿಂದ ಸಂಸ್ಕಾರಗೊಂಡ ದೇಹ ಅಂತಃಸತ್ವವೆಂಬ ಶುದ್ಧಿ ಪಡೆದು ಸಾಧನಕ್ಕೆ ಹದಗೊಳ್ಳುತ್ತದೆ.



ಆ ಬಾಲ ವೃದ್ಧರಾದಿಯಾಗಿ ಸ್ತ್ರೀ ಪುರುಷ ಭೇದವಿಲ್ಲ ಎಲ್ಲರೂ ತತ್ವ ಮುದ್ರೆಗಳನ್ನು ಹಾಕಿಸಿಕೊಳ್ಳುವ ಮೊದಲು ನಮಗಿರಬೇಕಾದ ಅರ್ಹತೆಗಳೇನು ಎಂಬುದರ ಕುರಿತು ಆಲೋಚಿಸಬೇಕಾದದ್ದು ನಮ್ಮ ಆದ್ಯ ಕರ್ತವ್ಯ.

ಆಸ್ತಿಕ ಸತ್ಯವಾದಿಯಾಗಿ, ಪರಾಧಾರ, ಪರದ್ರವ್ಯ, ಪರದ್ರೋಹಗಳಿಂದ ದೂರ ವಿರಬೇಕು. ಭಗವಂತನ ಒಲುಮೆಗಾಗಿ ಈ ಕ್ರಿಯೆಯೆಂಬ ತಿಳುವಳಿಕೆಯೊಡನೆ ಈ ವರೆಗೆ ಮಾಡಿದ ಪುಣ್ಯವೆಲ್ಲ ಇದರಿಂದ ಉಳಿಯುತ್ತದೆ ಎಂಬ ಭಾವ ಬೇರೂರಿರಬೇಕು. ಹೀಗೆ ಈ ಎಲ್ಲ ಗುಣಗಳಿಂದ ಯುಕ್ತನಾದವನು ಅಥವಾ ಯುಕ್ತನಾಗಲು ಅಪೇಕ್ಷಿಸಿದವನು ತಪ್ತ ಮುದ್ರೆಯನ್ನು ಧರಿಸಿಕೊಳ್ಳಲು ಅಧಿಕಾರಿಯಾಗುತ್ತಾನೆ.


ಶಂಖಮುದ್ರ


ಚಕ್ರ ಮುದ್ರ


ಗದ ಮುದ್ರ


ಪದ್ಮ ಮುದ್ರ


ನಾರಾಯಣ ಮುದ್ರ

ತಪ್ತ ಮುದ್ರಾಧಾರಣೆಯ ಮಹತ್ವವು ಋಗಾದಿ ವೇದಗಳಲ್ಲೂ, ಪದ್ಮ ಮೊದಲಾದ ಪುರಾಣಗಳಲ್ಲೂ ವಿಶೇಷವಾಗಿ ವರಹಾಪುರಾಣದ ಚಾತುರ್ಮಾಸ ಮಾಹಾತ್ಮೆಯಲ್ಲಿ, ಮಹಾಭಾರತಾದಿ ಇತಿಹಾಸದಲ್ಲೂ ವರ್ಣಿತವಾಗಿದೆ. ಶ್ರೀಮನ್ ಮಧ್ವಾಚಾರ್ಯರು ಸುದರ್ಶನ

ದ್ವಯ (ತಪ್ತ ಮುದ್ರೆ ಮತ್ತು ಶಾಸ್ತ್ರ) ತಮ್ಮ ಶಿಷ್ಯರಿಗೆ ಅನುಗ್ರಹಿಸಿದ ವಿವರ ಸುಮಧ್ವ ವಿಜಯದಲ್ಲಿ ಉಕ್ತವಾಗಿದೆ. ಅಂತೆಯೇ ಶ್ರೀ ವಾದಿರಾಜ ಮಹಾಸ್ವಾಮಿಗಳ,ಚಕ್ರಸ್ತುತಿ ಶ್ರೀವಿಜಯೀಂದ್ರರ ತಪ್ತ ಚಕ್ರ ಮೀಮಾಂಸೆ, ಶ್ರೀ ಸತ್ಯಾಭಿ ನವತೀರ್ಥರ ರಾಮಾಮೃತ ಮಹಾರ್ಣವ, ಶ್ರೀ ಕೃಷ್ಣಾಚಾರ್ಯರ ಸ್ಮೃತಿ ಮುಕ್ತಾವಲಿ ಹಾಗೂ ತಪ್ತ ಚಕ್ರ ಭೂಷಣಗಳಲ್ಲಿ ವಿವರವಾಗಿ ತಿಳಿಸಲಾಗಿದೆ.

ಸೇರಿ ಸಂತಪ್ತ ಸುದರ್ಶನ ಶಂಖದ ಧಾರಣವನು ಭುಜಯುಗದೊಳು ಮಾಡಿ - ಎಂದು ಭಾವೀ ಸಮೀರ ಶ್ರೀ ವಾದಿರಾಜರು, ಅಂಕಿತವಿಲ್ಲದ ದೇಹ ನಿಷೇಧ ಅಂಕಿತವಿಲ್ಲದೆ ಕಾವ್ಯ ಶೋಭಿಸದು ಅಂಕಿತವಿಲ್ದೇ ಇರಬಾರದೆಂದು ಚಕ್ರಾಂಕಿತವನು ಮಾಡಿ ಎನ್ನಂಗಕೆ ಪಂಕಜನಾಭ ಶ್ರೀ ಪುರಂದರವಿಠಲನ ಅಂಕಿತವೆನಗಿತ್ತ ಗುರುವ್ಯಾಸ ಮುನಿರಾಯ ಎಂದು ದಾಸಶ್ರೇಷ್ಠ ಪುರಂದರದಾಸರು ಉಗಾಭೋಗವೊಂದನ್ನೇ ರಚಿಸಿದ್ದಾರೆ.

**ಹಿನ್ನೆಲೆ:**

ಹಿಂದೊಮ್ಮೆ ಇಂದ್ರಾದಿ ದೇವತೆಗಳೆಲ್ಲ ವೃತಾಸುರನಿಂದ ಸೋತಾಗ ಮಹಾವಿಷ್ಣುವಿನ ಬಳಿ ಹೋಗಿ ಪ್ರಾರ್ಥಿಸಲಾಗಿ, "ಎಲೈ ದೇವತೆಗಳೇ, ನೀವೆಲ್ಲ ನನ್ನ ಶಂಖ, ಚಕ್ರದ ಲಾಂಛನಗಳನ್ನು ಧರಿಸಿ ದೈತ್ಯರೊಡನೆ ಯುದ್ಧ ಮಾಡಿರಿ ನಿಮಗೆ ವಿಜಯ ಲಭಿಸುವುದು" ಎಂದು ಶ್ರೀಹರಿಯು ಅಪ್ಪಣೆಯಿತ್ತನು. ಇಂದ್ರಾದಿಗಳು ಇದರಿಂದ ಕೃತಾರ್ಥರಾದರು. ಅಂದಿನಿಂದ ಶತ್ರು ಕಾಮ, ಕ್ರೋಧದಂತಹ ವೈರಿಗಳ ಜಯಕ್ಕೆ ಮುದ್ರಾಧಾರಣೆ ಅಗತ್ಯ ಎಂಬ ನಿಯಮ ವೈಷ್ಣವರಿಗೆ ಶಾಶ್ವತವಾಯಿತು. ಸ- ಮುದ್ರ ರಷ್ಟೇ ಭವ ಸಮುದ್ರವನ್ನು ದಾಟಬಲ್ಲರು ಆ - ಮುದ್ರರಲ್ಲ ಎಂಬುದು ತಾತ್ಪರ್ಯ ಯಮದೇವನಿಂದ ಪವಿತ್ರ ಏಕಾದಶಿ ಭೂವಿಗೆ ಬಂದಂತೆ, ಇಂದ್ರಾದಿ ದೇವತೆಗಳಿಂದ ತಪ್ತಮುದ್ರಾಧಾರಣೆ ಧರೆಗೆ ಬಂತು.

ಸುದರ್ಶನ ಹೋಮವನ್ನು ಆಚರಿಸಿ ಶಾಸ್ತ್ರೋಕ್ತ ಕ್ರಮದಲ್ಲಿ ಉತ್ತಮ ಲೋಹದಿಂದ ತಯಾರಿಸಿದ ಚಕ್ರಾದಿಗಳನ್ನು ಪೂಜಿಸಿ, ಅಭಿಮಾನಿ ದೇವತೆಗಳಾದ ದುರ್ಗಾ ಮತ್ತು ಶ್ರೀದೇವಿಯರನ್ನು ಸ್ಮರಿಸಿ ತಮೋ ರಜೋ ಗುಣಗಳು ನಾಶಪಡಿಸುವಂತೆ ಪ್ರಾರ್ಥಿಸಿ ಏಕಾಗ್ರಚಿತ್ತದಿಂದ ಬಲ ಭುಜದಲ್ಲಿ ಚಕ್ರವನ್ನು, ಎಡಭುಜದಲ್ಲಿ ಶಂಖವನ್ನು ಹೀಗೆಯೇ ಬಲಸ್ತನ ಭಾಗದಲ್ಲಿ ಚಕ್ರವನ್ನು ಎಡ ಸ್ತನ ಭಾಗದಲ್ಲಿ ಶಂಖವನ್ನು ಹೊಟ್ಟೆಯ ಮೇಲೆ ಒಂದು ಚಕ್ರವನ್ನು ಮುದ್ರಿಸಬೇಕು. ಉಪವೀತರಾಗದ ಬಾಲಕರಿಗೆ ಹೊಟ್ಟೆಯ ಮೇಲೆ ಮಾತ್ರ ಒಂದು ಚಕ್ರವನ್ನು ಸ್ತ್ರೀಯರಿಗೆ ಎಡ, ಬಲ ಕೈಗಳ ಮೇಲೆ ಮಾತ್ರ ಮುದ್ರಿಸಬೇಕು. ಭಗವಂತನ ಶಂಖಸ್ಪರ್ಶದಿಂದ ಧ್ರುವ ಮಹಾರಾಜನು ವಾಸುದೇವನನ್ನು ಸ್ತುತಿಸಿದ. ನಾರಾಯಣನ ಚಕ್ರವೇ ಏಕಾದಶಿಯ ಹಿರಿಮೆಯನ್ನು ಜಗಕೆ ತೋರಿತು.

ಅರಿವಿಗೆ ಅನುಗುಣವಾದ ಆಚಾರ, ಅದುವೆ ಜ್ಞಾನದಿಂದ ಕೂಡಿದ ಕರ್ಮಯೋಗ, ಇದಕ್ಕೆ ಉತ್ತಮ ಉಪಾಯ ದೇಹಕ್ಕೆ ನಿಯಮ ಬದ್ಧತೆಯ ದೀಕ್ಷೆ, ಅನುಭವ, ಅನುಭಾವ ಎಲ್ಲಕ್ಕೂ ದೇಹವೇ ಆಧಾರ. ಸಾಧನದ ದೇಹವಿದು ನೀ ದಯದಿಂದ ಕೊಟ್ಟಿದ್ದು ಸಾಧಾರಣವಲ್ಲ ಎಂದಿದ್ದಾರೆ ದಾಸರು, ಬುದ್ಧಿ ಮನಸ್ಸುಗಳಿರಲು ದೇಹ ಬೇಕು,ಎಲ್ಲ ಸಾಧನೆಗೆ ಅದು ಬೇಕು ಅದನ್ನು ಪವಿತ್ರವಾಗಿಡಬೇಕು, ಅದಕ್ಕೆ ಸಂಸ್ಕಾರದ ಲೇಪ ಕೊಡಬೇಕು.

ಆಗಲೇ ಮಾಡಿದ ಹಸಿಯಾಗಿಯೇ ಉಳಿದಿರುವ ಮಡಿಕೆಯಲ್ಲಿ ನೀರು ಹಾಕಿದರೆ ಅದರಲ್ಲಿ ಒಂದು ಹನಿ ನೀರೂ ನಿಲ್ಲದೆ ಹೇಗೆ ಸೋರಿ ಹೋಗುತ್ತದೆಯೋ. ಅದರಂತೆ ಈ ದೇಹವೆಂಬ ಮಣ್ಣಿನ ಮಡಿಕೆಗೆ ತಪ್ತ ಮುದ್ರಾಧಾರಣೆ ಎಂಬ ಕಾವು (ಸಂಸ್ಕಾರ) ಕೊಟ್ಟಾಗ ಮಾತ್ರ ಅದರಲ್ಲಿ ಪುಣ್ಯವೆಂಬ ನೀರು ನಿಲ್ಲುತ್ತದೆ. ಯಾವ ವಸ್ತು ಯಾರ ಅಧೀನವಾಗಿರುತ್ತದೆಯೋ ಅದರ ಮೇಲೆ ಅವರ ಚಿಹ್ನೆ (ಸೀಲ್) ಹಾಕುವ ನಿಯಮವಿದೆ. ಈ ದೇಹ (ನಮ್ಮದಲ್ಲ) ನಮ್ಮ ಅಧೀನವಾದದ್ದಲ್ಲ. ಭಗವಂತನ ಅಧೀನವಾದದ್ದು, ಭಗವಂತನ ಅಧೀನವಾದ ಈ ದೇಹದ ಮೇಲೆ ಭಗವಂತನ ಚಿಹ್ನೆಗಳಾದ ಶಂಖ ಚಕ್ರಗಳು ಮೂಡಬೇಕು.

ಈ ದೇಹಕ್ಕೆ ಎಷ್ಟು ರೀತಿಯಿಂದ ವಿಹಿತವಾದ ಕ್ಲೇಶಗಳನ್ನು (ದಂಡನೆಯನ್ನು) ಕೊಡುತ್ತೇವೆಯೋ ಅದೂ ಒಂದು ತಪಸ್ಸು. ಹಿಂದೆ ಋಷಿ ಮುನಿಗಳು ಪಂಚಾಗ್ನಿಗಳ ಮಧ್ಯದಲ್ಲಿ ತಪಸ್ಸು ಆಚರಿಸುತ್ತಿದ್ದರೂ ನಮಗೆ ಆ ವಿಧವಾದ ತಪಸ್ಸನ್ನು ಮಾಡಲು ಆಗದಿದ್ದರೂ ಸಹ, ಈ ಸಣ್ಣದಾದ ತಾಪವನ್ನು ಸಹನೆ ಮಾಡಿದರೂ ಅದೊಂದು ತಪಸ್ಸಾಗುತ್ತದೆ. ವೈಷ್ಣವತ್ವಕ್ಕೆ ದ್ಯೋತಕವಾದ ಅತ್ಯಂತ ಪ್ರಮುಖ ಬಾಹ್ಯಲಕ್ಷಣವೆಂಬುದು 'ತಪ್ತ ಮುದ್ರಾಧಾರಣ' ದ ಹಿರಿಮೆ.

ಇವರು ವೈಷ್ಣವರು ಎಂದು ಇತರರು ಗುರುತಿಸುವುದಕ್ಕಿಂತಲೂ ಮುಖ್ಯವಾಗಿ ತಾನು ವಿಷ್ಣು ಭಕ್ತನೆಂದು ಸ್ವಂತಕ್ಕೆ ಮರೆಯದಿರಲೆಂದು ಹುಟ್ಟಿಕೊಂಡ ಈ ಪರಂಪರೆ ನಿಜಕ್ಕೂ ಅರ್ಥಪೂರ್ಣ ಅನುಸಂಧಾನವಿದ್ದರೆ ಅಧಿಕ ಪುಣ್ಯ ಮುದ್ರಾಧಾರಣೆಯ ಮುದ್ರೆಯಲ್ಲಿ ವೈದಿಕ, ಆಧ್ಯಾತ್ಮಿಕ ದೃಷ್ಟಿ ಕೋನ ವಿದ್ದಂತೆ ಸೂಕ್ಷ್ಮವಾಗಿ ವೈಜ್ಞಾನಿಕ,ವೈದಕೀಯ ದೃಷ್ಟಿವಿಸ್ಮಯಕಾರಿ ಯಾದದ್ದು.

ಚಾತುರ್ಮಾಸ್ಯ ವ್ರತಾರಂಭಕ್ಕೆ ಮೊದಲು ದೇಹ ಶುದ್ಧಿಗಾಗಿ ನಡೆಯುವ ತಪ್ತ ಮುದ್ರಾಧಾರಣೆಯ ಹಿಂದೆ ಬರಿಯ ಆಧ್ಯಾತ್ಮಿಕ ಧಾರ್ಮಿಕ ಸಂಪ್ರದಾಯ ಮಾತ್ರವಲ್ಲ ವೈಜ್ಞಾನಿಕ ಕಾರಣ, ಧೋರಣೆಗಳಿವೆ. ಅಕ್ಯುಪ್ರೆಶರ್‌ನಂತೆ ಕಾರ್ಯನಿರ್ವಹಿಸುವ ತಪ್ತ ಮುದ್ರಾಧಾರಣೆ ದೇಹದ ಅಂಗಾಂಗಗಳ ಅಸಮತೋಲನ, ಉಷ್ಣತೆ ಜತೆಗೆ ಒತ್ತಡ ನಿವಾರಿಸಿ ರೋಗ ನಿರೋಧಕ ಶಕ್ತಿ ಹೆಚ್ಚು ಮಾಡುವಲ್ಲಿ ಪರಿಣಾಮಕಾರಿಯಾಗಿದೆ.

ರೋಗಾಣುವನ್ನು ದೇಹಕ್ಕೆ ಚುಚ್ಚುಮದ್ದಿನ ಮೂಲಕ ಭೂ ಬಿಟ್ಟು ರೋಗದ ವಿರುದ್ಧ ಹೋರಾಡಲು ದೇಹಕ್ಕೆ ಶಕ್ತಿ ಕೊಡುವಂತೆ ದೇಹದ ಪರಿಶುದ್ಧತೆಗಾಗಿ ಪ್ರತಿಯೊಬ್ಬರು ತಪ್ತಮುದ್ರಾಧಾರಣೆ ಮಾಡಿಸಿಕೊಳ್ಳಬೇಕು.

ಚಕ್ರಮುದ್ರೆಯನ್ನು ಧರಿಸುವಾಗ ಪಠಿಸಬೇಕಾದ ಮಂತ್ರ: ಸುದರ್ಶನ ಮಹಾಜ್ವಾಲ ಕೋಟಿ ಸೂರ್ಯಸಮಪ್ರಭ ಅಜ್ಞಾನಾಂಧಸ್ಯ ಮೇ ನಿತ್ಯಂ ವಿಷ್ಣೋ ಮಾರ್ಗಂ ಪ್ರದರ್ಶಯ ॥

ಶಂಖಮುದ್ರೆಯನ್ನು ಧರಿಸುವಾಗ ಪಠಿಸಬೇಕಾದ ಮಂತ್ರ :
ಪಾಂಚಜನ್ಯ ನಿಜಧ್ವಾನಧ್ವಸ್ತಪಾತಕಸಂಚಯ
ತ್ರಾಹಿ ಮಾಂ ಪಾಪಿನಂ ಘೋರಸಂಸಾರಾರ್ಣವಪಾತಿನಮ್॥

(ವಿವಿಧ ಮೂಲಗಳಿಂದ)



# ವಟ ಸಾವಿತ್ರಿ ವ್ರತ

ಶ್ರೀಮತಿ. ಮಾಧುರಿ ದೇಶಪಾಂಡೆ
94810 70245

ಅಲ್ಪಾಯುಷಿ ಪತಿಯನ್ನು ದೀರ್ಘ ಕಾಲ ಬದುಕುವಂತೆ ಮಾಡಲು ಸಾವಿತ್ರಿಯು ಮಾಡಿದ ವ್ರತವೇ ವಟ ಸಾವಿತ್ರ ವ್ರತ.ಈ ವ್ರತವನ್ನು ಮೂರು ದಿನಗಳ ತ್ರಯೋದಶಿ, ಚತುರ್ದಶಿ, ಹುಣ್ಣಿಮೆ ಯಂದು ಉಪವಾಸ ಮಾಡಿ ಮಾಡುತ್ತಾರೆ.ಜ್ಯೇಷ್ಠಮಾಸದ ಪೌರ್ಣಮೆಯ ದಿನದಂದು ವಟವೃಕ್ಷವನ್ನು ಚಂದ್ರೋದಯ ಕಾಲದಲ್ಲಿ ವಟದ ಬುಡದಲ್ಲಿ ಪೂಜಿಸಿ ಸತ್ಯವಾನ ಸಾವಿತ್ರಿಯ ಉಪಾಖ್ಯಾನವನ್ನು ಕೇಳುತ್ತಾರೆ.

ಹುಣ್ಣಿಮೆಯ ದಿನದಂದು ಉಪವಾಸ ಮಾಡಿ ಶುದ್ಧವಾದ ನೀರನ್ನು ವಟವೃಕ್ಷಕ್ಕೆ ಸಿಂಚನ ಮಾಡಬೇಕು. ನಂತರ ದಾರದಿಂದ ಸುತ್ತುತ್ತಾ ನೂರೆಂಟು ಪ್ರದಕ್ಷಿಣೆಯನ್ನು ಮಾಡಬೇಕು. ನಂತರ ಚಂದ್ರ ನಿಗೆ ಅರ್ಘ್ಯ ಕೊಡುತ್ತಾರೆ. ಮೂರು ದಿನಗಳ ವ್ರತವನ್ನು ಮಾಡಿ ಮೂರು ದಿನ ಬ್ರಾಹ್ಮಣರಿಗೆ ಭೋಜನ ಮಾಡಿಸಬೇಕು. ಇದು ಹಿಂದಿನ ಕಾಲ ದಲ್ಲಿ ಮಾಡುತ್ತಿದ್ದ ವಿಧಾನ.

ಇಂದು ಮನೆಗಳಲ್ಲಿ ವಟಸಾವಿತ್ರಿ ಪಟವನ್ನು ಇಟ್ಟು ಪೂಜಿಸಿ ನೇರಳೆ, ಅರಿಶಿನ, ಕುಂಕುಮ, ಮಂತ್ರಾಕ್ಷತೆ, ಹೂವುಗಳಿಂದ ಪೂಜಿಸಿ ನೇರಳೆ ಹಣ್ಣಿನಿಂದ ಉಡಿ ತುಂಬಿ ಬಾಳೆ ಹಣ್ಣುಗಳನ್ನು ನೈವೇದ್ಯ ಮಾಡು ತ್ತಾರೆ. ಪತಿಯ ದೀರ್ಘಾಯುಷ್ಯದ ಆಯುಷ್ಯವನ್ನು ಬೇಡುತ್ತಾರೆ.

### ವಟ ಸಾವಿತ್ರಿಯ ಕಥೆಯನ್ನು ಪಠಣ / ಶ್ರವಣ ಮಾಡಬೇಕು:

ಸತ್ಯವಾನ ಸಾವಿತ್ರಿಯ ಕಥೆಯು ಮಹಾಭಾರತದ ವನ ಪರ್ವ ದಲ್ಲಿ ಬರುತ್ತದೆ. ಮಹಾಭಾರತದಲ್ಲಿ ಮಾರ್ಕಾಂಡೇಯ ಮುನಿಗಳು ಯುಧಿಷ್ಠಿರನಿಗೆ ಹೇಳುತ್ತಾರೆ. ಅಶ್ವಪತಿ ಮಹಾರಾಜನ ಮಗಳಾಗಿ ಸವಿತೃ ದೇವತೆ ಸೂರ್ಯ ಪೂಜೆಯ ಫಲವಾಗಿ ಹುಟ್ಟುತ್ತಾಳೆ. ಸಾವಿತ್ರಿಯು ಬಹಳ ಸುಂದರಳಾಗಿಯೂ, ಸಕಲ ಶಾಸ್ತ್ರಗಳನ್ನು ತಿಳಿದವಳಾಗಿಯೂ ಇರುತ್ತಾಳೆ. ಬಹಳಷ್ಟು ಹುಡುಕಿದರೂ ಸಾವಿತ್ರಿಯ ರೂಪ ಮತ್ತು ವಿದ್ಯೆಗೆ ತಕ್ಕ ವರ ದೊರಕದ ಕಾರಣ ಮದುವೆಯ ವಯಸ್ಸು ಬಂದಾಗ ಅವಳ ತಂದೆಯು ತನ್ನನ್ನೇ ವರನನ್ನು ಸ್ವತಃ ಹುಡುಕಿಕೊಂಡು ಬರಲು ಕಳು ಹಿಸುತ್ತಾರೆ. ಆಗ ಅವಳಿಗೆ ಸಾಲ್ವ ರಾಜ್ಯದ ದ್ಯುಮತ್ಸೇನ ಮಗ ಸತ್ಯ ವಾನನ್ನು ಪತಿಯನ್ನಾಗಿ ಕಾಣುತ್ತಾಳೆ. ಸತ್ಯವಾನನಿಗೆ ಅಲ್ಪಾಯುಷ್ಯವಿದೆ ಎಂಬುದನ್ನು ನಾರದರು ಹೇಳಿರುತ್ತಾರೆ. ಆದರೂ ಸಹ ಒಲಿದ ಅವನನ್ನೇ ಮದುವೆಯಾಗಿ ಅತ್ತ ಮಾವಂದಿರ ಸೇವೆ ಮಾಡುತ್ತಾ ವನದಲ್ಲಿಯೇ ಇರುತ್ತಾಳೆ. ನಾರದರು ಅವಳಿಗೆ ಅವಳ ಪತಿಯ ಸಾವಿನ ದಿನದ ಬಗೆಗೆ ಹೇಳಿರುತ್ತಾರೆ. ಪತಿವ್ರತೆಯೂ ಮತ್ತು ಶಾಸ್ತ್ರ ಪಾರಂಗತಳೂ ಆದ ಸಾವಿತ್ರಿಯು ಪತಿಯ ಸಾವಿನ ದಿನವು ಹತ್ತಿರ ಬರುತ್ತಿದ್ದಂತೆ ವ್ರತವನ್ನು ಮಾಡುತ್ತಾಳೆ. ಮೂರು ದಿನಗಳ ವ್ರತವನ್ನು ಕಟ್ಟುನಿಟ್ಟಾಗಿ ಮಾಡಿರುತ್ತಾಳೆ. ಹುಣ್ಣಿಮೆಯ ದಿನ ವ್ರತದ ಕೊನೆ ದಿನವಾಗಿರುತ್ತದೆ ಅಂದು ವ್ರತದ ನಿಯಮದಲ್ಲಿ ಉಪವಾಸವಿರುತ್ತದೆ. ಉಪವಾಸವಿದ್ದರೂ ಪತಿಯೊಡನೆ ಕಾಡಿಗೆ ಹೊರಡುತ್ತಾಳೆ. ಅಂದು ಸಂಜೆಯ ಹೊತ್ತಿನವರೆಗೂ ಸಮಿತ್ತನ್ನು ಆರಿಸಿ ಕಟ್ಟಿಕೊಂಡ ಸತ್ಯವಾನನಿಗೆ ತಲೆ ಶೂಲೆ ಯಾಗುತ್ತದೆ ಆಗ ಅವನು ಅಲ್ಲಿಯೇ ವಿಶ್ರಾಂತಿ ಪಡೆಯುವುದಾಗಿ ಹೇಳಿ ವಟ ವೃಕ್ಷದ ಕೆಳಗೆ ಪತ್ನಿಯ ತೊಡೆಯ ಮೇಲೆ ಮಲಗುತ್ತಾನೆ. ತನ್ನ ಕೆಲಸವನ್ನು ಸಮ ಯಕ್ಕೆ ಮಾಡುವ ಯಮಧರ್ಮನೇ ಸ್ವತಃ ಈ ಪುಣ್ಯವಂತನಾದ ಸತ್ಯವಾನನ ಜೀವವನ್ನು ಹರಣ ಮಾಡಲು ಬಂದಿರುತ್ತಾನೆ. ಆಗ ಸಾವಿತ್ರಿಯು ಯಮಧರ್ಮ ನೊಂದಿಗೆ ಮಾತನಾಡುತ್ತಾಳೆ.ಅವನೊಂದಿಗೆ ಧರ್ಮದ ಶಾಸ್ತ್ರದ ಮಾತು ಗಳನ್ನಾಡುತ್ತಾ ಅವನ ಮೆಚ್ಚುಗೆಗೆ ಪಾತ್ರಳಾಗಿ ಅವನ ಮನವನ್ನು ಗೆದ್ದು ವರಗಳನ್ನು ಪಡೆಯುತ್ತಾಳೆ. ಯಮಧರ್ಮನು ಪ್ರಸನ್ನನಾಗಿ ಪತಿಯ ಜೀವವನ್ನು ಬಿಟ್ಟು ಬೇರೆ ಯಾವುದೇ ವರವನ್ನು ಕೇಳು ಎಂದಾಗ ತವರು ಮನೆ ಮತ್ತು ಅತ್ತೆ ಮನೆ ಎರಡರ ಏಳಿಗೆಯ ವರಗಳನ್ನು ಬೇಡಿ ಎರಡೂ ಮನೆತನದ ಅಭಿವೃದ್ಧಿಯನ್ನು ಬಯಸು ತ್ತಾಳೆ. ಕೊನಗೆ ತನ್ನ ವಿವೇಕಯುತ ಮಾತುಗಳನ್ನು ಆಡುತ್ತಾ ಯಮಧರ್ಮನ ಅನುಗ್ರಹಕ್ಕೆ ಪಾತ್ರಳಾಗಿ ಪತಿಯ ಪ್ರಾಣವನ್ನು ಕೂಡ ಹಿಂಪಡೆಯುತ್ತಾಳೆ. ವಟವೃಕ್ಷದ ಬುಡದಲ್ಲಿ ಬ್ರಹ್ಮದೇವನು, ಮಧ್ಯದಲ್ಲಿ ನಾರಾಯಣನೂ ಮತ್ತು ಆಗ್ರ ಭಾಗದಲ್ಲಿ ಶಿವನು ವಾಸವಾಗಿರುವನು. ವಟವೃಕ್ಷದ ಸಮಸ್ತ ಭಾಗಗಳಲ್ಲಿ ಸಾವಿತ್ರಿಯ ವಾಸವಿರುವುದು ಎಂಬ ನಂಬಿಕೆ ಇದೆ. ಹೀಗೆ ವಟವೃಕ್ಷದ ಕೆಳಗೆ ಪತಿಯ ಪ್ರಾಣವನ್ನು ಯಮಧರ್ಮನಿಂದ ಪಡೆದು ಬಂದ ಸಾವಿತ್ರಿಯ ಕಥೆ ಯನ್ನು ಕೇಳಿ ವಟ ಸಾವಿತ್ರಿ ವ್ರತವನ್ನು ಆಚರಿಸುತ್ತಾರೆ.

ಇದು ವಟ ಸಾವಿತ್ರಿಯ ಕಥೆಯಾಗಿದೆ ಸಾಮಾನ್ಯವಾಗಿ ಹಿಂದೂ ಧರ್ಮ ದಲ್ಲಿ ಯಾವುದೇ ಹಬ್ಬವೆಂದರೆ ಪತಿಯ ಧೀರ್ಘಾಯುಷ್ಯದ ಪತಿಯ ಸೌಭಾಗ್ಯದ ವ್ರತಗಳೇ ಆಗಿವೆ ಎಂಬೆಲ್ಲಾ ಆಕ್ಷೇಪವನ್ನು ಕೇಳುತ್ತಿರುತ್ತೇವೆ. ಆದರೆ ನಾವು ಗಮನಿಸಬೇಕಾದ್ದು ಹೆಣ್ಣು ಮಕ್ಕಳು ಆ ಕಾಲದಿಂದಲೂ ಇಂದಿನವರೆಗೂ ಶಕ್ತಿ ಶಾಲಿಗಳಾಗಿ ಸಮರ್ಥವಾಗಿ ಯಾವುದೇ ಕ್ಷೇತ್ರದಲ್ಲಿ ಪತಿಯ ಬೆನ್ನೆಲುಬಾಗಿ ನಿಂತು ಪತಿಯ ಶಕ್ತಿಯಾಗಿ ನಡೆದಿದ್ದಾಳೇ. ವಟ ಸಾವಿತ್ರಿ ಕಥೆಯಲ್ಲಿ ಸಾವಿತ್ರಿಯ ತಂದೆಯು ಮಗಳಿಗೆ ಯೋಗ್ಯ ವರನನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯ ವನ್ನು ಕೊಟ್ಟಿರುತ್ತಾರೆ. ಪುರಾಣಗಳ ಕಥೆಗಳಿಂದ ನಾವು ಇಂದಿಗೂ ಅಳವಡಿಸಿ ಕೊಳ್ಳುವುದು ಮತ್ತು ಕಲಿಯುವುದು ಬಹಳವಾಗಿಯೇ ಇರುತ್ತದೆ.

# ವಿಜಯನಗರ ಸಾಮ್ರಾಜ್ಯ ಸ್ಥಾಪನಾಚಾರ್ಯರು ವಿದ್ಯಾರಣ್ಯರು
## (ಮಾಧವಾಚಾರ್ಯರು)

ಡಾ॥ ಎಸ್ ನಂಜುಂಡಸ್ವಾಮಿ
7899011310

ಕ್ರಿ. ಶ. 13-14 ನೇಯ ಶತಮಾನದಲ್ಲಿ ದಕ್ಷಿಣ ಭಾರತದ ಮೇಲೆ ನಡೆದ ಪರಕೀಯರ ಧಾಳಿಯಿಂದ ಹಿಂದೂ ಧರ್ಮ ಮತ್ತು ಸಂಸ್ಕೃತಿಗೆ ಅಪಾರ ಹಾನಿ ಆಯಿತು. ಇಡೀ ದಕ್ಷಿಣ ಭಾರತದ ಸಾಮಾಜಿಕ ಮತ್ತು ಧಾರ್ಮಿಕ ಜನಜೀವನದಲ್ಲಿ ಅಲ್ಲೋಲ ಕಲ್ಲೋಲ ಉಂಟಾಯಿತು. ಇಂತಹ ಪರ್ವ ಕಾಲದಲ್ಲಿ, ಹಿಂದೂ ಧರ್ಮ ಮತ್ತು ಸಂಸ್ಕೃತಿಯನ್ನು ರಕ್ಷಿಸಲು, ಜನ ಜೀವನದಲ್ಲಿ ಸುಖ ಶಾಂತಿ ಸುವ್ಯವಸ್ಥೆಯನ್ನು ಕಾಪಾಡಲು, ಕ್ರಿ.ಶ. 1336 ರಲ್ಲಿ ವಿಜಯನಗರ ಸಾಮ್ರಾಜ್ಯವು ಉದಯವಾಯಿತು. ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಲ್ಲಿ ಮಾಧವ (ಮಾಧವಾಚಾರ್ಯ) ಅಥವಾ ವಿದ್ಯಾರಣ್ಯರು ಪ್ರಮುಖ ಪಾತ್ರವಹಿಸಿದ್ದರು ಎಂಬುದು, ಇತಿಹಾಸ, ಲಿಖಿತ ದಾಖಲೆಗಳು ಮತ್ತು ಆ ಕಾಲದ ಕೃತಿಗಳು ಮತ್ತು ಐತಿಹ್ಯಗಳಿಂದ ಖಚಿತವಾಗಿ ತಿಳಿದುಬರುತ್ತದೆ.

### ವಿದ್ಯಾರಣ್ಯರ ಹಿನ್ನೆಲೆ


ಯಜುರ್ವೇದ ಶಾಖೆಯ, ಬೋದಾಯನ ಸೂತ್ರಕ್ಕೆ ಸೇರಿದ. ಭಾರದ್ವಾಜ ಗೋತ್ರದ ಮಾಯಣ ಮತ್ತು ಶ್ರೀಮತಿ ಎಂಬ ದಂಪತಿಗಳಿದ್ದರು. ಇವರು ಕರ್ನಾಟಕ ದವರೆಂದು (ಹಂಪೆ, ಅಗ್ರಹಾರಬಾಚಹಳ್ಳಿ, ಬಾಳಗಂಚಿ, ಶೃಂಗೇರಿ). ತಮಿಳುನಾಡು ಕಡೆಯವರೆಂದು (ಕಾಂಚೀಪುರ). ಆಂಧ್ರ ಭಾಗದವರೆಂದು (ನೆಲ್ಲೂರು, ವಾರಂಗಲ್) ಕೆಲವು ವಿದ್ವಾಂಸರು ಹೇಳಿದ್ದಾರೆ. ಆದರೆ ಇವರು ಕರ್ನಾಟಕದವರು. ಕನ್ನಡಿಗರು, ಬಹುಶಃ ಶೃಂಗೇರಿ ಆಸುಪಾಸಿನವರು ಎಂಬುದು ಇತ್ತೀಚಿನ ಸಂಶೋಧನೆಗಳಿಂದ ಸಿದ್ಧವಾಗಿದೆ. ಮಾಯಣ ದಂಪತಿಗಳಿಗೆ, ಮಾಧವ (ಮಾಧವಾಚಾರ್ಯ).ಸಾಯಣ (ಸಾಯಣಾ ಚಾರ್ಯ) ಭೋಗನಾಥ, ಸಿಂಗಲೆ ಎಂಬ ನಾಲ್ಕು ಜನ ಮಕ್ಕಳು. ಸಿಂಗಲೆಯನ್ನು, ವಿಜಯ ನಗರದ ಅರಸರಲ್ಲಿ ಅಧಿಕಾರಿಯಾಗಿದ್ದ ವಿಷ್ಣುವೃದ್ಧಗೋತ್ರದ ರಾಮರಸ ಎಂಬುವವನಿಗೆ ಕೊಟ್ಟು ಮದುವೆ ಮಾಡಲಾಗಿತ್ತು. ಇವರ ಮಗನೇ ಲಕ್ಷ್ಮೀಧರ ಅಮಾತ್ಯ. ಇವನು ಒಂದನೇ ದೇವರಾಯನಲ್ಲಿ ದಳಪತಿಯೂ ಮಂತ್ರಿಯೂ ಆಗಿದ್ದನು. ಲಕ್ಷ್ಮೀಧರನು ಹಾಕಿಸಿರುವ ಕ್ರಿ.ಶ. 1410 ರ ಹಂಪೆಯ ದೊಡ್ಡ ಶಿಲಾ ಶಾಸನದಲ್ಲಿ ತನ್ನ ಸೋದರ ಮಾವಂದಿರಾದ ಸಾಯಣ, ಮಾಧವರು (ವಿದ್ಯಾರಣ್ಯರು) ವಿಜಯನಗರದ ಅರಸರಲ್ಲಿ ಮಹಾಪ್ರಧಾನರು ಅಂದರೆ ಮಂತ್ರಿಗಳಾಗಿದ್ದು ಅನೇಕ ಮಹತ್ಕಾರ್ಯಗಳನ್ನು ಮಾಡಿದರೆಂದು ಮನಸಾರೆ ಹೊಗಳಿದ್ದಾನೆ. ಇದರಿಂದಾಗಿ ಮಾಧವಸಾಯಣರು ಈ ಶಾಸನದ ಕಾಲಕ್ಕಿಂತ ಸುಮಾರು 30-40 ವರ್ಷ ಹಿಂದಿನವರು ಎಂಬುದು ದೃಢಪಡುತ್ತದೆ. ವಿಜಯನಗರದ ಅರಸರಲ್ಲಿ ಮಹಾಪ್ರಧಾನರಾಗಿದ್ದ ಮಾಧವರೇ ಮುಂದೆ ಸನ್ಯಾಸಾಶ್ರಮವನ್ನು ಸ್ವೀಕರಿಸಿ ವಿದ್ಯಾರಣ್ಯ ರೆಂಬ ಅಭಿದಾನದಿಂದ ಪ್ರಖ್ಯಾತ ರಾಗಿ ಶೃಂಗೇರಿ ಪೀಠಾಧಿಪತಿಗಳಾದರೆಂದು ಸಾಹಿತ್ಯ ಕೃತಿಗಳ ಆಧಾರದ ಮೇಲೆ ಖಚಿತವಾಗಿ ತಿಳಿದು ಬರುತ್ತದೆ.

### ವೈಶಾಖ ಶುದ್ಧ ಸಪ್ತಮಿ : ವಿದ್ಯಾರಣ್ಯರ ಜಯಂತಿ

ವಿದ್ಯಾರಣ್ಯರು ದುರ್ಮುಖಿ ನಾಮಸಂ ವತ್ಸರದ ವೈಶಾಖ ಶುದ್ಧ ಸಪ್ತಮಿ, ಬುಧವಾರ ಅಂದರೆ ಕ್ರಿ.ಶ. 1296 ಏಪ್ರಿಲ್ 11 ರಂದು, ಪುಷ್ಯ ನಕ್ಷತ್ರ, ಧರ್ನುಲಗ್ನದಲ್ಲಿ ಜನಿಸಿದರೆಂದು ಕೆಲವು ಐತಿಹಾಸಿಕ ಗ್ರಂಥಗಳ ಉಲ್ಲೇಖಗಳಿಂದ ತಿಳಿದು ಬರುತ್ತದೆ. (ವೈಶಾಖ ಶುದ್ಧ ಪಂಚಮಿ ಜಗದ್ಗುರು ಆದಿಶಂಕರರು ಜಯಂತಿ). ವಿದ್ಯಾರಣ್ಯರಿಗೆ ಶ್ರೀಕಂಠನಾಥರು ಶಂಕರಾನಂದರು ಶೃಂಗೇರಿ ಪೀಠದ ಗುರುಗಳಾಗಿದ್ದ ಭಾರತೀತೀರ್ಥರು ಅಥವಾ ಭಾರತೀಕೃಷ್ಣ ತೀರ್ಥರು (1333 - 1380 ) ಮತ್ತು ಶೃಂಗೇರಿ ಪೀಠದ ಗುರುಗಳಾಗಿದ್ದು ವಿದ್ಯಾತೀರ್ಥರು (1229 -1333) ಎಂಬ ನಾಲ್ಕು ಜನ ಗುರುಗಳಿದ್ದರು. ಈ ಗುರುಗಳ ಪೈಕಿ ಹಿಂದೂ ಧರ್ಮಕ್ಕೆ ಸಂಕಷ್ಟ ಒದಗಿದ್ದ ಸಂದಿಗ್ಧ ಸಮಯದಲ್ಲಿ ಶೃಂಗೇರಿ ಪೀಠಾಧಿಪತಿಗಳಾಗಿದ್ದ ವಿದ್ಯಾತೀರ್ಥರು ಆಧ್ಯಾತ್ಮಿಕವಾಗಿ, ಧಾರ್ಮಿಕವಾಗಿ ರಾಜಕೀಯವಾಗಿ, ಸಾಮಾಜಿಕವಾಗಿ ಮಾಧವ ಮತ್ತು ಸಾಯಣರಿಗೆ ಹೆಚ್ಚಿನ ಮಾರ್ಗದರ್ಶನ ಮಾಡಿ, ಸ್ಫೂರ್ತಿ ಉತ್ಸಾಹಗಳನ್ನು ತುಂಬಿದರು. ಹಿಂದೂ ಧರ್ಮದ ಸಂರಕ್ಷಣೆಗೆ ಬಹಳ ಅಗತ್ಯ ವಾಗಿದ್ದ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ಬಗ್ಗೆ ಸಾಯಣ ಮತ್ತು ಮಾಧವರಿಗೆ(ವಿದ್ಯಾರಣ್ಯರಿಗೆ) ಮಾರ್ಗದರ್ಶನ ಮಾಡಿದರು.

### ಹರಿಹರ ಮತ್ತು ಬುಕ್ಕರಾಯರ (ಹಕ್ಕ - ಬುಕ್ಕ) ಗುರುಗಳು :

ವಿದ್ಯಾರಣ್ಯರ ತಂದೆ ಮಾಯಣ ಮತ್ತು ಮಾಯಣರ ಗುರುಗಳಾದ ಸರ್ವಜ್ಞ ವಿಷ್ಣು ಭಟ್ಟಯ್ಯ ಇವರುಗಳು, ಹೊಯ್ಸಳರಿಗೆ ಮತ್ತು ವಿಜಯನಗರದ ಸಂಗಮ ವಂಶದ ಮೊದಲಿನ ಅರಸರಿಗೆ ಗುರುಗಳಾಗಿದ್ದರು. ಮಾಧವ ಮತ್ತು ಸಾಯಣರು, ಸಂಗಮನ ಮಕ್ಕಳಾದ ಹರಿಹರ ಮತ್ತು ಅವರ ಸಹೋದರರಿಗೆ ಗುರುಗಳಾಗಿದ್ದರು. ಅದರ ಜೊತೆಗೆ ಮಾಧವ ಸಾಯಣರು. ಬಲರಾಮ ಶ್ರೀಕೃಷ್ಣರಂತೆ ಇದ್ದು, ಒಂದನೆಯ ಹರಿಹರ ಮತ್ತು ಬುಕ್ಕರಾಯನಿಗೆ, ಒಂದನೆಯ ಬುಕ್ಕನ ಮಗ ಇಮ್ಮಡಿ ಹರಿಹರನಿಗೆ, ನಂತರ ಒಂದನೆಯ ದೇವರಾಯನಿಗೆ ಆದಿ ಪ್ರಧಾನರಾಗಿದ್ದುಕೊಂಡು, ಅನೇಕ ದೊಡ್ಡ ದೊಡ್ಡ ಕೆರೆಗಳು, ಬಾವಿಗಳು, ದೇವಾಲಯಗಳು, ಅಗ್ರಹಾರಗಳನ್ನು ನಿರ್ಮಿಸಿರೆಂದು ಇಡೀ ಭೂಮಂಡಲ್ಲಿ ಅವರ ಕೀರ್ತಿ ವ್ಯಾಪಿಸಿತ್ತೆಂದು ಹಂಪೆಯ ಲಕ್ಷ್ಮೀಧರ ಅಮಾತ್ಯನ ಶಾಸನದಿಂದ ತಿಳಿದು ಬರುತ್ತದೆ. ಮಾಧವಾಚಾರ್ಯರು (ವಿದ್ಯಾರಣ್ಯರು) ಅಂದಿನ ಅರಸರಾದ ಒಂದನೆಯ ಹರಿಹರ ಮತ್ತು ಬುಕ್ಕ ರಾಯರಿಗೂ ಮಾರ್ಗದರ್ಶನ



ನೀಡಿ, ವಿಜಯನಗರ ಸಾಮ್ರಾಜ್ಯ ಸ್ಥಾಪನೆಗೆ ಕಾರಣರಾದುದಲ್ಲದೆ ದೇಶ ಸಂರಕ್ಷಣೆಗೆ ಅಗತ್ಯವಾದ ಸೇನಾ ಬಲದ ಜೊತೆಗೆ ನೀರಾವರಿ ಮತ್ತು ಕೃಷಿಗೆ ಅದ್ಯತೆ ನೀಡುವುದರ ಮೂಲಕ ಜನಜೀವನ ಸಮೃದ್ಧವಾಗುವಂತೆ ಮಾಡಿದರೆಂದು ಹೇಳಬಹುದು.

## ವಿಜಯನಗರ ಅಥವಾ ವಿಜಯ ವಿರೂಪಾಕ್ಷ ನಗರ, ಹೊಸ ಪಟ್ಟಣ:

ದಕ್ಷಿಣ ಭಾರತದ ಪ್ರಮುಖ ಸಾಮ್ರಾಜ್ಯವಾಗಿದ್ದ ಹೊಯ್ಸಳರ ರಾಜವಂಶದ ಕೊನೆಯ ದೊರೆ ಮುಮ್ಮಡಿ ಬಲ್ಲಾಳನು ಉತ್ತರಿಂದ ಬರುವ ಮುಸ್ಲಿಂ ಧಾಳಿಯನ್ನು ತಡೆಗಟ್ಟಲು, ತನ್ನ ಮಗ ವಿಜಯ ವಿರೂಪಾಕ್ಷನ ಹೆಸರಿನಲ್ಲಿ ತುಂಗಭದ್ರಾ ತಟದಲ್ಲಿ ಹೊಸ ಪಟ್ಟಣ ಅಥವಾ ವಿಜಯವಿರೂಪಾಕ್ಷಪುರವೆಂಬ ನೆಲೆಬೀಡನ್ನು ಕ್ರಿ.ಶ. 1334 ರ ಹೊತ್ತಿಗೆ ಸ್ಥಾಪಿಸಿದ್ದನು. ಕ್ರಿ.ಶ. 1336 ಧಾತು ಸಂವತ್ಸರದ ವೈಶಾಖ ಶುದ್ಧ ಸಪ್ತಮಿಯಂದು ಮಾಧವ ಅಥವಾ ವಿದ್ಯಾರಣ್ಯರ ನೇತೃತ್ವದಲ್ಲಿ ಮುಮ್ಮಡಿ ಬಲ್ಲಾಳನ ಮಹಾಪ್ರಧಾನ ದಂಡನಾಯಕನಾಗಿದ್ದ ಹರಿಹರ ಮಹಾರಾಯನು ಅವನ ತಮ್ಮಂದಿರ ಜೊತೆ ವಿಜಯವಿರೂಪಾಕ್ಷ ಪುರದಲ್ಲಿ ಅಧಿಕಾರವಹಿಸಿಕೊಂಡು ಆ ಪಟ್ಟಣವನ್ನು ವಿಸ್ತರಿಸಲು ಆಸ್ತಿಭಾರವನ್ನು ಹಾಕಿದನು. ಇದೇ ವಿಜಯನಗರ ಸಾಮ್ರಾಜ್ಯ ಸಂಸ್ಥಾಪನೆಯ ದಿನವೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ತುಂಗಭದ್ರಾ ತಟದ ದಕ್ಷಿಣದಲ್ಲಿ ಹೊಸಪಟ್ಟಣವಿದ್ದರೆ, ಉತ್ತರ ತಟದಲ್ಲಿ ಆನೆಗೊಂದಿಯ ಸಮೀಪದಲ್ಲಿ ವಿದ್ಯಾರಣ್ಯರ ತಪೋಭೂಮಿ, ವಿದ್ಯಾರಣ್ಯರಿಗೆ ಚಿನ್ನದ ಮಳೆಗರೆದಳೆಂದು ಹೇಳುವ ಜಯಲಕ್ಷ್ಮೀ ದೇವಾಲಯ ಇವುಗಳಿವೆ. ಮುಮ್ಮಡಿಬಲ್ಲಾಳನು ಕ್ರಿ.ಶ. 1342 ವಿರೂಪಾಕ್ಷನು 1346 ರಲ್ಲಿಯೂ ಅವನ ಮಗ ನಾಲ್ಕನೆಯ ಬಲ್ಲಾಳ ಅಥವಾ ಮೃತಪಟ್ಟ ನಂತರ ಮಾಧವ ಅಥವಾ ವಿದ್ಯಾರಣ್ಯರ ಶಿಷ್ಯರಾದ ಒಂದನೆಯ ಹರಿಹರ ಮತ್ತು ಅವನ ತಮ್ಮ ಬುಕ್ಕರಾಯ ಇವರು ಹೊಯ್ಸಳ ಸಾಮ್ರಾಜ್ಯವು ಅಂತರ್ಗತವಾಗಿದ್ದ ವಿಜಯನಗರ ಸಾಮ್ರಾಜ್ಯಕ್ಕೆ ಅಧಿಪತಿ ಗಳಾಗಿ, ಹಿಂದೂರಾಯ ಸುರತ್ರಾಣ, ಮಹಾಮಂಡಲೇ ಶ್ವರರೆಂಬ ಬಿರುದನ್ನು ಧರಿಸಿದರು.

## ವಿಜಯನಗರ ಸಾಮ್ರಾಜ್ಯದ ಸಂಸ್ಥಾಪಕರಿಂದ ಶೃಂಗೇರಿ ಪೀಠಕ್ಕೆ ದತ್ತಿ :

ಸಾಮ್ರಾಜ್ಯ ಸ್ಥಾಪನೆಯ ಕಾರ್ಯದಲ್ಲಿ ಬೆಂಬಲವಾಗಿ ನಿಂತ ಶೃಂಗೇರಿ ಪೀಠದ ಗುರುಗಳಿಗೆ ಕೃತಜ್ಞತೆಯನ್ನು ವ್ಯಕ್ತ ಪಡಿಸಲು, ಹಾಗೂ ವಿಜಯೋತ್ಸವವನ್ನು ಆಚರಿಸಲು, ವಿಜಯನಗರ ಸಾಮ್ರಾಜ್ಯದ ಅಧಿಪತಿ, ಮಹಾಮಂಡಲೇಶ್ವರ ಹರಿಹರನು, ಶಕವರುಷ 1268 ಪಾರ್ಥಿವ ಸಂವತ್ಸರದ ಫಾಲ್ಗುಣ ಬಹುಳ ಪಾಡ್ಯಮಿ, ಗುರುವಾರ, ಅಂದರೆ ಕ್ರಿ.ಶ. 1346 ನೆಯ ಇಸವಿ ಮಾರ್ಚ್ 9 ನೇ ತಾರೀಖು ತನ್ನ ತಮ್ಮಂದಿರಾದ ಕಂಪಣ್ಣ ಒಡೆಯ ಬುಕ್ಕಣ್ಣ ಒಡೆಯ, ಮಾರಪ್ಪ ಒಡೆಯ , ಮುದ್ದಪ್ಪ ಒಡೆಯ ಮತ್ತು ತನ್ನ ಅಳಿಯ ಬಲ್ಲಪ್ಪ ದಂಡನಾಯಕ, ಅವನ ಮಗ ಕುಮಾರ ಸೋವಣ್ಣ ಒಡೆಯ ಮತ್ತು ವೀರಬಲ್ಲಾಳನ ರಾಣಿ, ಅಳುಪ ರಾಜಕುಮಾರಿ ವೀರ ಕಿಕ್ಕಾಯಿ ತಾಯಿಯ (ಕೃಷ್ಣಾಯಿ) ಸಮೇತ ಶೃಂಗೇರಿಗೆ ಭೇಟಿ ನೀಡಿ, ಅಂದಿನ ಪೀಠಾಧಿಪತಿಗಳಾಗಿದ್ದ ಭಾರತೀ ತೀರ್ಥ ಶ್ರೀಪಾದಂಗಳು ಮತ್ತು ಅವರ ಪರಿಚಾರಿಕೆ ಮಾಡಿಕೊಂಡಿರುವ ಅವರ ಶಿಷ್ಯರಾದ ನಲವತ್ತು ಜನ ಬ್ರಾಹ್ಮಣರಿಗೆ, ಸಾಂತಳಿಗೆ ನಾಡೊಳಗಿರುವ, ಕೆಲನಾಡಿನ ಒಂಬತ್ತು ಹಳ್ಳಿಗಳನ್ನು ದತ್ತಿಯಾಗಿ ನೀಡಿದರು. ವೀರಕಿಕ್ಕಾಯಿ ತಾಯಿಯು ಈ ಊರುಗಳ ಜೊತೆಗೆ ಕೈಮಲೆಯ ಹೊಸವೂರು, ಕನ್ಯಾನ ಇವುಗಳನ್ನು ದತ್ತಿಯಾಗಿ ನೀಡಿದಳು. ಈ ಬಗ್ಗೆ ಶೃಂಗೇರಿ ಮಠದಲ್ಲಿರುವ ಅತ್ಯಂತ ಪ್ರಮುಖವಾದ ಶಿಲಾಶಾಸನ ವಿದ್ಯಾತೀರ್ಥ ಗುರುವಿನ ಸ್ತುತಿಯೊಂದಿಗೆ ಆರಂಭವಾಗಿರುತ್ತದೆ. ಮಾಧವ ಅಥವಾ ವಿದ್ಯಾರಣ್ಯರೇ ವಿಜಯನಗರದ ಅರಸರನ್ನು ಶೃಂಗೇರಿಗೆ ಕರೆತಂದು, ಸಾಮ್ರಾಜ್ಯ ಸ್ಥಾಪನೆಯ ವಿಚಾರದಲ್ಲಿ ತಮಗೆ ಸ್ಫೂರ್ತಿ ಹಾಗೂ ಮಾರ್ಗದರ್ಶನ ಮಾಡಿದ ಗುರುಗಳಾದ ವಿದ್ಯಾ



ತೀರ್ಥರ ದರ್ಶನ ಮಾಡಿಸಿ, ದತ್ತಿಯನ್ನು ಬಿಡಿಸಿದರೆಂದು ಹೇಳಬಹುದು. ಅಂದಿನಿಂದ ಶೃಂಗೇರಿ ಮಠಕ್ಕೆ ರಾಜಪೂಜ ತೆಯು ಅಧಿಕವಾಗಿ ಒದಗಿ ಬಂದಿತು. ಒಂದನೆಯ ಹರಿಹರನ ನಂತರ ಅವನ ತಮ್ಮ ಬುಕ್ಕರಾಯನು ಪಟ್ಟಕ್ಕೆ ಬಂದನು. ಸಾಮ್ರಾಜ್ಯದಲ್ಲಿ ಶಾಂತಿ ಸುವ್ಯವಸ್ಥೆ ಸುಭದ್ರತೆ ನೆಲೆಸಿತ್ತು. ಈ ಸಂದರ್ಭದಲ್ಲಿ ಮಾಧವಾಚಾರ್ಯರು ಕಾಶಿಗೆ ಹೋಗಿ ಅಲ್ಲಿ ಅಧ್ಯಯನ, ಅಧ್ಯಾಪನ, ಗ್ರಂಥ ರಚನಾ ಕಾರ್ಯವನ್ನು ಕೈಗೊಂಡರೆಂದು ಹೇಳಬಹುದು. ಕಾಶಿಯ ಕೇದಾರ ಘಾಟಿನಲ್ಲಿ ಒಂದು ಮಠವನ್ನು ಕೂಡಾ ಸ್ಥಾಪಿಸಿ, ಅಲ್ಲಿ ಚಂದ್ರಮೌಳೀಶ್ವರಲಿಂಗವನ್ನು ಸ್ಥಾಪಿಸಿದರು. ಅದು ಇಂದಿಗೂ ಅಲ್ಲಿದೆ. ಇತ್ತ ಅವರ ಅಣ್ಣ ಸಾಯಣಾಚಾರ್ಯರು ವಿಜಯನಗರ ಸಾಮ್ರಾಜ್ಯದಲ್ಲಿಯೇ ಇದ್ದುಕೊಂಡು ವೇದಗಳ ಮೇಲೆ ವೇದಾರ್ಥ ಪ್ರಕಾಶವೆಂಬ ಭಾಷ್ಯವನ್ನು ಬರೆದರು. ವೇದಾರ್ಥ ಪ್ರಕಾಶವು ವೇದಗಳ ಮೇಲಿನ ಸಂಪೂರ್ಣವಾದ ವ್ಯಾಖ್ಯಾನವನ್ನೊಳಗೊಂಡು ಪ್ರಪ್ರಥಮ ಕೃತಿಯಾಗಿದೆ.

## ಮಾಧವಾಚಾರ್ಯರು ವಿದ್ಯಾರಣ್ಯಯತಿಗಳಾಗಿ ಶೃಂಗೇರಿ ಪೀಠಾಧಿಪತಿಗಳಾದುದು :

ಈ ಮಧ್ಯೆ ಬುಕ್ಕರಾಯನು ಕ್ರಿ.ಶ. 1356 ರಲ್ಲಿ ಶೃಂಗೇರಿಗೆ ಹೋಗಿ ಭಾರತಿತೀರ್ಥರ ದರ್ಶನ ಮಾಡಿ, ಮಾಧವಾಚಾರ್ಯರನ್ನು ಕಾಶಿಯಿಂದ ವಾಪಸ್ ಕರೆಸುವಂತೆ ಮನವಿ ಮಾಡಿದನು. ತಕ್ಷಣ ಸಾಮ್ರಾಜ್ಯಕ್ಕೆ ಹಿಂದಿರುಗುವಂತೆ ಮಾಧವಾಚಾರ್ಯರಿಗೆ ಗುರುಗಳು ಶ್ರೀಮುಖವನ್ನು ಕಳುಹಿಸಿದರು. ವಿಜಯನಗರಕ್ಕೆ ಹಿಂದಿರುಗಿದ ಮಾಧವಾಚಾರ್ಯರನ್ನು ರಾಜ, ಅಧಿಕಾರಿಗಳು, ಜನರು ಸ್ವಾಗತಿಸಿ, ಪಲ್ಲಕ್ಕಿಯಲ್ಲಿ ಕೂರಿಸಿ ಮೆರವಣಿಗೆಯನ್ನು ಮಾಡಿಕೊಂಡು, ವಿಜಯನಗರ ಪುರಪ್ರವೇಶ ಮಾಡಿಸಿದರು. ಈ ಘಟನೆಯನ್ನು ತೋರಿಸುವ ಒಂದು ವರ್ಣಚಿತ್ರವು ಈಗಲೂ ಹಂಪೆಯ ವಿರೂಪಾಕ್ಷ ದೇವಾಲಯದ ನವರಂಗ ಮಂಟಪದ ಮೇಲುಛಾವಣಿಯ ಭಿತ್ತಿಯಲ್ಲಿದೆ. ನಂತರ ಕ್ರಿ.ಶ. 1376 - 77 ರಲ್ಲಿ ಮಾಧವಾಚಾರ್ಯರು, ಭಾರತೀತೀರ್ಥರಿಂದ ವಿಧಿವತ್ತಾಗಿ ಸನ್ಯಾಸಾಶ್ರಮವನ್ನು ಸ್ವೀಕರಿಸಿ ವಿದ್ಯಾರಣ್ಯರೆಂಬ ಅಭಿದಾನದಿಂದ ಶೃಂಗೇರಿ ಪೀಠವನ್ನು (1380- 1386) ಅಲಂಕರಿಸಿದರು. ತಮ್ಮ ಗುರುಗಳಾದ ವಿದ್ಯಾತೀರ್ಥರ ಸಂಸ್ಮರಣಾರ್ಥವಾಗಿ ವಿದ್ಯಾಶಂಕರ ಲಿಂಗವನ್ನು ಪ್ರತಿಷ್ಠಾಪಿಸಿದರು. ವಿಜಯ ನಗರದ ಅರಸರು ಅದರ ಮೇಲೆ ವಿನೂತನ ವಾಸ್ತುವಿನಿಂದ ಕೂಡಿದ ವಿದ್ಯಾಶಂಕರ ದೇವಾಲಯವನ್ನು ನಿರ್ಮಿಸಲು ಕಾರಣಕರ್ತರಾದರು. ನಂತರವೂ ಕೂಡಾ ರಾಜರಿಗೆ ಮಾರ್ಗದರ್ಶನ ಮಾಡುವುದರಲ್ಲಿ, ಗ್ರಂಥ ರಚನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಈ ವೇಳೆಗೆ ಇಮ್ಮಡಿ ಹರಿಹರನು ಪಟ್ಟಕ್ಕೆ ಬಂದಿದ್ದನು. ವಿದ್ಯಾರಣ್ಯರು ಶಾಲಿವಾಹನ ಶಕ 1309 ನೆಯ ಕ್ಷಯ ಸಂವತ್ಸರದ ಜ್ಯೇಷ್ಠ ಬಹುಳ ತ್ರಯೋದಶಿ ಶನಿವಾರ, ಅಂದರೆ ಕ್ರಿ.ಶ. 1386 ಮೇ 26 ರಂದು, ಸಾಯುಜ್ಯವನ್ನು ಹೊಂದಿದರು. (ಮುಕ್ತಿ ಪಡೆದರು). ವಿದ್ಯಾರಣ್ಯ ಶ್ರೀ ಪಾದಂಗಳ ಸ್ಮರಣಾರ್ಥವಾಗಿ ಇಮ್ಮಡಿ ಹರಿಹರ ಮಹಾರಾಯನು ಈ ತಾರೀಖಿನಂದು ಶೃಂಗೇರಿಯ ಸಮೀಪದಲ್ಲಿ ವಿದ್ಯಾರಣ್ಯಪುರ ಎಂಬ ಅಗ್ರಹಾರವನ್ನು ನಿರ್ಮಿಸಿ ದತ್ತಿಯಾಗಿ ಬಿಟ್ಟನೆಂದು ಶೃಂಗೇರಿ ಮಠದಲ್ಲಿರುವ ತಾಮ್ರ ಶಾಸನ ದಿಂದ ತಿಳಿದು ಬರುತ್ತದೆ.

# ಮಣ್ಣಿನ ಅಮಾವಾಸ್ಯೆ

**ಭೂಮಿ ಹಸನುಗೊಳಿಸುವ ಎತ್ತುಗಳಿಗೆ ವಿಶೇಷ ಪೂಜೆ**

ಮಣ್ಣು ಮತ್ತು ಮಾನವನಿಗೆ ಅವಿನಾಭಾವ ಸಂಬಂಧ. ಅದರಲ್ಲೂ ರೈತರಿಗೆ ಮಣ್ಣಿನ ಮೇಲೆ ಇನ್ನಿಲ್ಲದ ಒಲವು. ಹೀಗಾಗಿ ಮಣ್ಣನ್ನು ಕೂಡಾ ರೈತರು ದೇವ ಸ್ವರೂಪಿಯಾಗಿ ಕಾಣುತ್ತಾರೆ.

ಮಣ್ಣೆತ್ತಿನ ಅಮಾವಾಸ್ಯೆ ಮಣ್ಣಿನ ಮಕ್ಕಳ ಹಬ್ಬ. ಈ ಹಬ್ಬದಂದು ಮಣ್ಣಿನ ಜೋಡಿ ಎತ್ತುಗಳನ್ನು ಮಾಡಿ, ಅವುಗಳನ್ನು ದೇವರ ಜಗುಲಿ ಮೇಲೆ ಪ್ರತಿಷ್ಠಾಪಿಸಿ ಪೂಜೆ ಸಲ್ಲಿಸಲಾಗುತ್ತದೆ. ಮುಂಗಾರಿನ ನಡುವೆಯೇ ಆಚರಣೆ ಮಾಡುವ ಮೊದಲ ಕೃಷಿ ಹಬ್ಬವೂ ಇದೆ. ಕಾರ ಹುಣ್ಣಿಮೆ ಬಳಿಕ ಬರುವ ಮಣ್ಣೆತ್ತಿನ ಅಮಾವಾಸ್ಯೆಯ ಆಚರಣೆ ಒಂದೊಂದು ಕಡೆ ಒಂದೊಂದು ರೀತಿಯಲ್ಲಿ ನೆರವೇರುತ್ತದೆ. ಅದರಲ್ಲೂ ಉತ್ತರ ಕರ್ನಾಟಕ ಭಾಗದಲ್ಲಿ ಮಣ್ಣೆತ್ತಿನ ಅಮಾವಾಸ್ಯೆಯ ಆಚರಣೆ ಜೋರಾಗಿಯೇ ಇರುತ್ತದೆ.

ಪುನರ್ವಸು ಮಳೆ ಪ್ರಾರಂಭವಾಗುವ ಹೊತ್ತಿಗೆ ಬಿತ್ತನೆ ಆಗಿ, ನಾಟಿ ಕೂಡ ಮುಗಿದಿರುತ್ತದೆ. ಈ ಸಂಭ್ರಮವನ್ನು ಆಚರಿಸಲು ರೈತರು ಮಣ್ಣೆತ್ತಿನ ಅಮಾವಾಸ್ಯೆ ಆಚರಿಸುತ್ತಾರೆ. ಭೂಮಿ ಹಸನುಗೊಳಿಸಿದ ಎತ್ತುಗಳಿಗೆ ವಿಶೇಷ ಗೌರವ ಸಲ್ಲಿಸುವ ಹಬ್ಬವೂ ಇದಾಗಿದೆ.

ವರ್ಷದಲ್ಲಿ 5 ಬಾರಿ ಮೃತ್ತಿಕಾ ಪೂಜೆಯನ್ನು ಮಾಡುವುದಾಗಿ ಶಾಸ್ತ್ರವು ನಮಗೆ ಆಜ್ಞೆಮಾಡಿದೆ. ವರ್ಷದ ಮೂರು ಮಾಸಗಳಲ್ಲಿ ಅಂದರೆ, ಆಷಾಢ, ಶ್ರಾವಣ ಮತ್ತು ಭಾದ್ರಪದದಲ್ಲಿ ಮಣ್ಣಿನ ಪ್ರತಿಮೆಗಳನ್ನು ಪೂಜಿಸುವುದು ವಾಡಿಕೆ, ಮಣ್ಣೆತ್ತಿನ ಅಮಾವಾಸ್ಯೆಯಿಂದ ಶುರುವಾಗಿ, ನಾಗರ ಪಂಚಮಿಯಲ್ಲಿ ಹುತ್ತಪ್ಪ, ಗಣೇಶ ಚೌತಿ ದಿನದಂದು ಗಣಪತಿ, ಜೋ ಕುಮಾರ, ದೀಪಾವಳಿ ಹೊತ್ತಿಗೆ ಗುಳ್ಳೆವ್ವನನ್ನು ಮಣ್ಣಿನಿಂದ ಮಾಡಿ ಪೂಜಿಸಲಾಗುತ್ತದೆ. ಈ ದಿನ ಮಣ್ಣಿನ ಎತ್ತು ಮಾಡಿ, ಅದರಲ್ಲಿ ವೃಷಭವನ್ನು ಆವಾಹನೆ ಮಾಡಿ ಷೋಡಶೋಪಚಾರಗಳಿಂದ ಪೂಜಿಸಬೇಕು.



ಮಣ್ಣೆತ್ತಿನ ಅಮಾವಾಸ್ಯೆ ಹಿನ್ನೆಲೆಯಲ್ಲಿ ಮನೆಯಲ್ಲಿ ಎತ್ತುಗಳಿಗೆ ಕೃಷಿ ಕೆಲಸ ಇರುವುದಿಲ್ಲ. ಅಂದು ವಿಶ್ರಾಂತಿ. ಅವುಗಳ ಪೂಜೆಯ ಕೆಲಸ ನಡೆಯುತ್ತದೆ. ಮನೆಯಲ್ಲಿನ ಎಲ್ಲ ದನ, ಕರುಗಳ ಮೈತೊಳೆದು, ಹೂ ... ಗಳಿಂದ ಸಿಂಗರಿಸಿ, ಪೂಜೆ ಮಾಡ ... ಲಾಗುತ್ತದೆ. ನೈವೇದ್ಯದ ರೂಪದಲ್ಲಿ ... ವಿಶೇಷ ಅಡುಗೆ ಯನ್ನೂ ... ಮಾಡಲಾಗುತ್ತದೆ. ಅದಾದ ಬಳಿಕ ... ಊರಲ್ಲಿರುವ ದೇವಸ್ಥಾನಗಳಿಗೆ ... ತೆರಳಿ ಅಲ್ಲಿಗೆ ನೈವೇದ್ಯ ಅರ್ಪಿಸಲಾಗುತ್ತದೆ. ದೇಶಕ್ಕೆ ಅನ್ನ ನೀಡುವ ರೈತನ ಬದುಕು ಹಸನಾಗಲಿ ರೈತರ ಆದಾಯ ದ್ವಿಗುಣವಾಗಲಿ.

ಗ್ರಾಮೀಣ ಭಾಗದಲ್ಲಿ ಹೊಳೆಯ ಅಥವಾ ಹೊಲದ ಮಣ್ಣನ್ನು ತಂದು ನೀರಿನಿಂದ ನೆನೆಹಾಕಿ ಮನೆಯಲ್ಲಿಯೇ ಜೋಡೆತ್ತುಗಳನ್ನು ಮಾಡಲಾಗುತ್ತದೆ. ಜೋಡೆತ್ತಿನ ಜತೆಗೆ ಮೇವು ತಿನ್ನುವ ಗ್ವಾದಲಿಯನ್ನೂ ಮಾಡಲಾಗುತ್ತದೆ. ಆದಾದ ಬಳಿಕ ಹಾಗೆ ತಯಾರಿಸಿದ ಮೂರ್ತಿಗಳನ್ನು ದೇವರ ಮನೆಯಲ್ಲಿ ವಿಶೇಷ ಪೂಜೆ ಸಲ್ಲಿಸಿ ಅವುಗಳಿಗೆ ದೈವಿ ಸ್ವರೂಪ ನೀಡುವ ಕಾರ್ಯ ನೆರವೇರುತ್ತದೆ. ಹೂಗಳಿಂದ ಅಲಂಕರಿಸಿ, ಮನೆಯಲ್ಲಿ ಸಿಹಿ ಮಾಡಿ ನೈವೇದ್ಯ ಮಾಡಲಾಗುತ್ತದೆ. ಇನ್ನು ಕೆಲ ಪ್ರದೇಶಗಳಲ್ಲಿ ಹೊಲಗಳಿಗೆ ಹೋಗಿ ಅಲ್ಲಿಯೂ ಮಣ್ಣೆತ್ತುಗಳನ್ನು ಪ್ರತಿಷ್ಠಾಪಿಸಿ ಪೂಜೆಸಲ್ಲಿಸಿ,ಅಲ್ಲಿಯೇ ಊಟ ಮಾಡಿ ಬರುವ ಪದ್ಧತಿ ಇದೆ. ಸಂಜೆ ವೇಳೆ, ಜೋಡಿ ಮಣ್ಣೆತ್ತುಗಳನ್ನು ಕೆರೆಗೆ ಅಥವಾ ಹೊಳೆಗೆ ಬಿಡಲಾಗುತ್ತದೆ.



**ಮಹತ್ವ :**

ಮಣ್ಣು ಮತ್ತು ಎತ್ತುಗಳನ್ನು ರೈತರು ಪೂಜನೀಯ ಭಾವದಿಂದ ಕಾಣುತ್ತಾರೆ. ಅದರಲ್ಲೂ ಕೂಡಾ ಮುಂಗಾರು ಮಳೆ ಪ್ರಾರಂಭದ ನಂತರ ಬರುವ ಕಾರ ಹುಣ್ಣಿಮೆ ಮತ್ತು ಮಣ್ಣೆತ್ತಿನ ಅಮಾವಾಸ್ಯೆಯನ್ನು ರೈತರು ಸಂಭ್ರಮದಿಂದ ಆಚರಿಸುತ್ತಾರೆ. ತಮ್ಮ ನೋವು ನಲಿವುಗಳನ್ನು ಬದಿಗಿಟ್ಟು, ಎತ್ತುಗಳನ್ನು ಪೂಜಿಸುತ್ತಾರೆ.

ಅಮಾವಾಸ್ಯೆಗೆ ತಮ್ಮ ಮನೆಯ ಎತ್ತುಗಳನ್ನು ಸಿಂಗರಿಸುವುದಷ್ಟೇ ಅಲ್ಲ. ಎತ್ತುಗಳು ಇರಲಿ ಇಲ್ಲದಿರಲಿ ಎಲ್ಲರೂ ಗೌರವಿಸುವರು. ಮಣ್ಣಿಂದ ಎತ್ತಿನ ಮೂರ್ತಿಗಳನ್ನು ಮಾಡಿ ಅವುಗಳನ್ನು ಮನೆಯಲ್ಲಿ ಇಟ್ಟು ಅಮಾವಾಸ್ಯೆಯಂದು ಪೂಜಿಸುವರು. ಮರುದಿನ ಪಾಡ್ಯದಂದು ಕೂಡ ಪೂಜಿಸಿ ಹೊಲ ಹೊಂದಿದವರು ಅವುಗಳನ್ನು ನಾಗರಪಂಚಮಿಯ ವರೆಗೂ ದಿನನಿತ್ಯ ಪೂಜಿಸುತ್ತ ಕೆರೆಕೆಟ್ಟಂಬಲಿ ಅಂತ ಮಾಡಿ ಅಂಬಲಿ ಮಾಡಿಕೊಂಡು ಪಂಚಮಿಯ ನಂತರದ ದಿನ ತಮ್ಮ ಹೊಲಗಳಿಗೆ ತೆಗೆದುಕೊಂಡು ಹೋಗಿ ಇಡುವರು. ಅಂದರೆ ಮಳೆಯಿಂದ ಬಿತ್ತಿದ ಫಸಲು ಚೆನ್ನಾಗಿ ಬರಲಿ, ತಮ್ಮ ರಾಸುಗಳಿಗೆ ಯಾವ ತೊಂದರೆಯೂ ಬಾರದಿರಲಿ ಎಂದುಕೊಂಡು ಭಕ್ತಿಯಿಂದ ಸ್ಮರಿಸುವ ಅಮಾವಾಸ್ಯೆಯಿದು.

**ಆಚರಣೆ:**

ಕಾರ ಹುಣ್ಣಿಮೆಯ ನಂತರ ಬರುವುದೇ ಮಣ್ಣೆತ್ತಿನ ಅಮಾವಾಸ್ಯೆ.ಮಣ್ಣೆತ್ತಿನ ಅಮಾವಾಸ್ಯೆಯಂದು ರೈತರು ಹೊಲಕ್ಕೆ ಹೋಗಿ, ಜಿಗುಟಾಗಿರುವ ಮಣ್ಣನ್ನು ಮನೆಗೆ ತಂದು, ಮನೆಯಲ್ಲಿ ಮಣ್ಣಿನಿಂದ ಜೋಡಿ ಎತ್ತುಗಳನ್ನು ಮಾಡುತ್ತಾರೆ. ಬಳಿಕ ಮಣ್ಣಿನ ಎತ್ತುಗಳಿಗೆ ಸಿಂಗಾರ ಮಾಡುತ್ತಾರೆ. ಕೆಲವರು ಬಣ್ಣ ಹಚ್ಚಿದರೆ, ಇನ್ನು ಕೆಲವರು ಅಲಂಕಾರಿಕ ವಸ್ತುಗಳನ್ನು ಹಚ್ಚಿ, ಅವುಗಳಿಗೆ ಸಿಂಗಾರ ಮಾಡುತ್ತಾರೆ. ನಂತರ ಮನೆಯ ದೇವರ ಕೋಣೆಯಲ್ಲಿಟ್ಟು ಪೂಜೆ ಮಾಡುತ್ತಾರೆ. ನಂತರ ಕೆಲವರು ಗ್ರಾಮದ ಹನಮಂತ ದೇವರು, ಗ್ರಾಮ ದೇವತೆಯ ದೇವಸ್ಥಾನಗಳಿಗೆ ಮಣ್ಣಿನ ಎತ್ತುಗಳನ್ನು ತೆಗೆದುಕೊಂಡು ಹೋಗಿ ಪೂಜೆ ಮಾಡಿಕೊಂಡು ಬರುತ್ತಾರೆ.

ಪೂಜೆ ಮಾಡಿದ ನಂತರ ಮಣ್ಣಿನ ಎತ್ತುಗಳಿಗೆ ಹೋಳಿಗೆ, ಕಡಬಿನಿಂದ ಮಾಡಿದ ಆಹಾರವನ್ನು ಎಡೆ ಇಡುತ್ತಾರೆ. ಬಳಿಕ ತಮ್ಮ ಮನೆಯ ಹಿತ್ತಲಲ್ಲಿ ಮತ್ತು ಜಮೀನಿನಲ್ಲಿ ಮಣ್ಣಿನ ಎತ್ತುಗಳನ್ನು ತೆಗೆದು ಕೊಂಡು ಹೋಗಿ ಇಡುತ್ತಾರೆ. ಆ ಮೂಲಕ ಭೂ ತಾಯಿ ಮತ್ತು ಎತ್ತುಗಳು ನಮ್ಮನ್ನು ಕಾಪಾಡಿ ಎಂದು ಪ್ರಾರ್ಥನೆ ಮಾಡುತ್ತಾರೆ.

ಗ್ರಾಮೀಣ ಭಾಗದಲ್ಲಿ ರೈತರು ಇಂದಿಗೂ ಕೂಡಾ ಜಮೀನಿನಲ್ಲಿರುವ ಮಣ್ಣನ್ನು ತಂದು, ಅದರಿಂದ ಎತ್ತುಗಳನ್ನು ಮಾಡಿ, ಮನೆಯಲ್ಲಿಟ್ಟು ಪೂಜೆ ಮಾಡುತ್ತಾರೆ. ಅಂತೆಯೇ ನಗರದಲ್ಲಿರುವ ಅನೇಕರು ಕೂಡ ಮಣ್ಣೆತ್ತಿನ ಅಮಾವಾಸ್ಯೆಯಂದು ಎತ್ತುಗಳನ್ನು ಪೂಜೆ ಮಾಡುತ್ತಾರೆ. ಆದರೆ ನಗರದಲ್ಲಿ ಮಣ್ಣು ತಂದು ಅದರಿಂದ ಎತ್ತುಗಳನ್ನು ಮಾಡಲು ಆಗುವುದಿಲ್ಲ. ಅಲ್ಲದೇ ಅಲ್ಲಿ ಮಣ್ಣು ಕೂಡಾ ಹಳ್ಳಿಯಲ್ಲಿ ಸಿಕ್ಕಂತೆ ಸಿಗುವುದಿಲ್ಲ. ಹೀಗಾಗಿ ಮಾರುಕಟ್ಟೆಯಲ್ಲಿ ಬಣ್ಣ ಬಣ್ಣದ ಮಣ್ಣಿನ ಎತ್ತುಗಳನ್ನು ಮಾರಾಟ ಮಾಡಲಾಗುತ್ತದೆ. ಜನರು ಮಾರುಕಟ್ಟೆಯಲ್ಲಿ ಸಿಗುವ ಎತ್ತುಗಳನ್ನು ತೆಗೆದುಕೊಂಡು ಹೋಗಿ ಮನೆಯಲ್ಲಿಟ್ಟು ಪೂಜೆ ಪೂಜೆ ಮಾಡುತ್ತಾರೆ.

ಪುರಾತನ ಕಾಲದಿಂದಲೂ ಕೂಡ ರೈತ ಸಮುದಾಯ ಮಣ್ಣೆತ್ತಿನ ಅಮಾವಾಸ್ಯೆಯನ್ನು ಸಂಭ್ರಮದಿಂದ ಆಚರಿಸುತ್ತಾ ಬಂದಿದ್ದಾರೆ.ಇದೀಗ ಹಬ್ಬಗಳು ಕಳೆ ಕಳೆದುಕೊಂಡರು ಕೂಡಾ, ಇನ್ನು ಸಂಪ್ರದಾಯಗಳು ನಿಂತಿಲ್ಲಾ. ಮಣ್ಣೆತ್ತಿನ ಅಮಾವಾಸ್ಯೆಯಂದು ಮಣ್ಣಿನ ಎತ್ತುಗಳನ್ನು ಪೂಜಿಸಿ, ರೈತರು ಕೃತಾರ್ಥರಾಗುತ್ತಾರೆ.

**- ಹನುಮಂತ ಮ. ದೇಶಕುಲಕರ್ಣಿ**
**9480364915**

## ಸ್ವಾಮಿಯ ಆಲಯದಲ್ಲಿ ಸೆಲ್‌ಫೋನ್ ನಿಷೇಧ

ತಿರುಮಲೆ ಸ್ವಾಮಿಯವರ ಆಲಯದಲ್ಲಿ ಸೆಲ್‌ಫೋನ್,ಕೆಮರಾ, ಇತರ ಎಲೆಕ್ಟ್ರಾನಿಕ್ ವಸ್ತುಗಳನ್ನು ನಿಷೇಧಿಸಲಾಗಿದೆ. ನಿಷೇಧಿಸಿದ ವಸ್ತುಗಳೊಂದಿಗೆ ಭಕ್ತರು ಕಂಡು ಬಂದರೆ ಅಂತಹ ವ್ಯಕ್ತಿಯರನ್ನು ಆಲಯದೊಳಗೆ ಅನುಮತಿಸಲಾಗುವುದಿಲ್ಲ. ಆದ್ದರಿಂದ ಭಕ್ತರು ತಿ.ತಿ.ದೇ.ಯೊಂದಿಗೆ ಸಹಕರಿಸಬೇಕಾಗಿ ಕೋರಲಾಗಿದೆ.

**- ಕಾರ್ಯನಿರ್ವಹಣಾಧಿಕಾರಿ**



ಧಾರಾವಾಹಿ

## ಶ್ರೀ ಪ್ರಸನ್ನವೆಂಕಟ ದಾಸಾರ್ಯವಿರಚಿತ
## "ಪ್ರಸನ್ವೇಂಕಟಾ ಪರಬ್ರಹ್ಮ ಮುಕುಟಾ"
### ಆತ್ಮ ನೀವೇದನೆ ಕೀರ್ತನೆಯ ಒಳನೋಟ

– ಡಾ॥ ಸುಭಾಸ ಕಾಖಂಡಕಿ
79754 42458

ಪ್ರಸನ್ವೇಂಕಟಾ ಪರಬ್ರಹ್ಮ ಮುಕುಟಾ ॥ ಪ॥
ನೀ ಸರಿ ಸಮಯದಿ ಕೈಸೇರಿ ಸಲಹಿದಿ ।
ವಾಸವಸುತ ನಿನ್ನ ದಾಸನೆಂದೆನಿಸಿದಿ ॥ ಅ.ಪ॥

ಶ್ರೀನಿವಾಸನಿಂದ ಅಂಕಿತ ಪಡೆದ ಪ್ರಸನ್ನವೆಂಕಟ ದಾಸರು, ಆ ವೆಂಕಟಪತಿಯನ್ನೇ - "ಪ್ರಸನ್ವೇಂಕಟಾ" (ಬಾಲಕ ವೆಂಕಟೇಶನಿಗೆ ಪ್ರಸನ್ನನಾದವನೇ) ಎಂದು ಸಂಬೋಧನೆಗೈದು- "ಭಗವಂತ ನೀನು ಬ್ರಹ್ಮಾದಿ ದೇವತೆಗಳಿಗೆ ಪರಬ್ರಹ್ಮ ನೆನಿಸಿ, ಅವರೆಲ್ಲರಿಗೂ ಮುಕುಟ ಮಣಿಯಂತಿರುವಿ" ಎಂದು ವಿಶಿಷ್ಟ ರೀತಿಯಿಂದ ವರ್ಣನೆ ಮಾಡುತ್ತಾ ಮತ್ತೆ ಆತ್ಮ ನೀವೇದನೆಯಲ್ಲಿ ಸ್ತುತಿಸಿದ್ದಾರೆ-"ಭಗವಂತ ನನ್ನ ಕಷ್ಟ ಕಾಲದಲ್ಲಿ ನನ್ನ ಕೈ ಹಿಡಿದು ಉದ್ಧರಿಸಿ ಸಲುಹಿ ನಿನ್ನ ದಾಸನೆಂದು ನನ್ನನ್ನು ನಿನ್ನ ಚರಣ ಕಮಲದಲ್ಲಿ ಇರಿಸಿಕೊಂಡೆ ಎನ್ನುತ್ತಾರೆ.

**ನುಡಿ - ೧ ರಲ್ಲಿ**

ನರಹರಿ ತೀರ್ಥರು, ಶ್ರೀಪಾದರಾಯರು
ಸಿರಿಕೃಷ್ಣಾಂಕಿತ ವ್ಯಾಸ ತೀರ್ಥರು
ಕುರುಬಕನಕಗೆ ಕೇಶವನಾದಿ
ನಾರದ ದ್ಯುಮಣಿ ಪುರಂದರವಿಠ್ಠಲ
ಪರಿಪರಿಯಲಿ ನೀ ಪ್ರಸನ್ನನಾಗುತ
ಪೊರೆದೆಯೊ ಜಗ ಪರಿಪೂರ್ಣರೂಪದಲಿ ॥1॥

ದಾಸರು ಇಲ್ಲಿ ದಾಸ ಪರಂಪರೆಯ ವೈಶಿಷ್ಟವನ್ನು ಹೇಳುತ್ತ ತಮಗೆ ಹೇಗೆ ಪ್ರಸನ್ನೇಂಕಟನಾದೆಯೊ ಹಾಗೆ ನರಹರಿ ತೀರ್ಥರಿಗೆ ರಘುಕುಲತಿಲಕ, ರಘುಪತಿಯಾಗಿ ಶ್ರೀ ಪಾದರಾಜರಿಗೆ ರಂಗವಿಠಲನಾಗಿ, ವ್ಯಾಸರಾಜರಿಗೆ ಸಿರಿಕೃಷ್ಣಾಂಕಿತನೆನಸಿ ಕನಕನಿಗೆ ಕೇಶವನಾಗಿ ನಾರದರ ಅಂಶವುಳ್ಳ ಪುರಂದರದಾಸರಿಗೆ 'ಪುರಂದರವಿಠ್ಠನಾಗಿ ಈ ಎಲ್ಲ ಹರಿ ಭಕ್ತರಿಗೆ ಹರಿದಾಸರಿಗೆ ಪರಿ-ಪರಿಯಿಂದ,ನಾನಾ ವಿಧವಾಗಿ ಪ್ರಸನ್ನನಾಗುತ ಈ ಎಲ್ಲ ವಿಶೇಷನಾಮಗಳಿಂದ ಜಗವನ್ನು ಪೊರೆದಯಾ ಎನ್ನುತ್ತ ದಾಸರು ಆಯಾ ದಾಸರ ಅಂಕಿತದ ವಿಶೇಷತೆಯನ್ನು ಹಾಡಿ ಹೊಗಳಿದ್ದಾರೆ. ಈ ನುಡಿಯಲ್ಲಿ ಪ್ರಸನ್ನ ವೆಂಕಟದಾಸರು ಬಹಳ ಮಹತ್ವವಾದ ಐತಿಹಾಸಿಕ ಸಂಗತಿಯನ್ನು ಬಿಚ್ಚಿಟ್ಟಿದ್ದಾರೆ. ಹಿಂದಿನ ತಲೆಮಾರಿನ ಹಲವಾರು ವಿದ್ವಾಂಸರು ರಘುಪತಿ. ರಘುಪತಿ ತಿಲಕ ಅಂಕಿತದಿಂದ ದೊರೆತ ಕೆಲವೇ ಕೀರ್ತನೆಗಳು ನರಹರಿ ತೀರ್ಥರು ರಚಿಸಿದ್ದೆಂದು ಹೇಳುವುದು ಸಂದಿಗ್ಧ. ಅವರು ಮೂಲತಃ ಓರಿಸ್ಸಾ ರಾಜ್ಯದಿಂದ ಬಂದವರೂ ಅವರು ಮೊಟ್ಟ ಮೊದಲು ಕನ್ನಡದಲ್ಲಿ ಕೀರ್ತನೆ ರಚಿಸಿ ಹರಿದಾಸ ಸಾಹಿತ್ಯದ ಉಗಮಕ್ಕೆ ನಾಂದಿ ಹಾಡಿದರೆಂದು ಹೇಳುವುದು ಕಷ್ಟ ಸಾಧ್ಯವೆಂದು ದಾಖಲಿಸಿದ್ದಾರೆ. ಆದರೆ ಪ್ರಾಚೀನ ಹರಿದಾಸರಾದ ಪ್ರಸನ್ನ ವೆಂಕಟದಾಸರು ನರಹರಿತೀರ್ಥರನ್ನೇ ಮೊದಲು ಉಲ್ಲೇಖಿಸಿ ಕನ್ನಡದ ಹರಿದಾಸ ಸಾಹಿತ್ಯದ ಉಗಮ ನರಹರಿ ತೀರ್ಥರಿಂದ ಪ್ರಾರಂಭವಾಯಿತೆಂದು ಸೂಚಿಸಿರುವುದನ್ನು ಈ ನುಡಿಯಲ್ಲಿ ಕಾಣಬಹುದು.

**ನುಡಿ - ೨ ರಲ್ಲಿ**

"ನೂರೆಂಟು ಜನುಮದ ಕರ್ಮ ಬಂಧನ ।
ತರಿದು ಪೊರೆದೆಯೊ ಗರುಡವಾಹನ
ಹರಿದಾಸನ ಪದ ರುಚಿ ಎನಗುಣಿಸಿ
ಮರುತಮತಾಂಬುಧಿ ಮಜ್ಜನ ಗೈಸಿದಿ ಹರಿ
ಹರಿ ಸರ್ವೋತ್ತಮ ವಾಯುಜೀವೋತ್ತಮ
ನರನಾಡಿಗಳಲಿ ಉಸಿರಾಗಿರಿಸಿದಿ ॥2॥

ಈ ನುಡಿಯಲ್ಲಿ ದಾಸರು ಹರಿದಾಸರಾಗಿ ನಡೆದು ಬಂದ ವಿಶೇಷತೆಯನ್ನು ಕಾಣುತ್ತೇವೆ.ದಾಸರು ಬಹಳ ಆರ್ತರವದ ಧ್ವನಿಯಲ್ಲಿ ಹೇಳಿ ಕೊಂಡಿದ್ದಾರೆ. "ತಮ್ಮ ನೂರೆಂಟು ಜನುಮದ ಎಲ್ಲ ಕರ್ಮ ಬಂಧನಗಳನ್ನು ತೊಡೆದು ಹಾಕಿ ಪರಿಹರಿಸಿ,

ನನ್ನನ್ನು ಈ ಭವ ಬಂಧನದಿಂದ ರಕ್ಷಣೆ ಮಾಡಿದ್ದಿಯಾ ಉದ್ಧಾರದ ಹಾದಿ ತೋರಿದ್ದೀಯಾ ಕರುಣಾಳು ಆದ ಶ್ರೀಹರಿಯೇ ! ನೀನು ನನಗೆ ಹರಿದಾಸ ದೀಕ್ಷೆ ಕೊಟ್ಟು, ನಿನ್ನ ಚರಣ ಸೇವಕನನ್ನಾಗಿ ಮಾಡಿ, ದಾಸತ್ವದ ಸವಿ ಎನೆಂಬುದನ್ನು ನನಗೆ ಹೃದಯ ತುಂಬ ಉಣಿಸಿದ್ದೀಯಾ, ಇದಕ್ಕಿಂತ ಭಾಗ್ಯವುಂಟೇ ನನಗೆ ಸ್ವಾಮಿ ! ಅಜ್ಞಾನಿಯಾದ ನನಗೆ ಜ್ಞಾನದ ಕಣ್ಣು ಕೊಟ್ಟು-ಮಧ್ವಮತದ ಅಂಬುಧಿಯಲ್ಲಿ ಸಾಗರದಲ್ಲಿ ಮಜ್ಜನ ಗೈಸಿದಿ. ಹರಿ ಸರ್ವೋತ್ತಮತ್ವದ ಜ್ಞಾನ ನೀಡಿ ಮಧ್ವಮತದ ಸಿದ್ಧಾಂತದ ತತ್ವತೆಯನ್ನು ನನ್ನ ನರನಾಡಿಗಳಲ್ಲಿ ಹರಿಸಿ ಅದನ್ನೇ ಉಸಿರಾಗಿಸಿದೆ"ಎಂದು ಭಗವಂತನನ್ನು ಮನದುಂಬಿ ಸ್ತುತಿಸಿದ್ದಾರೆ.

**ಇನ್ನು ಕೊನೆಯ ನುಡಿಯಲ್ಲಿ**

ಸೃಷ್ಟಿಗೆ ಸ್ಥಿತಿಲಯ ಇಟ್ಟು ಪೊರೆದೆಯೊ
ಮೆಟ್ಟಿನಿಂತ ಅಖಿಲಾಧಮಖಳರಾ
ಪುಟ್ಟಬಾಲಕ ಧ್ರುವ ಪ್ರಲ್ಹಾದರಿಗೆ
ಪಟ್ಟವ ಕಟ್ಟಿದ ವಿಷ್ಣು ಮನೋಹರ
ಸೃಷ್ಟೀಶ ಸಿರಿಪ್ರಸನ್ವೇಂಕಟ ವಿಠಲನೇ ।
ದೃಷ್ಟಿ ನಿನ್ನಲ್ಲಿ ಕೊಟ್ಟು ಪೊರೆಯೊ ಹರಿ ॥3॥

ಜಗನ್ನಿಯಾಮಕನಾದ ಭಗವಂತನನ್ನು ಇಲ್ಲಿ ಸೃಷ್ಟಿ - ಸ್ಥಿತಿ - ಲಯಕ್ಕೆ ಕಾರಣ ನೆನೆಸಿ ಜಗತ್ತನ್ನು ಪೊರೆಯುವವ ನೀನು ಎನ್ನುತ್ತ, ಹಾಗೆಯೇ ಭೂಮಂಡಲದಲ್ಲಿದ್ದ ಎಲ್ಲ ದುಷ್ಟ ಶಕ್ತಿಗಳನ್ನು ಅಧಮರನ್ನು ಖಳರನ್ನು ಮೆಟ್ಟಿನಿಂತು ಅವರ ಸಂಹಾರ ಮಾಡಿದೆ. ಹಾಗೆಯೇ, ಬಾಲಕ ಪ್ರಲ್ಹಾದ ಧ್ರುವರಬಾಲ ಭಕ್ತಿಗೆ ಮೆಚ್ಚಿ ಅವರವರ ಸ್ಥಾನಕ್ಕೆ ಅವರವರನ್ನು ಪಟ್ಟ ಕಟ್ಟಿ ಶಿಷ್ಯರನ್ನು ಪೊರೆದೆ. ಇಂಥಹ ಅಗಾಧ ಮಹಿಮೆಯುಳ್ಳ ಸೃಷ್ಟೀಶನೆಂದೆ ಸ್ತುತಿಸಲ್ಪಡುವ ಪ್ರಸನ್ವೇಂಕಟ ವಿಠಲನೆ -ಈ ನಿನ್ನ ದಾಸಾನುದಾಸ ನಾದ ನನಗೆ ಜ್ಞಾನದ ದೃಷ್ಟಿ ಕೊಟ್ಟು ಅನಂತ ಕಾಲವು ನಿನ್ನಲ್ಲಿ ಮನ ನಿಲ್ಲುವಂತೆ ಮಾಡಿ ಪೊರೆಯೋ ಎನ್ನುವಲ್ಲಿ ದಾಸರು ಭಗವಂತನಲ್ಲಿಟ್ಟ ಭಕ್ತಿಯ ಆಳ ಎಷ್ಟಿತ್ತೆಂದು ಅರಿವಾಗುತ್ತದೆ. ಇಂಥಹ ಅಪೂರ್ವವಾದ ಕೀರ್ತನೆಯ ಮೂಲ ತಾಳೆಗರಿ ಹಸ್ತ ಪ್ರತಿ ನೂರಾರು ವರ್ಷಗಳಿಂದ ಅಜ್ಞಾತವಾಗಿ ಉಳಿದಿತ್ತು. ಸುಮಾರು ಹತ್ತು ವರ್ಷಗಳ ಹಿಂದೆ ಹಸ್ತ ಪ್ರತಿಶೋಧಕರಾದ ಡಾ.ಲಕ್ಷ್ಮಿಕಾಂತ ಪಾಟೀಲರು ಶೋಧಿಸಿಕೊಟ್ಟರು.ಅದನ್ನು ಶುದ್ಧ ಪಾಠ ಮಾಡಿ ಮೂಲ ಹಸ್ತ ಪ್ರತಿಯೊಂದಿಗೆ ಸಂಪಾದಿಸಿ ಶ್ರೀ ಪ್ರಸನ್ನ ವೆಂಕಟದಾಸರ ಸಮಗ್ರ ಕೀರ್ತನೆಗಳು ಸಂಪುಟ-೧ರಲ್ಲಿ ಪ್ರಕಟಿಸಿದ್ದರಿಂದ ಇಂದು ಪ್ರಚಲಿತಗೊಂಡಿದೆ.

## ತಿರುಮಲೆಯಲ್ಲಿ ನೋಡುವ ಪ್ರದೇಶಗಳು

### ಸ್ವಾಮಿಪುಷ್ಕರಿಣಿ :

ಸ್ವಾಮಿಪುಷ್ಕರಿಣಿ ತಿರುಮಲೆಯಲ್ಲಿ ಆಲಯದ ಪಕ್ಕದಲ್ಲಿದೆ. ಭಕ್ತರು ಆಲಯದಲ್ಲಿ ಪ್ರವೇಶಿಸುವ ಮೊದಲು ಈ ಪುಷ್ಕರಿಣಿಯಲ್ಲಿ ಸ್ನಾನ ಮಾಡು ತ್ತಾರೆ. ಇಲ್ಲಿ ಸ್ನಾನ ಮಾಡಿದರೆ ದೇಹವೇ ಅಲ್ಲದೇ ಮನಸ್ಸು ಕೂಡಾ ಪರಿಶುದ್ಧವಾಗುತ್ತದೆ.

### ಆಕಾಶಗಂಗ :

ಈ ತೀರ್ಥ ಆಲಯದಿಂದ ಉತ್ತರಕ್ಕೆ 5 ಕಿ.ಮೀ ದೂರದಲ್ಲಿದೆ.

### ಪಾಪವಿನಾಶನ :

ಈ ತೀರ್ಥ ಗುಡಿಗೆ ಉತ್ತರಕ್ಕೆ 5 ಕಿ.ಮೀ. ದೂರದಲ್ಲಿದೆ.

### ವೈಕುಂಠತೀರ್ಥ :

ಈ ತೀರ್ಥ ಗುಡಿಗೆ ಉತ್ತರಕ್ಕೆ 5 ಕಿ.ಮೀ. ದೂರದಲ್ಲಿದೆ.

### ತುಂಬುರುತೀರ್ಥ :

ಈ ತೀರ್ಥ ಗುಡಿಗೆ ಉತ್ತರಕ್ಕೆ 16 ಕಿ.ಮೀ. ದೂರದಲ್ಲಿದೆ.

### ಶಿಲಾತೋರಣ :

ಭೌಗೋಳಿಕ ಪರಿಣಾಮದಿಂದ ಸಹಜಸಿದ್ಧವಾಗಿರುವ ಶಿಲಾ ತೋರಣ.ಗುಡಿಗೆ ಉತ್ತರಕ್ಕೆ ಒಂದು ಕಿಲೋ ಮೀಟರು ದೂರದಲ್ಲಿದೆ.

### ತಿ.ತಿ.ದೇ ಉದ್ಯಾನವನಗಳು :

ದೇವಸ್ಥಾನದವರು ತಿರುಮಲೆಯಲ್ಲಿ ಶೋಭಾಯಮಾನವಾದ ಉದ್ಯಾನವನಗಳನ್ನು ಬೆಳೆಸುತ್ತಿದ್ದಾರೆ. ಇಲ್ಲಿ ಅಪುರೂಪವಾದ ಗಿಡಗಳು, ವೃಕ್ಷಗಳು ಅಭಿವೃದ್ಧಿಯಾಗುತ್ತಿವೆ.

### ಆಸ್ಥಾನಮಂಡಪ :

ಹಿಂದೂ ಧರ್ಮ ಪ್ರಚಾರಪರಿಷತ್ತು ಅವರ ಆಧ್ವರ್ಯದಲ್ಲಿ ನಿರ್ವಹಿಸುವ ಧಾರ್ಮಿಕ ಉಪನ್ಯಾಸಗಳು, ಹರಿಕಥೆ, ಸಂಗೀತ, ಭಜನೆ ಕಾರ್ಯಕ್ರಮಗಳಿಗೆ ವೇದಿಕೆಯಾಗಿ ಉಪಯೋಗಿಸಲ್ಪಡುತ್ತಿರುವ ಸಭಾ ಮಂಡಪ.

### ಶ್ರೀವೆಂಕಟೇಶ್ವರ ಧ್ಯಾನಮಂದಿರ(ಎಸ್.ವಿ.ಮ್ಯೂಜಿಯಂ) :

ಅಪುರೂಪವಾದ ಪುರಾವಸ್ತು ಪ್ರದರ್ಶನ, ಚಿತ್ರ, ಶಿಲ್ಪಕಳಾ ರೂಪಗಳಿಗೆ, ಧ್ಯಾನಕ್ಕೆ ಕೇಂದ್ರವಾಗಿ ಭಕ್ತರನ್ನು ಆಕರ್ಷಿಸುತ್ತಿದೆ. ಭಕ್ತರು ಭಗವಂತನನ್ನು ಧ್ಯಾನಿಸುತ್ತಾ ಮಾನಸಿಕ ಒತ್ತಡವನ್ನು ಕಳೆದುಕೊಳ್ಳಬಹುದು.



# ದಿನಚರ್ಯೆ - ಆಯುರ್ವೇದದ ಆರೋಗ್ಯ ಸೂತ್ರ


ಡಾ|| ಎಸ್.ಬಿ.ಎ.ಸಂಧ್ಯಾ
94495 05577


## ಪ್ರಾತರುತ್ತಾನ

**ವಿವೇಕ:** ನಮಸ್ಕಾರ ಡಾಕ್ಟ್ರೇ!! ಶುಭೋದಯ.

**ವೈದ್ಯ:** (ಗಡಿಯಾರವನ್ನು ನೋಡುತ್ತಾ) ಈಗ ಶುಭೋದಯ, ಅಲ್ಲ ಶುಭ ಮಧ್ಯಾಹ್ನವಾಗಿದೆ, ಗಂಟೆ 12 ಆಯಿತು.

**ವಿವೇಕ:** ಹೋ.. ಅದಾ, ರಾತ್ರಿ ತುಂಬಾ ಲೇಟಾಗಿ ಮಲಗಿದೆ ಅದಕ್ಕೆ ಲೇಟಾಗಿ ಎದ್ದೆ.

**ವೈದ್ಯ:** ದಿನಚರ್ಯೆಯ ಬಗ್ಗೆ ತಿಳಿದುಕೊಳ್ಳಲು ಇಚ್ಛಿಸುವ ನೀನು ಸೂರ್ಯ ಹುಟ್ಟುವುದಕ್ಕೂ ಮುಂಚೆ ಏಳುವ ಬದಲು ಸೂರ್ಯ ನೆತ್ತಿಗೆ ಬಂದಾಗ ಏಳುತ್ತೀಯಲ್ಲಾ??

**ವಿವೇಕ:** ಏನು ಹೇಳುತ್ತಿರುವಿರಿ ಡಾಕ್ಟ್ರೇ ಬೆಳಗ್ಗಿನ ಜಾವ 4-5 ಗಂಟೆಗೇ ಏಳಬೇಕಾ!!ಕೆಲಸವಿರುವವರು ಬೇಗ ಏಳಬೇಕಪ್ಪಾ, ನನಗೆ ಅಂತಹ ಕೆಲಸವೇನೂ ಇಲ್ಲ, ಹಾಗಿದ್ದ ಮೇಲೆ ನಾನೇಕೆ ಬೆಳಗ್ಗೆ ಏಳಬೇಕು.

**ವೈದ್ಯ:** ಕೆಲಸವಿರುವವರು, ಇಲ್ಲದವರು ಅನ್ನುವುದಕ್ಕಿಂತಲೂ, ಪ್ರತಿಯೊಬ್ಬರೂ ಸೂರ್ಯ ಹುಟ್ಟುವುದಕ್ಕೂ ಮುಂಚೆ ಏಳಬೇಕು. ಈ ಕಾಲವನ್ನು "ಬ್ರಾಹ್ಮಿ ಮುಹೂರ್ತ" ಎನ್ನುತ್ತಾರೆ. ಈ ಹೊತ್ತಿನಲ್ಲಿ ಏಳುವುದರಿಂದ ಆರೋಗ್ಯ ಹೆಚ್ಚುತ್ತದೆ ಮತ್ತು ಮನಸ್ಸಿಗೆ ಸಮಾಧಾನ ಸಿಗುತ್ತದೆ. ಇಡೀ ದಿನದಲ್ಲಿ ಹೆಚ್ಚು ಪ್ರಶಾಂತವಾದ ಕಾಲವೆಂದರೆ ಈ ಬ್ರಾಹ್ಮೀ ಮುಹೂರ್ತವೇ ಆಗಿದೆ.

**ವಿವೇಕ:** ಹೊರಗಿನ ವಾತಾವರಣದಲ್ಲಿ ಇರುವ ಪ್ರಶಾಂತತೆಯು ನಮ್ಮಲ್ಲಿಯೂ ಶಾಂತತೆಯನ್ನುಂಟು ಮಾಡುತ್ತದೆ ಅಲ್ಲವಾ..

**ವೈದ್ಯ:** ಹೌದು , ಪ್ರಶಾಂತವಾದ ಮನಸ್ಸಿಗೆ ಸತ್ ಚಿಂತನೆಗಳೇ ಬರುತ್ತದೆ. ಲೇಟಾಗಿ ಎದ್ದಾಗ ಏಳುತ್ತಲೇ ಆಫೀಸ್ ಟಾರ್ಗೆಟ್, ಡೆಡ್ ಲೈನ್ ಹೀಗೆ ಮನಸ್ಸಿಗೆ ಕ್ಷೋಭೆಗೊಳಿಸುವ ವಿಷಯಗಳನ್ನು ಮೊಬೈಲ್‌ನಲ್ಲಿ ನೋಡುತ್ತಾ ಗಾಬರಿಯಿಂದ ಏಳುವುದರೊಂದಿಗೆ ದಿನ ಆರಂಭವಾಗುತ್ತದೆ. ಸ್ವಲ್ಪ ಬೇಗ ಎದ್ದರೆ ಸಮಾಧಾನವಾಗಿ ಎದ್ದು, ನಮ್ಮ ದಿನವನ್ನು ಕ್ರಮಬದ್ಧವಾಗಿ ರೂಪಿಸಿಕೊಳ್ಳುವುದರೊಂದಿಗೆ, ನಿಧಾನವಾಗಿ ಎಲ್ಲಾ ಕೆಲಸವನ್ನು ಅಚ್ಚುಕಟ್ಟಾಗಿ ಮಾಡಿಕೊಳ್ಳಬಹುದು ಅಲ್ಲವಾ!!

**ವಿವೇಕ:** ಈ ಹೊತ್ತಿನಲ್ಲಿ ಧ್ಯಾನ ಮಾಡಬಹುದಾ??

**ವೈದ್ಯ:** ಧ್ಯಾನ ಮಾಡಲು ಇದು ಸೂಕ್ತವಾದ ಸಮಯ. ಧ್ಯಾನದಿಂದ ಮನಸ್ಸಿಗೆ ಬಲ ಹೆಚ್ಚುತ್ತದೆ. ಮನಸ್ಸು ದೃಢವಾಗುತ್ತದೆ. ಶಾಂತ ಸದೃಢವಾದ ಮನಸ್ಸೇ ಸದೃಢವಾದ ಆರೋಗ್ಯದ ಬುನಾದಿ.

ನೀನು ಪಠ್ಯ ಪುಸ್ತಕದಲ್ಲಿ ಓದಿರಬಹುದು ಈ ಕಾಲದಲ್ಲಿ ಓಜೋನ್ ಲೇಯರ್ ಹೆಚ್ಚಾಗಿರುತ್ತದೆ ಎಂದು. ಹಾಗಾಗಿಯೇ ಈ ಹೊತ್ತಿನಲ್ಲಿ ಏಳುವುದರಿಂದ ನಮಗೆ ಆಮ್ಲಜನಕದ ಪೂರೈಕೆ ಚೆನ್ನಾಗಿ ಆಗುತ್ತದೆ. ಇದರಿಂದ ನಮ್ಮ ಕಾರ್ಯಕ್ಷಮತೆಯು ದ್ವಿಗುಣವಾಗುತ್ತದೆ.

**ವಿವೇಕ:** ಓ..ಹೋ!! ಹಾಗಾದರೆ ನಮ್ಮ ಪೂರ್ವಜರಿಗೆ ಓಜೋನ್ ಲೇಯರ್ ಬಗ್ಗೆ ತಿಳಿದಿತ್ತಾ !!

**ವೈದ್ಯ:** ಹೌದು, ನಮ್ಮ ಚರಕಾಚಾರ್ಯರು ಹೀಗೆ ಹೇಳುತ್ತಾರೆ. "ಜೀವಿಗಳ ಸೌಖ್ಯವನ್ನು ಹೆಚ್ಚಿಸುವ ಸೋಮ ಶಕ್ತಿಯು ಈ ಕಾಲದಲ್ಲಿ ಹೆಚ್ಚಾಗಿರುತ್ತದೆ" ಎಂದು. ಈ ಸೋಮ ಶಕ್ತಿಯೇ ಓಜೋನ್ ಲೇಯರ್ ಎಂದು ನಾವು ತಿಳಿದುಕೊಳ್ಳಬಹುದು.

ಅಷ್ಟೇ ಅಲ್ಲ, ಬ್ರಾಹ್ಮಿ ಮುಹೂರ್ತದ ಸೂರ್ಯನ ಅಣು ಕಿರಣಗಳಲ್ಲಿ ಕೀಟನಾಶಕ ಗುಣವೂ ಇರುತ್ತದೆ. ಈ ಕಿರಣಗಳು ನಮ್ಮ ತನು ಮನಗಳಲ್ಲಿರುವ ರೋಗಾಣುಗಳನ್ನು ನಾಶಮಾಡಿ, ನಾವು ರೋಗಗಳಿಗೆ ತುತ್ತಾಗದಂತೆ ನೋಡಿಕೊಳ್ಳುತ್ತದೆ.

**ವಿವೇಕ:** ಮತ್ತೆ ಡಾಕ್ಟ್ರೇ ಈ ಬ್ರಾಹ್ಮಿ ಮುಹೂರ್ತ ನನ್ನ 80 ವರ್ಷ ತಾತನಿಗೂ ಅನ್ವಯಿಸುತ್ತದಾ.

**ವೈದ್ಯ:** "ಎವರಿ ರೂಲ್ ಹ್ಯಾಸ್ ಎನ್ ಎಕ್ಸಪ್ಷನ್" ಅಂತ ಕೇಳಿದ್ದೀಯಾ. ಸಣ್ಣ ಮಕ್ಕಳು, ರೋಗಿಗಳು ಮತ್ತು ವೃದ್ಧರಿಗೆ ಇದು ಅನ್ವಯಿಸುವುದಿಲ್ಲ. ಆದರೆ ಯಾರು ಸಣ್ಣ ವಯಸ್ಸಿನಿಂದಲೂ ಬೆಳಗ್ಗೆ ಏಳುವುದನ್ನು ಅಭ್ಯಾಸ ಮಾಡಿಕೊಂಡಿರುತ್ತಾರೋ ಅವರಿಗೆ ಎಷ್ಟೇ ವಯಸ್ಸಾದರೂ ಬೆಳಗ್ಗೆ ಬೇಗನೇ ಎಚ್ಚರವಾಗಿ ಬಿಡುತ್ತದೆ.

**ವಿವೇಕ:** ನೀವೇನೋ ಹೇಳಿ ಬಿಡುತ್ತೀರ ಬೆಳಗ್ಗೆ 5 ಕ್ಕೇ ಏಳಬೇಕು ಅಂತ, ಆದರೆ ಪರೀಕ್ಷೆ ಇರುವ ದಿನಗಳಲ್ಲಿ ರಾತ್ರಿ ಎದ್ದು ಓದಬೇಕಾದ ವಿದ್ಯಾರ್ಥಿಗಳು ಮತ್ತು ರಾತ್ರಿ ಪಾಳಿ (ಶಿಫ್ಟ್)ಯಲ್ಲಿ ಕೆಲಸ ಮಾಡುವವರು ಏನು ಮಾಡಬೇಕು?

**ವೈದ್ಯ:** ಅನಿವಾರ್ಯವಾಗಿ ರಾತ್ರಿ ಎದ್ದಿರಬೇಕಾದ ಸಂದರ್ಭದಲ್ಲಿ ರಾತ್ರಿಯನ್ನು ಹಗಲಿನಂತೆ ಮತ್ತು ಹಗಲನ್ನು ರಾತ್ರಿಯಂತೆ ಪರಿಗಣಿಸಿ, ದಿನಚರ್ಯೆಯನ್ನು ರಾತ್ರಿ ವೇಳೆಗೆ ಪ್ರಾರಂಭಿಸಿ, ಹಗಲು ಮಲಗುವ ಮಂಚೆ ರಾತ್ರಿಚರ್ಯೆಯನ್ನು ಅನುಸರಿಸ ಬೇಕು. ಹೀಗೆ ಮಾಡಲು ದೇಹವು. ಬದಲಾದ ಚರ್ಯೆಗೆ ಹೊಂದಿಕೊಂಡು ಆರೋಗ್ಯವನ್ನು ತಕ್ಕಮಟ್ಟಿಗೆ ಕಾಪಾಡಿ ಕೊಳ್ಳಲು ಸಹಾಯಕವಾಗುತ್ತದೆ.

**ವಿವೇಕ:** "ಕರಾಗ್ರೇ ವಸತೆ ಲಕ್ಷ್ಮೀ" ಎಂದು ಹೇಳಿಕೊಂಡು ಕೈಗಳನ್ನು ನೋಡುತ್ತಾ ಏಳುವ ಮಹತ್ವವೇನು?

**ವೈದ್ಯ:** ನಮ್ಮ ಬದುಕು ನಮ್ಮ ಕೈಯಲ್ಲಿಯೇ ಇದೆ ಅದನ್ನು ರೂಪಿಸಿಕೊಳ್ಳ ಬೇಕಾದರು ನಾವೇ, ಎಂದು ಈ ಕ್ರಿಯೆ ಮನವರಿಕೆ ಮಾಡಿಸುತ್ತದೆ ಮತ್ತು ನಮ್ಮನ್ನು ಇಷ್ಟರ ಮಟ್ಟಿಗೆ ಕಾಪಾಡುತ್ತಿರುವ ದೇವರನ್ನು ಸ್ಮರಿಸಿ, ನಮ್ಮಗಿರುವ ಪ್ರತಿಯೊಂದು ವಿಷಯಕ್ಕೂ ಕೃತಜ್ಞತಾ ಭಾವದಿಂದ ಎದ್ದಾಗ ನಮ್ಮ ದಿನವು ಶುಭವಾಗಿರು ವುದರಲ್ಲಿ ಸಂಶಯವಿಲ್ಲ.

**ವಿವೇಕ:** ಹಾಗಾದರೆ ಮುಂದಿನ ಚರ್ಯೆ ಏನು??

**ವೈದ:** ಇದನ್ನು ಯಾರೇನು ತಿಳಿಸಬೇಕಾಗಿಯೇ ಇಲ್ಲ, ಎದ್ದ ತಕ್ಷಣ ಮಲ ಮೂತ್ರ ವಿಸರ್ಜನೆ ಮಾಡುವುದು ಆರೋಗ್ಯದ ಲಕ್ಷಣ. ಇದರ ಬಗ್ಗೆ ಇನ್ನೊಂದು ದಿನ ತಿಳಿಯೋಣ.

(ಸಶೇಷ)







# ಜಗನ್ನಾಥನ ರಥ ಯಾತ್ರೆಗೆ ಜನಜಾತ್ರೆ



ಡಾ॥ ಪ್ರಕಾಶ್ ಕೆ. ನಾಡಿಗ್
98455 29789

ಭಾರತದಲ್ಲಿ ಹಿಂದೂ ಧರ್ಮಾಚರಣೆಯಲ್ಲಿ ವರ್ಷ ಪೂರ್ತಿ ರಥೋತ್ಸವಗಳು ಒಂದಿಲ್ಲೊಂದು ಕಡೆ ನಡೆಯುತ್ತಲೇ ಇರುತ್ತದೆ. ಆದರೆ ಅಂಥಹ ರಥೋತ್ಸವದಲ್ಲಿ ಪ್ರಪಂಚದಲ್ಲೇ ಪ್ರಸಿದ್ಧಿ ಪಡೆದಿರುವ ರಥೋತ್ಸವ ಎಂದರೆ ಒರಿಸ್ಸಾದಲ್ಲಿ ಪುರಿ ನಗರಿಯಲ್ಲಿ ನಡೆಯುವ ಜಗನ್ನಾಥನ ರಥಯಾತ್ರೆ. ಈ ಯಾತ್ರೆಯನ್ನು ನೋಡಲು ಲಕ್ಷೋಪಾದಿಯಲ್ಲಿ ದೇಶ ವಿದೇಶಗಳಿಂದ ಭಕ್ತರು ಪುರಿಗೆ ಆಗಮಿಸುತ್ತಾರೆ. ಇದೊಂದು ಧಾರ್ಮಿಕ ರಥ ಯಾತ್ರೆಯಾಗಿದ್ದು ಇದನ್ನು ಪುರಿಯ ಪ್ರಮುಖ ದೇವರಾದ ಜಗನ್ನಾಥ, (ಕೃಷ್ಣ) ಆತನ ಸಹೋದರಿ ದೇವಿ ಸುಭದ್ರ ಹಾಗೂ ಸಹೋ ದರ ಬಲಭದ್ರ ದೇವರಿಗೆ ನಡೆಯುತ್ತದೆ. ಇದನ್ನು ದಶವತಾರ್ ಯಾತ್ರೆ, ನವದಿನ್ ಯಾತ್ರೆ , ಗುಂಡಿಚಾ ಯಾತ್ರೆ ಹಾಗೂ ಕಾರ್‌ಯೋತ್ಸವ ಮುಂತಾದ ಹೆಸರುಗಳಿಂದ ಕರೆಯುತ್ತಾರೆ. 9 ದಿನಗಳ ಕಾಲ ನಡೆಯುವ ಸುಧೀರ್ಘ ಉತ್ಸವ ಇದಾಗಿದೆ. ಈ ಬಾರಿ 2023 ರ ಜೂನ್ 19 ರಂದು ಪುರಿಯಲ್ಲಿ ರಥಯಾತ್ರೆ ನಡೆಯಲಿದೆ.

**ರಥಯಾತ್ರೆಯ ಇತಿಹಾಸ :**

ಪುರಿಯ ರಥಯಾತ್ರೆ ವಿಶ್ವದ ಅತಿ ಪುರಾತನ ಧಾರ್ಮಿಕ ಆಚರಣೆಯಾಗಿದೆ. ಹಿಂದೂ ಪುರಾಣಗಳಾದ ಪದ್ಮಪುರಾಣ, ಬ್ರಹ್ಮಪುರಾಣ ಹಾಗೂ ಸ್ಕಂದಪುರಾಣಗಳಲ್ಲಿ ರಥಯಾತ್ರೆಯ ಬಗ್ಗೆ ಉಲ್ಲೇಖವಿದೆ. ಪೌರಾಣಿಕ ಹಿನ್ನಲೆಯ ಪ್ರಕಾರ ಸುಭದ್ರೆ ಒಮ್ಮೆ ನಗರ ಪ್ರದಕ್ಷಿಣೆ ಮಾಡಬೇಕೆಂದು ಆಸೆ ವ್ಯಕ್ತ ಪಡಿಸಿದಾಗ ಸೋದರರಾದ ಕೃಷ್ಣ ಹಾಗೂ ಬಲರಾಮರು ಆಕೆಯನ್ನು ರಥದಲ್ಲಿ ಕೂಡಿಸಿ ನಗರ ಪ್ರದಕ್ಷಿಣೆ ಮಾಡಿಸಿ ಸನಿಹದಲ್ಲೇ ಗುಂಡಿಚಾ ಎಂಬಲ್ಲಿದ್ದ ಚಿಕ್ಕಮ್ಮನ ಮನೆಗೆ ಹೋಗಿ ಅಲ್ಲಿಯೇ ಏಳು ದಿನ ಇದ್ದು ವಾಪಸ್ಸು ಪುರಿಗೆ ಮರಳಿದರು. ಅಂದಿನಿಂದ ಇಲ್ಲಿ ರಥಯಾತ್ರೆ ಪ್ರಾರಂಭವಾಯಿತು ಎಂದು ಹೇಳಲಾಗುತ್ತದೆ.

ಇನ್ನೊಂದು ಕಥೆಯ ಪ್ರಕಾರ ರಥಯಾತ್ರೆ ತನ್ನ ಮಾವ ದುಷ್ಟ ಕಂಸನನ್ನು ವಧಿಸಲು ಶ್ರೀಕೃಷ್ಣ ವೃಂದಾವನದಿಂದ ಮಥುರೆಗೆ ಪ್ರಯಾಣ ಬೆಳಸಿದ ಪ್ರತೀಕವಾಗಿ ಆಚರಿಸಲಾಗುತ್ತದೆ ಎನ್ನುತ್ತಾರೆ. ಮತ್ತೊಂದು ಕಥೆಯ ಪ್ರಕಾರ ಒಡಹುಟ್ಟಿದವರು ತೀವ್ರ ಜ್ವರದಿಂದ ಬಳಲಿದಾಗ ಅವರನ್ನು ಭೇಟಿಮಾಡಿ ಆರೈಕೆ ಮಾಡಲು ತನ್ನ ಮನೆಗೆ ಕರೆದುಕೊಂಡು ಹೋಗಲು ಅವರ ಚಿಕ್ಕಮ್ಮ ಬರುತ್ತಾಳೆ ಎಂಬ ಪ್ರತೀತಿ. ಮಗದೊಂದು ಕಥೆಯ ಪ್ರಕಾರ ಭಗವಾನ್ ಶ್ರೀಕೃಷ್ಣ ತನ್ನ ಭಕ್ತರೊಂದಿಗೆ ಬೆರೆಯಲು ಹೊರ ಬರುತ್ತಾನೆ ಎಂಬ ನಂಬಿಕೆಯಿದೆ. ಕಥೆಗಳು ಏನೇ ಇರಲಿ ದೈವ ಭಕ್ತರಿಗೆ ತಮ್ಮ ಭಕ್ತಿಯ ಪರಾಕಾಷ್ಠೆಯನ್ನು ತೋರಲು ಜಗದೋದ್ಧಾರಕರನ್ನು ನೋಡಿ ಕಣ್ತುಂಬಿಕೊಳ್ಳಲು ಹಾಗೂ ರಥಯಾತ್ರೆಯಲ್ಲಿ ಸಂಭ್ರಮಿಸಲು ಇದೊಂದು ಸುಸಮಯ. ಪ್ರತಿವರ್ಷದ ಆಷಾಢ ಮಾಸದ ಶುಕ್ಲ ಪಕ್ಷದ ಎರಡನೆ ದಿನ ಈ ಯಾತ್ರೆಯನ್ನು ನಡೆಸಲಾಗುತ್ತದೆ. ಜಗನ್ನಾಥ ತನ್ನ ಸಹೋದರ ಸಹೋದರಿಯರ ಜೊತೆ ಗುಂಡಿಚಾದಲ್ಲಿರುವ ತನ್ನ ಚಿಕ್ಕಮ್ಮನ ಮನೆಗೆ ಹೋಗುತ್ತಾನೆಂಬ ಹಿನ್ನಲೆಯಲ್ಲಿ ನಡೆಸಲಾಗುವ ಯಾತ್ರೆ ಇದು. ಇಲ್ಲಿ ಚಿಕ್ಕಮ್ಮನ ಮನೆಯಲ್ಲಿ ಏಳು ದಿನ ಉಳಿದು ನಂತರ ಮತ್ತೆ ದೇವಸ್ಥಾನಕ್ಕೆ ವಾಪಸ್ಸಾಗುತ್ತಾನೆ ಎಂದು ಪ್ರತೀತಿ. ರಥಯಾತ್ರೆ ಹೊರಡುವ 14 ದಿನ ಹಿಂದೆ ಜ್ಯೇಷ್ಠ ಪೂರ್ಣಿಮೆಯಂದು ಜಗನ್ನಾಥ ದೇವರಿಗೆ ಬಲಭದ್ರ ಸುಭದ್ರರಿಗೆ 108 ಕುಡಿಕೆಯ ಸ್ನಾನ ಮಾಡಿಸಲಾಗುತ್ತದೆ. ಇದನ್ನು "ಸಹಸ್ರಧಾರಸ್ನಾನ" ಎಂದು ಕರೆಯುತ್ತಾರೆ. ಇದಕ್ಕೆ ಬಳಸುವ ನೀರಿನ ಬಾವಿಯನ್ನು ವರ್ಷಕ್ಕೊಮ್ಮೆ ಮಾತ್ರ ತೆಗೆಯಲಾಗುತ್ತದೆ. ಈ ಸ್ನಾನದ ನಂತರ ಜಗನ್ನಾಥನಿಗೆ ಜ್ವರ ಬರುತ್ತದೆ ಎಂಬ ನಂಬಿಕೆಯಿದೆ. ಆಗ ಸ್ವಾಮಿಯು 14 ದಿನ ಏಕಾಂತದಲ್ಲಿರುತ್ತಾನೆ. 14 ದಿನ ಏಕಾಂತದಲ್ಲಿದ್ದು 15ನೇ ದಿನ ಭಕ್ತರಿಗೆ ದರ್ಶನ ಕೊಟ್ಟು ಮೂರು ಜನರು ಗುಂಡಿಚಾ ಕಡೆ ಹೊರಡುತ್ತಾರೆ.

**ಜಗನ್ನಾಥನಿಗೆ ವಿಶೇಷತೆಗಳಿಂದ ಕೂಡಿದ ಭವ್ಯ ರಥ :**

ರಥಯಾತ್ರೆಗೆ ತಯಾರಾಗುವ ರಥ ಹಲವಾರು ವಿಶೇಷತೆಗಳಿಂದ ಕೂಡಿದೆ. ಈ ರಥಯಾತ್ರೆಗೆ ಪ್ರತಿವರ್ಷವೂ ಹೊಸ ರಥಗಳನ್ನೇ ಸಿದ್ಧಪಡಿಸಲಾಗುತ್ತದೆ. ಈ ರಥವನ್ನು ನಿರ್ಮಿಸಲು ಸುಮಾರು 2 ತಿಂಗಳು ಹಿಡಿಯುತ್ತದೆ. ಪ್ರತಿ ವರ್ಷದ ವೈಶಾಖ ಅಕ್ಷಯ ತೃತೀಯಾದಿಂದ ರಥದ ನಿರ್ಮಾಣ ಕಾರ್ಯಕ್ಕೆ ಚಾಲನೆ ದೊರೆಯುತ್ತದೆ. ಈ ರಥವನ್ನು ನಿರ್ಮಿಸಲೆಂದೇ ಮಂದಿರದಲ್ಲಿ ಸುಮಾರು 200 ಕ್ಕಿಂತ ಹೆಚ್ಚು ಬಡಗಿಗಳು ರಾತ್ರಿ ಹಗಲೆನ್ನದೇ ರಥವನ್ನು ನಿರ್ಮಿಸುವ ಕೆಲಸದಲ್ಲಿ ತೊಡಗುತ್ತಾರೆ. ಪ್ರತಿ ವರ್ಷದ ವಸಂತ ಪಂಚಮಿಯಿಂದ ದಶಪಲ್ಲದ ಕಾಡುಗಳಲ್ಲಿ ರಥಕ್ಕೆ ಬೇಕಾದ ವಿಶೇಷವಾದ ಬೇವಿನ ಮರದ ಕಟ್ಟಿಗೆಗಳ ಸಂಗ್ರಹ ಕಾರ್ಯ ಪ್ರಾರಂಭವಾಗಿರುತ್ತದೆ. ಇಲ್ಲಿ ಮೂರು ದೇವರಿಗೂ ಮೂರು ವಿಶೇಷ ರಥಗಳನ್ನು ನಿರ್ಮಿಸಲಾಗುತ್ತದೆ. ಜಗನ್ನಾಥನನ್ನು ಕೂರಿಸುವ ರಥಕ್ಕೆ "ನಂದಿಘೋಷ" ಎನ್ನುತ್ತಾರೆ. ಇದಕ್ಕೆ 18

ಚಕ್ರಗಳಿದ್ದು ಸುಮಾರು 46.5 ಅಡಿ ಎತ್ತರವಿರುತ್ತದೆ. ಜಗನ್ನಾಥನ ರಥವು ಕೆಂಪು ಮತ್ತು ಹಳದಿ ಬಣ್ಣದಿಂದ ಕೂಡಿರುತ್ತದೆ. ಸುಭದ್ರೆಯನ್ನು ಕೂರಿಸುವ ರಥಕ್ಕೆ "ದ್ವಾರಪಾದಲನ" ಎನ್ನುತ್ತಾರೆ. ಇದಕ್ಕೆ 14 ಚಕ್ರಗಳು ಹಾಗೂ 44.6 ಅಡಿ ಎತ್ತರವಿದ್ದರೆ, ಬಲಭದ್ರನ ರಥಕ್ಕೆ "ತಳಧ್ವಜ" ಎಂದು ನಾಮಕರಣ ಮಾಡಲಾಗಿರುತ್ತದೆ. ಇದಕ್ಕೆ 16 ಚಕ್ರಗಳು ಹಾಗೂ 45 ಅಡಿ ಎತ್ತರವಿರುತ್ತದೆ. ಸಾಲಂಕೃತಗೊಂಡ ಈ ಮೂರು ಬೃಹತ್ ರಥಗಳಲ್ಲಿ ದೇವರುಗಳನ್ನು ಕೂರಿಸಿ ರಥಯಾತ್ರೆಯನ್ನು ನೋಡುವುದೇ ಕಣ್ಣಿಗೆ ಒಂದು ಹಬ್ಬ. ಈ ರಥ ತಯಾರಿಕೆಗೆ ಒಂದೇ ಒಂದು ಮೊಳೆಯನ್ನು ಬಳಸುವುದಿಲ್ಲ. ಎಂಬುದು ವಿಶೇಷ. ಈ ಮೂರು ರಥಗಳಿಗೂ ಸುಮಾರು 50 ಮೀಟರ್ ಉದ್ದದ ದಪ್ಪ ಹಗ್ಗಗಳನ್ನು ಕಟ್ಟಲಾಗಿರುತ್ತದೆ. ರಥಯಾತ್ರೆಯಲ್ಲಿ ಭಾಗವಹಿಸುವುದರಿಂದ ಭಕ್ತರು ಆತ್ಮ ಸಾಕ್ಷಾತ್ಕಾರದ ಕಡೆ ಒಂದು ಹೆಜ್ಜೆ ಮುಂದಿಟ್ಟಾಂತಾಗುತ್ತದೆ ಎಂದೇ ಭಗವದ್ಭಕ್ತರು ನಂಬಿದ್ದಾರೆ.

**ಚಿನ್ನದ ಪೊರಕೆಯಿಂದ ಮಾರ್ಗ ಸ್ವಚ್ಛ :**

ರಥಯಾತ್ರೆ ಹೊರಡುವುದಕ್ಕೆ ಮುಂಚೆ ಪುರಿಯ ರಾಜ ಗಜಪತಿಯು ಪಲ್ಲಕ್ಕಿಯಲ್ಲಿ ಆಗಮಿಸಿ ರಥವನ್ನು ಪೂಜಿಸುತ್ತಾನೆ. ಇದನ್ನು "ಚಾರ್ ಪಹನ್ರಾ" ಎಂದು ಕರೆಯುತ್ತಾರೆ. ನಂತರ ರಥ ಹೋಗುವ ಮಾರ್ಗವನ್ನು ಚಿನ್ನದ ಪೊರಕೆಯಿಂದ ಗುಡಿಸಲಾಗುತ್ತದೆ.


ಹರಿಸೇವೆ ಮಾಡಲು ಈ ರಥಯಾತ್ರೆ ಹೇಳಿ ಮಾಡಿಸಿದ ಕಾಲ, ಬೃಹತ್ ರಥಗಳಿಗೆ ಕಟ್ಟಿರುವ ಹಗ್ಗಗಳನ್ನು ಎಳೆಯುವುದಿರಲಿ ಸ್ಪರ್ಷ ಮಾತ್ರದಿಂದಲೇ ಸಕಲ ಪಾಪಗಳು ಪರಿಹಾರವಾಗುತ್ತದೆ ಎಂಬ ನಂಬಿಕೆ ಭಕ್ತರಲ್ಲಿದೆ. ರಥಯಾತ್ರೆ ಸಾಗುವುದು ಕೇವಲ ಮೂರು ಕಿಲೋಮೀಟರ್ ಆದರೂ ಲಕ್ಷಾಂತರ ಭಕ್ತರು ಸೇರುವುದರಿಂದ ರಥಯಾತ್ರೆ ಸಾಗಲು ಹಲವು ಘಂಟೆಗಳೇ ಹಿಡಿಯುತ್ತದೆ. ಡಮರು, ನಗಾರಿ, ಮತ್ತು ಶಂಖನಾದ ಯಾತ್ರೆಗೆ ಕಳೆ ಕಟ್ಟಿರುತ್ತದೆ.ಇಲ್ಲಿರುವ ಮೂರ್ತಿ ಗಳ ಇನ್ನೊಂದು ವಿಶೇಷ ಮೂರ್ತಿ ಗಳಿಗೆ ಕೈಕಾಲು ಮತ್ತು ಉಗುರು ಗಳಿಲ್ಲ. ಹಿಂದೆ ವಿಶ್ವ ಕರ್ಮನು ಮೂರ್ತಿ ಗಳನ್ನು ಮಾಡುತ್ತಿದ್ದನು ಎಂದು ಪುರಾಣಗಳಲ್ಲಿ ಉಲ್ಲೇಖವಿದೆ. ವಿಗ್ರಹ ಮಾಡುವಾಗ ಯಾರು ಕೋಣೆಗೆ ಬರಬಾರದು ಎಂದು ವಿಶ್ವ ಕರ್ಮ ಶರತ್ತು ವಿಧಿಸಿರುತ್ತಾನೆ. ಆದರೆ ಶರತ್ತನ್ನು ಮೀರಿ ರಾಜ ಕೋಣೆಯೊಳಗೆ ಪ್ರವೇಶಿಸಿದ್ದರಿಂದ ಕೋಪಗೊಂಡು ಅಪೂರ್ಣ ವಿಗ್ರಹವನ್ನು ಬಿಟ್ಟು ವಿಶ್ವಕರ್ಮ ಹೋದನೆಂದು ಪ್ರತೀತಿ. ಹಾಗಾಗಿಯೇ ಇಲ್ಲಿ ವಿಗ್ರಹಗಳನ್ನು ಅಪೂರ್ಣವಾಗಿಯೇ ಕೆತ್ತಲಾಗುತ್ತದೆ.




**ಹೇರಾ ಪಂಚಮಿ :**

ರಥಯಾತ್ರೆಯ ಐದನೇ ದಿನವನ್ನು ಹೇರಾಪಂಚಮಿ ಎನ್ನುತ್ತಾರೆ. ರಥಯಾತ್ರೆಯ ಸಂದರ್ಭದಲ್ಲಿ ಜಗನ್ನಾಥ ಲಕ್ಷ್ಮಿಯನ್ನು ಬಿಟ್ಟು ಹೋಗಿರುತ್ತಾನೆ. ಇದರಿಂದ ಕೋಪಗೊಂಡ ಲಕ್ಷ್ಮಿ ಸುವರ್ಣ ಲಕ್ಷ್ಮಿಯಾಗಿ ಗುಂಡಿಚಾ ಮಂದಿರಕ್ಕೆ ಭೇಟಿ ನೀಡುತ್ತಾಳೆ. ಲಕ್ಷ್ಮೀಯನ್ನು ಕರೆದು ಜಗನ್ನಾಥನ ಮುಂದೆ ಕೂರಿಸಿ ಪೂಜಿಸುವುದನ್ನು ಸಹಸ್ರಾರು ಭಕ್ತರು ಕಣ್ತುಂಬಿಕೊಳ್ಳುತ್ತಾರೆ. ಅಷ್ಟೇ ಅಲ್ಲ ಜಗನ್ನಾಥ ತನ್ನನ್ನು ಬಿಟ್ಟು ಹೋದದಕ್ಕೆ ಕೋಪಗೊಂಡ ಲಕ್ಷ್ಮಿ ಜಗನ್ನಾಥನ ರಥ ನಂದಿಘೋಷದ ಒಂದು ಭಾಗವನ್ನು ಧ್ವಂಸಗೊಳಿಸುತ್ತಾಳೆ. ಈ ಪದ್ಧತಿಯನ್ನು ಸಹ ರಥಯಾತ್ರೆಯ ಸಂದರ್ಭದಲ್ಲಿ ಆಚರಿಸುತ್ತಾರೆ. ಇದನ್ನು "ರಥಭಂಗಾ" ಎಂದು ಕರೆಯುತ್ತಾರೆ. ಹೇರಾ ಪಂಚಮಿಯ ನಂತರ ಅಂದರೆ ಅಷ್ಟಮಿಯಂದು "ಸಾಂಧ್ಯಾದರ್ಶನ" ಇರುತ್ತದೆ ಈ ದಿನ ಜಗನ್ನಾಥನ ದರ್ಶನ ಮಾಡುವುದರಿಂದ ಹತ್ತು ವರ್ಷಗಳ ಕಾಲ ಹರಿನಾಮ ಸ್ಮರಣೆ ಮಾಡಿದ ಪುಣ್ಯ ಪ್ರಾಪ್ತಿಯಾಗುತ್ತದೆ ಎಂಬ ನಂಬಿಕೆ ಭಕ್ತರಲ್ಲಿದೆ. ಆಷಾಢ ಶುಕ್ಲ ದಶಮಿಯಂದು ಅಂದರೆ ಒಂಭತ್ತನೆಯ ದಿನ ರಥಗಳು ಗುಂಡಿಚಾದಿಂದ ದೇವಸ್ಥಾನಕ್ಕೆ ಮರಳುತ್ತದೆ. ಇದನ್ನು "ಬಹುದಾ ಯಾತ್ರೆ"ಎನ್ನುತ್ತಾರೆ. ದೇವಸ್ಥಾನಕ್ಕೆ ಮರಳಿದ ಮೇಲೆ 10 ನೇ ದಿನ ಜಗನ್ನಾಥ ತನ್ನ ಪರಿವಾರದವರೊಡನೆ ಕೂಡಿ ರಾಜ ರೂಪಿಯಾಗಿ ಭಕ್ತರಿಗೆ ದರ್ಶನ ಕೊಡುತ್ತಾನೆ. ಇದನ್ನು "ಸುನಬೇಷ್" ಎಂದು ಕರೆಯುತ್ತಾರೆ. ಸುನ ಅಂದರೆ ಸುವರ್ಣ ಆಭರಣ ಹಾಗೂ ಭೇಷ ಎಂದರೆ ವೇಷ, ಅಂದರೆ ಅಂದು ಚಿನ್ನದ ಆಭರಣಗಳಿಂದ ಅಲಂಕೃತನಾಗಿ ಭಕ್ತರಿಗೆ ದರ್ಶನ ಕೊಡುತ್ತಾನೆ.

ಭವ್ಯವಾದ ಬಣ್ಣ ಬಣ್ಣದಿಂದ ಕಂಗೊಳಿಸುವ ನೋಡಲು ದೇಗುಲದಂತೆ ಕಾಣುವ ರಥದಲ್ಲಿ ಕುಳಿತು ಹೊರಡುವ ಜಗನ್ನಾಥ, ಬಲಭದ್ರ ಸುಭದ್ರೆಯರನ್ನು ನೋಡಲು ದೇಶ ವಿದೇಶಗಳಿಂದ ಭಕ್ತರು ಆಗಮಿಸುತ್ತಾರೆ. ಜಗನ್ನಾಥನ ರಥವು ಮೊದಲು ಸಾಗುತ್ತದೆ. ನಂತರ ಬಲಭದ್ರ ಹಾಗೂ ಇದರ ಹಿಂದೆ ಸುಭದ್ರೆಯ ರಥ ಸಾಗುತ್ತದೆ. ಪುರಿಯಲ್ಲಿ 9 ದಿನಗಳ ಕಾಲ ದೈವಕಳೆ ಕಟ್ಟಿರುತ್ತದೆ. ಎಲ್ಲಿ ನೋಡಿದರೂ ಕೃಷ್ಣ ಭಕ್ತರು,ಡಮರು, ಶಂಕ ನಗಾರಿ ಭಜನೆಯ ಸದ್ದು ಭಕ್ತ ರನ್ನು ಮಂತ್ರ ಮುಗ್ಧರನ್ನಾಗಿಸುತ್ತದೆ. ಮೂರು ಕಿಲೋಮೀಟರ್‌ವರೆಗೂ ರಸ್ತೆ ಕಾಣದಂತೆ ಭಕ್ತರು ಸೇರಿ ಜಗದ್ಧೋದ್ಧಾರಕನ ಯಾತ್ರೆಯನ್ನು ಕಣ್ತುಂಬಿಕೊಂಡು ಪುನೀತರಾಗುತ್ತಾರೆ.





# ಲಕ್ಷ್ಮೀ ಹೃದಯ

ಡಾ॥ ಎ. ಕುಮುದ
97319 03752

ಸೂರ್ಯಚಂದ್ರರಿಗೂ ಮಿಗಿಲಾದ ತೇಜಸ್ಸುವುಳ್ಳವಳು ಬಂಗಾರ ಬಣ್ಣದ ವಸ್ತ್ರದಿಂದ ಶೋಭಿತಳಾಗಿರುವಳು. ಚಂದ್ರ ಸೋದರಿಯಾದ ಆಕೆಯನ್ನು 'ಸರ್ವ ಭೂಷಣ ಜಾಲ ಮಂಡಿತಳೇ ಎಂದು ಕರೆದಿದ್ದಾರೆ.

ಸರ್ವ ಸಂಪದವೀವ ಲಕುಮಿಯೆ
ಸರ್ವಭಾಗ್ಯವನೀವ ದೇವಿಯೆ
ಸರ್ವಮಂಗಳವೀವ ಸುರವರಸಾರ್ವಭೌಮಿಯಳೆ
ಸರ್ವಜ್ಞಾನವನೀವ ಜ್ಞಾನಿಯೆ
ಸರ್ವಸುಖಫಲದಾಯಿ ಧಾತ್ರಿಯೆ
ಸರ್ವಕಾಲದಿಭಜಿಸಿ ಬೇಡಿದೆ ಸರ್ವ ಪುರುಷಾರ್ಥ॥

ಲಕ್ಷ್ಮೀದೇವಿಯು ಸಕಲ ದೇವತಾವರ್ಗಕ್ಕೂ ನಾಯಕಿಯಾಗಿರುವಳು ಇಂತಹ ಲಕ್ಷ್ಮೀದೇವಿಯು ತನ್ನ ಭಕ್ತರಿಗೆ ಸಕಲ ಸಂಪತ್ತು , ಭಾಗ್ಯ, ಜ್ಞಾನ, ಸಕಲ ಸುಖ, ಸಂತೋಷಗಳನ್ನು ಕೊಡುವಳು. ಆದರೆ ದಾಸರು ಮಾತ್ರ ಧರ್ಮ ಅರ್ಥ ಕಾಮ ಹಾಗೂ ಮೋಕ್ಷಗಳೆಂಬ ಪುರುಷಾರ್ಥವನ್ನು ಬೇಡಿರುವರು.

ಆವ ನಿನ್ನಯ ಕಳೆಗಳಿಂದಲಿ
ಆವಿರಿಂಚಿಯು ರುದ್ರ ಸುರಪತಿ
ದೇವ ವರಮುಖ ಜೀವರೆಲ್ಲರೂ ಸರ್ವಕಾಲದಲಿ
ಜೀವಧಾರಣೆ ಮಾಡೋರಲ್ಲದೆ
ಆವ ಶಕ್ತಿಯು ಕಾಣೆನವರಿಗೆ
ದೇವಿ ನೀ ಪ್ರಭು ನಿನ್ನ ಶಕ್ತಿಲಿ ಶಕ್ತರೆನಿಸುವರು॥

ಲಕ್ಷ್ಮೀದೇವಿಯ ತೇಜಸ್ಸ್ವರೂಪದಿಂದಲೇ ಬ್ರಹ್ಮ, ರುದ್ರ, ದೇವತೆಗಳಿಗೆ ಒಡೆಯನಾದ ಇಂದ್ರ, ಮೊದಲಾದವರೆಲ್ಲಾ ನಿನ್ನಿಂದಲೇ ಜೀವಧಾರಣೆ ಮಾಡುವರು. ಆದರೆ ನಿನ್ನ ಪ್ರಭುವಾದ ಹರಿಯು ನಿನಗಿಂತ ಅಧಿಕ ಶಕ್ತನೆನಿಸಿರುವನು ಎಂಬುದೇ ದಾಸರ ದೃಢವಾದ ನಂಬಿಕೆ.

ಬೊಮ್ಮ ಎನ್ನಯ ಫಣೆಯ ಫಲಕದಿ
ಹಮ್ಮಿನಿಂದಲಿ ಬರೆದ ಲಿಪಿಯನು
ಅಮ್ಮ ಅದನನು ತೊಡೆದು ನೀ ಬರಿ ಬ್ಯಾರೆ ವಿಧದಿಂದ
ರಮ್ಯವಾಗಿಹ ನಿನ್ನ ಕರುಣಾ
ಹರ್ಮ್ಯದೊಳಗಿರುತಿಪ್ಪ ಭಾಗ್ಯವ
ಘಮ್ಮನೆ ದೊರೆವಂತೆ ಈ ಪರಿ ನಿರ್ಮಿಸೋತ್ತಮಳೆ ॥

ಬ್ರಹ್ಮದೇವನು ಜೀವಿಗಳನ್ನು ಸೃಷ್ಟಿಸಿದಾಗಲೇ ಜೀವಿಯ ಹಣೆಯ ಮೇಲೆ ಅವನ ಕರ್ಮಗಳನ್ನು ಬರೆದು ಕಳುಹಿಸಿರುತ್ತಾನೆ. (ಅದು ವಿಧಿ ಬರಹ ಎಂಬುದು ವಾಡಿಕೆ) ಆದರೆ ಅದನ್ನು ಲಕ್ಷ್ಮೀದೇವಿಯು ತನ್ನ ಸಾಮರ್ಥ್ಯದಿಂದ ಅಳಿಸುವಳು. ಜೀವಿಗಳ ಮೇಲೆ ಕರುಣೆ ತೋರಿ ಅವರಿಗೆ ದೊರಕಬೇಕಾದ ಭಾಗ್ಯವನ್ನು ದೊರಕುವಂತೆ ಮಾಡಿ ಬ್ರಹ್ಮನ ಅಹಂಕಾರವನ್ನು ನೀಗಿಸುವಳು ಎಂಬುದು ದಾಸರ ಕಲ್ಪನೆ.

ಕನಸಿಲಾದರು ಭಾಗ್ಯಹೀನನು
ಎನಿಸಬಾರದು ಎನ್ನ ಲೋಕದಿ
ಎನಸು ಭಾಗ್ಯದ ನಿಧಿಯು ಪರಿ
ಪರಿ ಉಣಿಸು ಸುಖಫಲವಾ॥
ಕನಕಮಣಿ ಧನಧಾನ್ಯ ಭಾಗ್ಯವ
ಇನಿತು ನೀ ಎನಗಿತ್ತು ಪಾಲಿಸು
ಮಿನುಗುತಿಹ ಘನವಾದ
ನಿನ್ನಯ ಕಳೆಯು ಶೋಭಿಸಲಿ॥

ಬಡತನದಿಂದ ಉಂಟಾದ ಜಡಮತಿಯೇ ಈರೀತಿಯ ಪ್ರಾರ್ಥನೆಗೆ ಕಾರಣ ಎಂಬ ಅರಿವು ಉಂಟಾದಾಗ ಮಂದಮತಿಯನು ತೊರೆದು ನಿರ್ಮಲವಾದ ಜ್ಞಾನಿಯೆಂದೆನಿಸು, ಕುಂದು ಬಾರದ ಕವಿತೆ ಪೇಳಿಸು' ಎಂದು ಪ್ರಾರ್ಥಿಸುತ್ತಾರೆ. ಈ ರೀತಿಯ ಕ್ಷಣಿಕವಾದ ಫಲಗಳನ್ನು ಬಯಸಲಾರೆ ಎಂದು ನಿರ್ಧರಿಸುತ್ತಾರೆ. ಅಜ್ಞಾನದ ಆತ್ಮಶೋಧನೆಗೆ ಒಳಗಾಗುತ್ತಾರೆ.

ಕ್ಷೀರವಾರಿಧಿ ಲಕುಮಿಯೆ ಪತಿ
ನಾರಸಿಂಹನ ಕೂಡಿ ಬರುವುದು
ದೂರನೋಡದೆ ಸಾರೆಗರೆದು
ಪ್ರಸಾದ ಕೊಡು ಎನಗೆ
ವಾರಜಾಕ್ಷಿಯೆ ನಿನ್ನ ಕರುಣಾ ಸಾರ
ಪೂರ್ಣ ಕಟಾಕ್ಷದಿಂದಲಿ
ಬಾರಿ ಬಾರಿಗೆ ನೋಡಿ
ಪಾಲಿಸು ಪರಮಪಾವನ್ನೆ॥

ದಾಸರು ಲಕ್ಷ್ಮೀದೇವಿಯನ್ನು ಆಕೆಯ ಪತಿ ನರಸಿಂಹನೊಡನೆ ಒಂದು ಕರುಣಾಕಟಾಕ್ಷ ಬೀರಿ ಹರಿಯನ್ನು ಕಾಣುವಂತೆ ಅನುಗ್ರಹಿಸು ಎಂದು ಪ್ರಾರ್ಥಿಸಿದ್ದಾರೆ. ವೇದಗಳು ಶ್ರೀಹರಿಯ ಗುಣಗಳನ್ನು ಹಾಡುತ್ತವೆ. ಎಲ್ಲಿಯ ತನಕ ವೇದಗಳು ಶ್ರೀಹರಿಯನ್ನು ಹಾಡಿ ಹೊಗಳುತ್ತವೆಯೋ ಅಲ್ಲೀ ತನಕ ಲಕ್ಷ್ಮಿದೇವಿಯ ವಿಷ್ಣುವಿನ ವಕ್ಷಸ್ಥಳವನ್ನು ಅಲಂಕರಿಸಿರುತ್ತಾಳೆ ಎಂದು ದಾಸರು ಸೂಚಿಸಿದ್ದಾರೆ.

ಅಲ್ಲಿ ಪರ್ಯಂತರದಿ ನಿನ್ನಯ
ಎಲ್ಲ ಕಳೆಗಳು ಎನ್ನ ಮುನಿಯಲಿ
ನಿಲ್ಲಿಸಿ ಸುಖವಾತ ನೀಡುತ ಸರ್ವಕಾಲದಲಿ
ಎಲ್ಲ ಜನಕಾಹ್ಲಾದ ಚಂದಿರ
ಕುಲ್ಲದೆ ಶುಭ ಪಕ್ಷ ದಿನದೊಳು
ನಿಲ್ಲದಲೆ ಕಳೇ ವೃದ್ಧಿಯಯ್ಯುವ ತೆರದಿ ಮಾಡೆನ್ನ॥

ಲಿಂಗ ಶರೀರವು ಹದಿನಾರು ಕಳೆಗಳಿಂದ ಯುಕ್ತವಾಗಿದೆ. ಹದಿನಾರು ಕಳೆಗಳೆಂದರೆ ಪಂಚ ಜ್ಞಾನೇಂದ್ರಿಯಗಳು, ಪಂಚ ಕರ್ಮೇಂದ್ರಿಯಗಳು, ಪಂಚಭೂತಗಳು ಹಾಗೂ ಮನಸ್ಸು ಒಟ್ಟು ಹದಿನಾರು ಕಳೆಗಳು. ಅವ್ಯಕ್ತ ತತ್ವದ ಸ್ಥಾನ ಲಿಂಗ ಶರೀರದ್ದು. ಅವ್ಯಕ್ತ ತತ್ವಕ್ಕೆ ಅಭಿಮಾನಿ ಲಕ್ಷ್ಮೀದೇವಿ. ಅವ್ಯಕ್ತತತ್ವ ಎಂದರೆ ಸತ್ವ ರಜ ತಮೋ ಗುಣಗಳಿಂದ ಆದುದು.

ಚಂದ್ರನು ಕೃಷ್ಣಪಕ್ಷದಲ್ಲಿ ಕಳಾಹೀನನಾಗುತ್ತಾನೆ. ಶುಕ್ಲಪಕ್ಷದಲ್ಲಿ ಚಂದ್ರನ ಕಳೆ ಹೇಗೆ ವೃದ್ಧಿಯಾಗುವುದೋ ಹಾಗೆ ಲಕ್ಷ್ಮೀದೇವಿಯ ಕಳೆಗಳು ತಮ್ಮ ಹೃದಯ ಮಂದಿರದಲ್ಲಿ ನೆಲೆಯಾಗಿ ಆನಂದವನ್ನು ನೀಡಲಿ ಎಂದು ದಾಸರು ಹಾರೈಸುತ್ತಾರೆ.

ಈ ಲಕ್ಷ್ಮೀ ಹೃದಯದ ಪಠನೆಯಿಂದ ಲಕ್ಷ್ಮೀದೇವಿಯು ಸುಪ್ರೀತಳಾಗಿ ದುರಿತ ರಾಶಿಗಳನ್ನು ತರಿದು ಸುಖ ಸೌಭಾಗ್ಯಗಳನ್ನು ತನ್ನ ಭಕ್ತರಿಗೆ ಕೊಡುವಳು ಎಂಬುದು ದಾಸರ ನಂಬಿಕೆ.



# ಮಹರ್ಷಿ ಅರಣ್ಯಕರು

-ಡಾ॥ ಪ್ರದೀಪ್‌ಕುಮಾರ್ ಹೆಬ್ರಿ
98440 18457

ಮಹರ್ಷಿ ಅರಣ್ಯಕರು ತಮ್ಮ ತಪಸ್ಸಾಧನೆಗೆ ಹೆಸರಾದವರು. ಅವರೊಮ್ಮೆ ಪರಮತತ್ತ್ವ ಜ್ಞಾನಕ್ಕಾಗಿ ಘೋರ ತಪಸ್ಸಿಗೆ ಮುಂದಾದರು. ಅದರದು ಫಲ ನೀಡಲಿಲ್ಲ. ಏಕಾಂತದಲ್ಲಿರುವ ಬದಲು ಸಜ್ಜನರ ಸಂಗದಲ್ಲಿ ಅದನ್ನು ಪಡೆಯಬಯಸಿದರು.ತೀರ್ಥಕ್ಷೇತ್ರಗಳಲ್ಲಿ ಅಡ್ಡಾಡಿದರು. ಒಂದು ಕ್ಷೇತ್ರದಲ್ಲಿ ಲೋಮಶ ಮಹರ್ಷಿಗಳ ದರ್ಶನವಾಯಿತು. ಅವರಲ್ಲಿ ಭವಸಾಗರ ದಾಟುವ ಉಪದೇಶವನ್ನು ಯಾಚಿಸಿದರು.

ಅವರ ಬೇಡಿಕೆಯನಾಲಿಸಿ ಲೋಮಶ ಮಹರ್ಷಿಗಳು "ದಾನ ತೀರ್ಥ, ಇಂದ್ರಿಯ ನಿಗ್ರಹ, ನಿಯಮ, ಯಜ್ಞ, ಯೋಗ, ತಪಸ್ಸು,ಮೊದಲಾದುವುಗಳಿಂದ ಪುಣ್ಯ ಪ್ರಾಪ್ತಿ ಎಂಬ ನಂಬಿಕೆಯಿದೆ. ಆದರೆ ಇದರಿಂದ ಸ್ವಂತಸುಖ ಮಾತ್ರ ಪ್ರಾಪ್ತಿಯಾಗುತ್ತದೆ. ಇವರೆಲ್ಲ ಸ್ವರ್ಗದಲ್ಲಿ ಸುಖಭೋಗ ಅನುಭವಿಸಿದರೂ, ಅದು ಮುಗಿದಂತೆ ಮತ್ತೆ ಭೂಮಿಗೆ ಬರಲೇ ಬೇಕು. ಆದ್ದರಿಂದ ಮೂಢರಿಗೆ ಮಾತ್ರ ಈ ಕರ್ಮಗಳು ಯೋಗ್ಯ. ಜ್ಞಾನವಂತರಿಗಲ್ಲ ಎಂದು ರಹಸ್ಯವೊಂದನ್ನು ಉಪದೇಶಿಸಿದರು.

"ಶ್ರೀರಾಮ ತಾರಕ ಸ್ವರೂಪಿ,ರಾಮನಾಮ ಸ್ಮರಣೆಯಿಂದ ಇಹಪರಗಳಲ್ಲಿ ಪರಮಸುಖ ಪಡೆಯಬಹುದು. ಸುಲಭವಾಗಿ ಭವಸಾಗರ ದಾಟಬಹುದು. ಶ್ರೀರಾಮ ಸ್ಮರಣೆ ಸಕಲ ಕಾಮನೆಗಳನ್ನು ಈಡೇರಿಸುತ್ತದೆ. ಪರಮಪದದ ಪ್ರಾಪ್ತಿಗೆ ಕಾರಣವಾಗುತ್ತದೆ. ಜಾತಿ-ವರ್ಣ-ಅಂತಸ್ತಿನ ಭೇದವಿಲ್ಲದೆ ಎಲ್ಲರೂ ಸದ್ಗತಿ ಪಡೆಯಬಹುದು.ರಾಮನಾಮ ಸರ್ವೋತ್ತಮವಾದ ಮಂತ್ರ. ಆದ್ದರಿಂದ ಏಕಾಗ್ರಚಿತ್ತನಾಗಿ ರಾಮಧ್ಯಾನ, ಪೂಜೆ, ಭಜನೆಗಳನ್ನು ಮಾಡುತ್ತಿರು ಎಂದರು.

ಅನಂತರ ಮಹರ್ಷಿ ಲೋಮಶರು ಶ್ರೀರಾಮನ ಮಹಿಮೆಯನ್ನು ಹೀಗೆ ವಿವರಿಸಿದರು.

"ಶ್ರೀರಾಮನು ಎಲ್ಲೆಲ್ಲಿಯೂ ವಿರಾಜಮಾನ ನಾಗಿರುತ್ತಾನೆ. ಸನಾತನ ಪರಾತ್ಪರ ಪರಮಾತ್ಮನೇ ಅವನು ಎಲ್ಲದಕ್ಕೂ ಅವನೇ ಆಧಾರನು. ಸಮಸ್ತ ಬ್ರಹ್ಮಾಂಡದ ಉತ್ಪತ್ತಿಯೂ ಅವನಿಂದಲೇ ಅವನು ಎಲ್ಲರಲ್ಲಿಯೂ ಇರುವವನು. ಎಲ್ಲದಕ್ಕೂ ಒಡೆಯನವನು. ಸೃಷ್ಟಿಕರ್ತ, ಪಾಲಕ ಮತ್ತು ಸಂಹಾರ ಕರ್ತ, ಪರಮ ಯೋಗೇಶ್ವರನವನು. ಕರುಣಾಶಾಲಿ. ಶ್ರೀರಾಮ ನಾಮ ಜಪದಿಂದ ಪಾಪಿಗಳು ತಮ್ಮ ಪಾಪಗಳ ಕಳೆದುಕೊಳ್ಳುವರು. ಹಾಗಾಗಿಯೇ ಶ್ರೀರಾಮಾವತಾರವಾಗಿದೆ.

ಶ್ರೀರಾಮ ಸ್ವರೂಪ ಲಕ್ಷಣ ತಿಳಿಸಿ. "ಮುಂದೆ ತ್ರೇತಾ ಯುಗದಲ್ಲಿ ನಿಮಗೆ ಶ್ರೀರಾಮ ದರ್ಶನಭಾಗ್ಯ ಸಿಗಲಿದೆ. ಅನಂತರ ಅವನಲ್ಲೇ ನೀವು ಐಕ್ಯರಾಗುವಿರಿ" ಎಂದರು.

ಮಹರ್ಷಿ ಅರಣ್ಯಕರು ನಿರಂತರವಾಗಿ ರಾಮಜಪ ಮಾಡತೊಡಗಿದರು. ಮುಂದೆ ರಾವಣಾದಿಗಳನ್ನು ಸಂಹರಿಸಿ ಅಯೋಧ್ಯೆಗೆ ಹಿಂದಿರುಗಿ ಪಟ್ಟಾಭಿಷೇಕದ ನಂತರ ಶ್ರೀರಾಮನು ಅಶ್ವಮೇಧ ಯಾಗಕ್ಕೆ ಮುಂದಾದನು. ಯಾಗಾಶ್ವದ ರಕ್ಷಣೆಗೆ ಶತ್ರುಘ್ನನಿದ್ದನು. ಮಧುರೆಯ ರೇವಾ ತಟದಲ್ಲಿ ಮುನಿಗಳೆಲ್ಲರೂ ಅವನನ್ನು ಸ್ವಾಗತಿಸಿದರು ಶ್ರೀರಾಮದರ್ಶನ ದಾಸೆಯಿಂದ ಅವನೊಡನೆಯೇ ಯಾಗಶಾಲೆಗೆ ಬಂದರು. ಶ್ರೀರಾಮನನ್ನು ದರ್ಶಿಸಿದರು ಧನ್ಯತೆಯನ್ನು ಅನುಭವಿಸಿದರು.

ಶ್ರೀರಾಮನನ್ನು ದರ್ಶಿಸಿ ಮಹರ್ಷಿ ಅರಣ್ಯಕರು ಧ್ಯಾನಸ್ಥರಾದರು. ಶ್ರೀರಾಮನು ಅವರನ್ನು ಆಲಂಗಿಸಿಕೊಂಡನು. ಯಥಾವಿಧಿಯಾಗಿ ಉಪಚರಿಸಿ ಸತ್ಕರಿಸಿದನು. ನಿಮ್ಮಿಂದ ನನ್ನ ಯಾಗ ಸಫಲವಾಯಿತೆಂತು ಅಭಿಮಾನಪೂರ್ವಕ ಅರುಹಿದನು ಮತ್ತು ರಾವಣಾದಿ ಬ್ರಾಹ್ಮಣರ ವಧೆಯಿಂದ ಉಂಟಾದ ಬ್ರಹ್ಮಹತ್ಯಾ ದೋಷವೂ ಈಗ ನಿರ್ಮೂಲವಾಯಿತು ಎಂದನು.

ಅರಣ್ಯಕ ಮುನಿಗಳು ಶ್ರೀರಾಮನನ್ನೇ ತದೇಕ ಚಿತ್ತದಿಂದ ನೋಡತೊಡಗಿದರು. ಅವರ ಬ್ರಹ್ಮರಂಧ್ರವು ಸಿಡಿದು ಅಪೂರ್ವವಾದ ತೇಜಸ್ಸು ಶ್ರೀರಾಮನಲ್ಲಿ ಪ್ರವೇಶಿಸಿತು.

**ಕರ್ನಾಟಕದ ವೈಷ್ಣವ ದೇವಾಲಯಗಳು**

**31**

# ನಾರಾಯಣಘಟ್ಟದ ಶ್ರೀ ವರದರಾಜ ದೇವಾಲಯ

-ಕೆಂಗೇರಿ ಚಕ್ರಪಾಣಿ
94483 86886


ಬೆಂಗಳೂರು ನಗರ ಜಿಲ್ಲೆ, ದಕ್ಷಿಣ ತಾಲ್ಲೂಕು, ನಾರಾಯಣ ಘಟ್ಟವು ಚಂದಾಪುರಕ್ಕೆ ಐದು ಕಿ.ಮೀ. ದೂರದಲ್ಲಿದೆ. ನಾರಾಯಣ ಘಟ್ಟದಲ್ಲಿ ವರದರಾಜ ದೇವಾಲಯ, ನಂಜುಂಡೇಶ್ವರ ದೇವಾಲಯ ಹಾಗೂ ಚೌಡೇಶ್ವರಿ ದೇವಾಲಯಗಳಿವೆ. ನಾರಾಯಣಘಟ್ಟದ ಊರ ನಡುವೆ ಇರುವ ವರದರಾಜ ದೇವಾಲಯ ಮತ್ತು ನಂಜುಂಡೇಶ್ವರ ದೇವಾಲಯಗಳು ಒಂದರ ಬದಿಯಲ್ಲಿ ಒಂದಿದ್ದು ಹರಿಹರರಲ್ಲಿ ಭೇದವಿಲ್ಲವೆಂಬಂತೆ ರಚಿತವಾಗಿದೆ.

## ಶ್ರೀ ವರದರಾಜ ದೇವಾಲಯ

ನಾರಾಯಣಘಟ್ಟದ ವರದರಾಜ ದೇವಾಲಯವನ್ನು ಸ್ಥಳೀಯವಾಗಿ ಶ್ರೀರಾಮ ದೇವಾಲಯ ಎಂದು ಕರೆಯುವರು. ದೇವಾಲಯ ಪ್ರವೇಶ ಮಂಟಪ, ನಗಾರಿ ಕೋಣೆ, ವಿಶಾಲವಾದ ಮುಖಮಂಟಪ, ನವರಂಗ, ಅಂತರಾಳ ಹಾಗೂ ಗರ್ಭಗೃಹಗಳನ್ನು ಹೊಂದಿರುವ ಚೋಳ ಶೈಲಿಯಲ್ಲಿರುವ ದೇವಾಲಯವಾಗಿದೆ. ಗರ್ಭಗುಡಿಯಲ್ಲಿ ಸುಮಾರು 11 ನೆಯ ಶತಮಾನಕ್ಕೆ ಸೇರುವ ಶ್ರೀ ಭೂನೀಳಾ ಸಮೇತನಾದ ವರದರಾಜಸ್ವಾಮಿಯ ಸುಂದರ ಮೂರ್ತಿಯಿದೆ. ಈ ದಿವ್ಯ ಮೂರ್ತಿಯು ಸುಮಾರು ಐದು ಅಡಿಗಳು ಎತ್ತರವಿದ್ದು ಚಕ್ರ ಶಂಖ, ಅಭಯ ಹಾಗೂ ಕಟೀಹಸ್ತವನ್ನು ಹೊಂದಿರುವನು. ದೇವನ ಇಕ್ಕೆಲಗಳಲ್ಲಿರುವ ಶ್ರೀದೇವಿಭೂದೇವಿಯರ ಮೂರ್ತಿಗಳೂ ಬಹಳ ಆಕರ್ಷಕವಾಗಿವೆ. ಅಂತರಾಳದಲ್ಲಿರುವ ಉತ್ಸವಮೂರ್ತಿಗಳೂ ಸುಂದರವಾಗಿವೆ. ನವರಂಗದಲ್ಲಿ ಗಣಪತಿ, ರಾಮಾನುಜರ ಪುತ್ಥಳಿಗಳಿವೆ. ಮುಖಮಂಟಪದಿಂದ ನವರಂಗಕ್ಕೆ ಪ್ರವೇಶಿಸುವ ದ್ವಾರದ ಇಕ್ಕೆಲಗಳಲ್ಲಿ ವಿಷ್ಣುವಿನ ದ್ವಾರಪಾಲಕರಾದ ಜಯ - ವಿಜಯರ ವಿಜಯನಗರೋತ್ತರ ಕಾಲದ ಮೂರ್ತಿಗಳಿವೆ.ಇಲ್ಲಿ ದೇವನಿಗೆ ಉತ್ಸವದಲ್ಲಿ ಬಳಸುವ ಹಂಸ, ಗರುಡ, ಹನುಮರ ಹಿತ್ತಾಳೆಯ ವಾಹನಗಳನ್ನು ಇರಿಸಿದ್ದಾರೆ. ಗರ್ಭಗುಡಿಗೆ ನೇರವಾಗಿ ಪ್ರಾಕಾರದಲ್ಲಿ ಗರುಡಸ್ತಂಭವಿದೆ.ಇಲ್ಲಿಯ ಪುರಾಣದ ಪ್ರಕಾರ ಘಟ್ಟತ್ರಯಗಳಲ್ಲಿ ನಾರಾಯಣಘಟ್ಟದ ನಾರಾಯಣ, ಬನ್ನೇರುಘಟ್ಟದ ಚಂಪಕಧಾಮ ಮತ್ತು ಮೈಸೂರು ಜಿಲ್ಲೆ ಕೆ.ಆರ್.ನಗರ ತಾಲ್ಲೂಕಿನ ಚುಂಚನ ಘಟ್ಟದ ಶ್ರೀರಾಮ ದೇವಾಲಯ.ಈ ಮೂರು ನಾರಾಯಣ ಕ್ಷೇತ್ರಗಳು ಆದಿಕ್ಷೇತ್ರಗಳೆಂದು ಪ್ರಸಿದ್ಧಿ ಪಡೆದಿವೆ. ಈ ದೇವಾಲಯವು ಶ್ರೀಧರ್ಮಸ್ಥಳ ಮಂಜುನಾಥೇಶ್ವರ ಧರ್ಮೋತ್ಥಾನ ಟ್ರಸ್ಟ್‌ಯಿಂದ ಮೂಲ ಸ್ವರೂಪಕ್ಕೆ ಧಕ್ಕೆ ಬರದಂತೆ ಜೀರ್ಣೋದ್ಧಾರವಾಗಿದೆ.

ನಾರಾಯಣಘಟ್ಟದ ವರದರಾಜಸ್ವಾಮಿಯ ದೇವಾಲಯದ ಸ್ಥಳ ಪುರಾಣದ ಪ್ರಕಾರ, ಬ್ರಹ್ಮನಿಂದ ವರವನ್ನು ಪಡೆದ ಮಾಲಿ - ಸುಮಾಲಿ ಎಂಬ ರಾಕ್ಷಸರು ಲೋಕಕಂಟಕರಾಗಿರುತ್ತಾರೆ. ದೇವತೆಗಳ ಪ್ರಾರ್ಥನೆಯಂತೆ ನಾರಾಯಣನು ಶಂಖಚಕ್ರಧಾರಿಯಾಗಿ ಬಂದು ರಕ್ಕಸದ್ವಯರನ್ನು ಸಂಹರಿಸುವನು.ಆಗ ಸಂತೋಷ ಹೊಂದಿದ ಬೃಂದಾರಕಾದಿ ದೇವ ಮುನಿಗಳು ಭಗವಂತನನ್ನು ವಿಧವಿಧವಾಗಿ ಸುತ್ತಿಸಿದಾಗ ಸಾಕ್ಷಾತ್ ನಾರಾಯಣನೇ ನಾರಾಯಣ ಘಟ್ಟದಲ್ಲಿ ಆವಿರ್ಭವಿಸಿದನೆಂದು ಸ್ಥಳ ಪುರಾಣದಲ್ಲಿ ತಿಳಿದು ಬರುವುದು. ಸರ್ಪಯಾಗ ಮಾಡಿದ ಜನಮೇಜಯರಾಯನು ಸರ್ಪಹತ್ಯಾ ದೋಷನಿವಾರಣೆಗಾಗಿ ಮೂವರು ನಾರಾಯಣರನ್ನು ಅರ್ಚಿಸಿ ದೋಷನಿವಾರಣೆ ಮಾಡಿಕೊಂಡನೆಂದು ಪ್ರತೀತಿಯಿದೆ.

ನಾರಾಯಣಘಟ್ಟದ ವರದರಾಜಸ್ವಾಮಿಯ ಬ್ರಹ್ಮರಥೋತ್ಸವವು ಪ್ರತಿ ವರ್ಷ ಬೆಂಗಳೂರು ಕರಗದ ದಿನ ಪಾಂಚರಾತ್ರ ಆಗಮೋತ್ತರ ರೀತ್ಯಾ ಬಹಳ ವೈಭವವಾಗಿ ನೆರವೇರುತ್ತದೆ. ಚೈತ್ರ ಶುದ್ಧ ದ್ವಾದಶಿಯಿಂದ ಆರಂಭವಾಗುವ ಬ್ರಹ್ಮೋತ್ಸವವು, ಚೈತ್ರ ಬಹುಳ ಪಂಚಮಿಯವರೆಗೆ ಬಹಳ ಪಾಂಗಿತವಾಗಿ ನಡೆಯುತ್ತದೆ. ದ್ವಾದಶಿಯಲ್ಲಿ ಮೃತ್ತಿಕಾ ಸಂಗ್ರಹ, ರಕ್ಷಾಬಂಧನ, ಅಂಕುರಾರ್ಪಣ, ತ್ರಯೋದಶಿಯ ದಿನ ಭೇರಿತಾಡನ, ಅಗ್ನಿಪ್ರತಿಷ್ಠೆ, ಹಂಸವಾಹನೋತ್ಸವ, ಶೇಷವಾಹನೋತ್ಸವ, ಚತುರ್ದಶಿಯ ದಿನ ಗಜೇಂದ್ರ ಮೋಕ್ಷ, ನಾರಾಯಣ ಪೂಜೆ, ಕಲ್ಯಾಣೋತ್ಸವ,ಗರುಡೋತ್ಸವ ನಡೆದು ಪೌರ್ಣಮಿಯ ದಿನ ಮಧ್ಯಾಹ್ನ ಅಭಿಜಿತ್ ಮುಹೂರ್ತದಲ್ಲಿ ಬ್ರಹ್ಮರಥೋತ್ಸವವು ಭಕ್ತಾದಿಗಳ ಸಹಕಾರದಿಂದ ಬಹಳ ಅದ್ದೂರಿಯಾಗಿ ನೆರವೇರುತ್ತದೆ. ಅನಂತರದ ದಿನಗಳಲ್ಲಿ ಹನುಮಂತೋತ್ಸವ, ಪಾರ್ವತೋತ್ಸವ, ಕೀಲುಕುದುರೆ ಉತ್ಸವ, ವಸಂತೋತ್ಸವ, ಪೂರ್ಣಾಹುತಿ ಹಾಗೂ ಧ್ವಜಾವರೋಹಣದೊಂದಿಗೆ ಅದ್ದೂರಿಯ ರಥೋತ್ಸವವು ಜರುಗುತ್ತದೆ. ಅನಂತರದ ಚೌತಿಯ ದಿನ ಪುಷ್ಪೋತ್ಸವ, ಶಯನೋತ್ಸವ ಮತ್ತು ಪಂಚಮಿಯ ದಿನ ಮಹಾಭಿಷೇಕದೊಂದಿಗೆ ಬ್ರಹ್ಮರಥೋತ್ಸವಕ್ಕೆ ತೆರೆ ಬೀಳುವುದು ನಾರಾಯಣಘಟ್ಟದಲ್ಲಿ ಮತ್ತೊಂದು ಪ್ರಮುಖ ದೇವಾಲಯ ನಂಜುಂಡೇಶ್ವರ ದೇವಾಲಯ. ಇದು ವರದರಾಜ ದೇವಾಲಯದ ಬದಿಯಲ್ಲಿದೆ. ದೇವಾಲಯವು ಶಿಥಿಲ ಹಂತವನ್ನು ತಲುಪಿದ್ದರಿಂದ ಸ್ಥಳೀಯರು ಆಸಕ್ತಿ ವಹಿಸಿ ನೂತನ ದೇವಾಲಯವನ್ನು ಮೂಲಮೂರ್ತಿಗಳನ್ನು ಉಳಿಸಿಕೊಂಡು ಶಿಲಾಮಯವಾಗಿ ಅಂದವಾಗಿ ನಿರ್ಮಿಸಿರುವರು. ದೇವಾಲಯಕ್ಕೆ ಭವ್ಯವಾದ ರಾಜಗೋಪುರವಿದೆ. ದೇವಾಲಯವು ಮೂರು ಗರ್ಭಗೃಹಗಳನ್ನು ಹೊಂದಿದ್ದು, ಪ್ರಧಾನ ಗರ್ಭಗುಡಿಯಲ್ಲಿ ನಂಜುಂಡೇಶ್ವರ, ಇಕ್ಕೆಲಗಳ ಗರ್ಭಗುಡಿಯಲ್ಲಿ ಗಣಪತಿ ಮತ್ತು ಪಾರ್ವತಿ ಅಮ್ಮನವರ ಅಂದದ ಮೂರ್ತಿಗಳಿವೆ. ನಂಜುಂಡೇಶ್ವರ ಸ್ವಾಮಿಯ ಬ್ರಹ್ಮರಥೋತ್ಸವವು ಮಾಘಶುದ್ಧ ಹುಣ್ಣಿಮೆಯೆಂದು ಬಹಳ ಅದ್ದೂರಿಯಾಗಿ ನಡೆಯುತ್ತದೆ. ಐದು ದಿನಗಳ ಕಾಲ ನಡೆಯುವ ಬ್ರಹ್ಮೋತ್ಸವದಲ್ಲಿ ಗಿರಿಜಾ ಕಲ್ಯಾಣೋತ್ಸವವು ಜರುಗುತ್ತದೆ. ನಾರಾಯಣ ಘಟ್ಟದ ಎರಡೂ ದೇವಾಲಯಗಳಲ್ಲಿ ಪೂಜಾ ಕೈಂಕರ್ಯಗಳು ಬಹು ಪಾಂಗಿತವಾಗಿ ನೆರವೇರುತ್ತಿರುವುದು ಅಭಿನಂದನೀಯ.



## ಹೀಗೆ ಬನ್ನಿ

ಬೆಂಗಳೂರಿನಿಂದ ಸುಮಾರು 25 ಕಿ.ಮೀ. ದೂರವಿರುವ ನಾರಾಯಣಘಟ್ಟಕ್ಕೆ ಬರುವುದು ಸುಲಭ. ಬೆಂಗಳೂರು-ಹೊಸೂರು ರಸ್ತೆಯಲ್ಲಿ ಸಿಗುವ ಚಂದಾಪುರ ವೃತ್ತದಿಂದ ಎಡಕ್ಕೆ ತಿರುಗಿ, ದೊಮ್ಮಸಂದ್ರ ರಸ್ತೆಯಲ್ಲಿ ಐದು ಕಿ.ಮೀ. ಸಾಗಿ ಪ್ರಸಿದ್ಧ ನಾರಾಯಣ ಕ್ಷೇತ್ರ ನಾರಾಯಣ ಘಟ್ಟವನ್ನು ತಲುಪಬಹುದು.



ಧಾರಾವಾಹಿ

# ಶ್ರೀ ವೇಂಕಟೇಶ್ವರಸ್ವಾಮಿ ಆಲಯ

## ಪ್ರಾಚೀನ ಕಾಲದ ಸಾಹಿತ್ಯದಲ್ಲಿ ಶ್ರೀವೇಂಕಟೇಶ್ವರಸ್ವಾಮಿ ಆಲಯ (ಕ್ರಿ.ಶ. ಮೊದಲ ಶತಮಾನದಿಂದ 9ನೇ ಶತಮಾನದವರೆಗೆ)

**ಕೃಷ್ಣದೇವರಾಯನ ಕಾಲದ ತಿರುಮಲೆ:-**

ಕೃಷ್ಣದೇವರಾಯನೂ ಅವನ ಇಬ್ಬರು ಪತ್ನಿಯರು-ಚಿನ್ನಾಜಿದೇವಿ ಹಾಗೂ ತಿರುಮಲದೇವಿ-ತಿರುಮಲೆಯಲ್ಲಿನ ಸುಮಾರು ಐವತ್ತು ಶಾಸನಗಳಲ್ಲಿ ಹೆಸರಿಸಲ್ಪಟ್ಟಿದ್ದಾರೆ. ಇವು ಶಕವರ್ಷ 1434 ರಿಂದ (ಕ್ರಿ.ಶ. 1513) ಶಕ 1445 ರ ವರೆಗಿನ (ಕ್ರಿ.ಶ.1524) ಕಾಲಾವಧಿಗೆ ಸೇರಿದ್ದು,ಕೃಷ್ಣದೇವರಾಯನು ತನ್ನ ಕುಲದೈವವಾಗಿದ್ದ ತಿರುಮಲೆಯ ಪ್ರಭುವಿಗೆ,ತಾನು ತಿರುಮಲೆಗೆ ಬಂದಾಗ ನೀಡಿದ ದೇಣಿಗೆಗಳನ್ನು ಗುರುತಿಸುತ್ತವೆ. ಕೃಷ್ಣದೇವರಾಯನ ಇತರೆಲ್ಲ ಶಾಸನಗಳಂತೆಯೇ ತಿರುಮಲೆಯಲ್ಲಿನ ಶಾಸನಗಳೂ ಕನ್ನಡ, ತೆಲುಗು, ತಮಿಳುಗಳಲ್ಲಿದ್ದು, ದಕ್ಷಿಣ ಭಾರತದಲ್ಲಿ ಈ ಮಾತನ್ನಾಡುತ್ತಿದ್ದ ಜನರಲ್ಲಿ ಅವನಿಗಿದ್ದ ಅಧಿಕಾರಕ್ಕೆ ದ್ಯೋತಕವಾಗಿವೆ.

**ಮೊದಲ ಸಂದರ್ಶನ :-**

ಕೃಷ್ಣದೇವರಾಯನು ತನ್ನ ಇಬ್ಬರು ರಾಣಿಯರನ್ನು ಜೊತೆಗೆ ಕರೆದುಕೊಂಡು, ಶಕವರ್ಷ1434 ರ (ಕ್ರಿ.ಶ. 1513 ರ ಫೆಬ್ರವರಿ 10) ಆಂಗೀರಸ ವರ್ಷದ ಫಾಲ್ಗುಣ ಮಾಸದ ಶುದ್ಧ ಪಂಚಮಿಯಂದು ತಿರುಮಲೆಗೆ ಆಗಮಿಸಿದ. ಈ ಸಂದರ್ಭದಲ್ಲಿ, ನವರತ್ನ ಖಚಿತವಾದ ಕಿರೀಟವನ್ನು ಸಮರ್ಪಿಸಿ ಕರ್ಪೂರ ದೀಪಾರತಿಗಾಗಿ 25 ಬೆಳ್ಳಿಯ ಆರತಿ ತಟ್ಟೆಗಳನ್ನು ನೀಡಿದ. ಈ ವಿಷಯವನ್ನು ಕುರಿತು ಎಂಟು ಶಾಸನಗಳಿದ್ದು ಅವುಗಳಲ್ಲಿ ಎರಡು ತೆಲುಗಿನಲ್ಲೂ (2 ಹಾಗೂ ತಿ.ತಿ.582.) ಮೂರು ತಮಿಳಿನಲ್ಲೂ(84,356,696) ಎರಡು ಕನ್ನಡದಲ್ಲೂ (31 ಹಾಗೂ ತಿ.ತಿ.40) ಇದ್ದು ಆಯಾ ಲಿಪಿಯಲ್ಲಿದ್ದರೂ,ತಿ.ತಿ.550 ಕನ್ನಡದಲ್ಲಿದ್ದರೂ, ನಂದಿನಾಗರಿ ಲಿಪಿಯಲ್ಲಿದೆ. ಇದರಂತೆ ದೇವರಿಗೆ ಕ್ಷೀರ ನೈವೇದ್ಯಕ್ಕೆ ಎಂದು ಅವನ ರಾಣಿಯರು ತಲಾ ಒಂದು ಚಿನ್ನದ ಬಟ್ಟಲನ್ನು ನೀಡಿದ್ದನ್ನು ಗುರುತಿಸುವ ಶಾಸನಗಳು ಎರಡೆರಡು ಗುಂಪುಗಳಲ್ಲಿದ್ದು ಮೂರು ಕನ್ನಡದಲ್ಲಿಯೂ ತಿ.ತಿ.- 1) 8,39,483 ಹಾಗೂ 9,34,484. ಮೂರು ತಮಿಳಿನಲ್ಲಿಯೂ (ತಿ.ತಿ. 85, 359, 694, ಹಾಗೂ 86, 355, 695)ಇದ್ದು ಎರಡು ತೆಲುಗಿನಲ್ಲಿ (12,699 ಹಾಗೂ 11, 670) ಇದ್ದು ಮತ್ತೊಂದು ಕನ್ನಡ ಭಾಷೆಯಲ್ಲಿ-ನಂದಿನಾಗರಿ (635, 638, ಹಾಗೂ 636, 637)ಲಿಪಿಯಲ್ಲಿವೆ.

**ದ್ವಿತೀಯ ಸಂದರ್ಶನ :**

ಶಕವರ್ಷ 1435 ರ ಶ್ರೀಮುಖ ಸಂವತ್ಸರದಲ್ಲಿನ ವೈಶಾಖಮಾಸದ ಬಹುಳ ದ್ವಾದಶಿಯಂದು ಮಂಗಳವಾರ (ಕ್ರಿ.ಶ. 1513 ರ ಮೇ 2 ರಂದು) ಆತ ಮೊದಲ ಸಂದರ್ಶನವಾದ ಮೂರು ತಿಂಗಳಿನಲ್ಲಿ ಮತ್ತೆ ತಿರುಮಲೆಗೆ,ಪತ್ನಿಯರ ಹೊರತಾಗಿ ಆಗಮಿಸಿದ. ಈ ಬಾರಿ ಸ್ವಾಮಿಗೆ ಹಲವಾರು ಆಭರಣಗಳನ್ನು ಸಮರ್ಪಿಸಿದ್ದೇ ಅಲ್ಲದೇ,ಉತ್ಸವ ಮೂರ್ತಿಗೂ,ಶ್ರೀದೇವಿ

ಭೂದೇವಿಯರಿಗೂ ಸಣ್ಣ ಕಿರೀಟಗಳನ್ನು ಸಮರ್ಪಿಸಿದ್ದು ಪುನಃ ಮೂರೂ ಭಾಷೆಗಳಲ್ಲಿ ದಾಖಲಾಗಿದೆ.(1-ತಿ.ತಿ.-ತೆಲುಗು,41-ತಿ.ತಿ.- ತಮಿಳು, 95,96,ತಿ.ತಿ.- ಕನ್ನಡ)

**ಮೂರನೆಯ ಸಂದರ್ಶನ :**

ಶಕ ಸಂವತ್ಸರ 1435 ರ ಶ್ರೀಮುಖನಾಮ ಸಂವತ್ಸರದ ಆಷಾಢ ಮಾಸದ ಶುದ್ಧ ಏಕಾದಶಿಯಂದು ಸೋಮವಾರ (ಕ್ರಿ.ಶ.1513 ರ ಜೂನ್ 13 ರಂದು) ಕೃಷ್ಣದೇವರಾಯನು ಮೂರನೆಯಬಾರಿ ತಿರುಮಲೆಗೆ ಬಂದನು. ಚಾಂದ್ರಮಾನದ ಶ್ರಾವಣ ಮಾಸದ ಮೊದಲಿನಲ್ಲಿ ಜಾರಿಗೆ ಬರುವಂತೆ, ವೆಂಕಟೇಶ್ವರಸ್ವಾಮಿಗೆ, ನಿತ್ಯನೈವೇದ್ಯದ ವೆಚ್ಚಗಳಿಗಾಗಿಯೂ,ತಮಿಳು ತೈಮಾಸದಲ್ಲಿ ತನ್ನ ತಂದೆ ನರಸನಾಯಕ ಒಡೆಯರು ಹಾಗೂ ತಾಯಿ ನಾಗಾರಾಜಮ್ಮನವರುಗಳ ನೆನಪಿನಲ್ಲಿ ಮಾಡುವಂತೆ ಏರ್ಪಾಡು ಮಾಡಿದ ವಸಂತ ಮಹೋತ್ಸವದ ವೆಚ್ಚಗಳಿಗಾಗಿಯೂ,ಐದು ಗ್ರಾಮಗಳನ್ನು ಸ್ವಾಮಿಗೆ ಧಾರಾದತ್ತವನ್ನಾಗಿಸಿದ. (459-ತಿ.ತಿ.) ಈ ಹಿಂದಿನ ಸಂದರ್ಶನದೊಡನೆ ಇರುವ ಸನ್ನಿಹಿತ ಕಾಲ ಹಾಗೂ ಇದೇ ದಿನದಲ್ಲಿ ಆತ ಕಾಳಹಸ್ತಿಗೆ ಹೋಗಿ ಬಂದನೆಂಬ ವರದಿಯ (1924 -151 ಹಾಗೂ 162) ಆಧಾರದಿಂದಾಗಿ, ಈ ದತ್ತಿಯನ್ನು ಕೃಷ್ಣದೇವರಾಯನು ತಿರುಮಲೆಯಲ್ಲಿ ಸ್ವಾಮಿಯ ಸನ್ನಿಧಿಯಲ್ಲಿಯೇ ನೀಡಿರಬೇಕೆಂದು ತೋರುತ್ತದೆ.

**ನಾಲ್ಕನೆಯ ಸಂದರ್ಶನ :-**

ಪ್ರತಾಪರುದ್ರ ಗಜಪತಿಯನ್ನು ಕೊಂಡವೀಡುವರೆಗೆ ಅಟ್ಟಿಸಿಕೊಂಡು ಹೋಗಿ,ಉದಯಗಿರಿ ಕೋಟೆಯನ್ನು ಆಕ್ರಮಿಸಿದ ನಂತರ ತನ್ನ ರಾಜಧಾನಿಯಾದ ವಿಜಯನಗರಕ್ಕೆ ಹಿಂದಿರುಗುವಾಗ್ಗ (6-7-1514) ಶಕವರ್ಷ 1436 ರ ಭಾವನಾಮಸಂವತ್ಸರದ ಆಷಾಢ ಮಾಸದ ಪೌರ್ಣಮಿಯಂದು ಗುರುವಾರ ತಿರುಮಲೆಗೆ ಆಗಮಿಸಿದ. ಈ ಬಾರಿ 30,000 ವರಹಗಳನ್ನು ನೀಡಿ ತಿರುವೆಂಗಳನಾಥನಿಗೆ ಕನಕಾಭಿಷೇಕ ಮಾಡಿಸಿದ್ದೇ ಅಲ್ಲದೆ, ಹಲವಾರು ಆಭರಣಗಳನ್ನು ಅರ್ಪಿಸಿ ಸ್ವಾಮಿಯ ದೈನಂದಿನ ಪೂಜೆಗೆಂದು ಪೊತ್ತಪಿನಾಟಿ ಸೀಮೆಯ ತಾಳ್ಳಪಾಕ ಗ್ರಾಮವನ್ನು ದಾನ ನೀಡಿದ. ನಿತ್ಯ ನೈವೇದ್ಯದ ನಂತರ ದಾನಿಯ ಹಕ್ಕಿನ ದೈನಂದಿನ ಪ್ರಸಾದದ ಒಂದು ಭಾಗವನ್ನು ರಂಗದೀಕ್ಷಿತ, ಶಿವದೀಕ್ಷಿತ ಹಾಗೂ ತಿರುಪ್ಪಣಿ ಪಿಳ್ಳೆಯವರಿಗೂ ಮಿಕ್ಕದ್ದನ್ನು ಸತ್ರದಲ್ಲಿ ಬ್ರಾಹ್ಮಣ ಭೋಜನಕ್ಕಾಗಿ ತಿರುಪ್ಪಣಿಪಿಳ್ಳೈಗೂ ಕೊಡತಕ್ಕದೆಂದು ಕಟ್ಟಳೆ ಮಾಡಿದ.(ತಿ.ತಿ.-201,254,256)

ಅವನ ಚೈತ್ರಯಾತ್ರೆಯಲ್ಲಿ ಅವನೊಂದಿಗಿದ್ದ ಇಬ್ಬರು ರಾಣಿಯರಲ್ಲಿ ಚಿನ್ನಾದೇವಿಯು ಸ್ವಾಮಿಗೆ ಒಂದು ಪದಕವನ್ನೂ,ಒಂದು ಕಂಠಮಾಲೆಯನ್ನೂ ಅರ್ಪಿಸಿ, ತೊಂಡ ಮಂಡಲದ ಮುಡಿಯೂರು ಗ್ರಾಮವನ್ನು ಸ್ವಾಮಿಯ ನಿತ್ಯ ನೈವೇದ್ಯಕ್ಕಾಗಿ ದಾನ ನೀಡಿ,ದಾನಿಯ ದಾಯ ಭಾಗದ ಪ್ರಸಾದವನ್ನು ತಿರುಪ್ಪಣಿ ಪಿಳ್ಳೆಗೆ ಒಂದು ಭಾಗ ಸ್ವಂತಕ್ಕಾಗಿಯೂ, ಮಿಕ್ಕದ್ದು ಇದೇ ಸತ್ರದಲ್ಲಿನ ಬ್ರಾಹ್ಮಣ ಭೋಜನಕ್ಕಾಗಿಯೂ ನೀಡತಕ್ಕದೆಂದು ಕಟ್ಟುಮಾಡಿದಳು. (ತಿ.ತಿ.202, 257 ಹಾಗೂ 262) ತಿರುಮಲದೇವಿಯೂ ಒಂದು ಪದಕವನ್ನು ಅರ್ಪಿಸಿ ಇದೇ ರೀತಿಯ ನೈವೇದ್ಯ ವಿತರಣೆಗಾಗಿ ಶೋಲಿಂಗವರ ಪಟ್ಟುವಿನ ಪಿರಾಟಿ ಕುಳತ್ತೂರ್ ಗ್ರಾಮವನ್ನು ನೀಡಿದಳು. (ತಿ.ತಿ.-203, 255, 261) ಇವರೊಡನೆಯೇ ಬಂದಿರಬಹುದಾದ ಕೃಷ್ಣದೇವರಾಯನ ಪುರೋಹಿತ ಯಜ್ಞ ನಾರಾಯಣ ದೀಕ್ಷಿತನ ಮಗ ರಂಗ ದೀಕ್ಷಿತುಲು ನಾಲ್ಕೇ ದಿನಗಳ ನಂತರದಲ್ಲಿ ಕ್ರಿ.ಶ.1514 ರ ಜುಲೈ 10 ರಂದು ಹಲವು ಸೇವೆಗಳಿಗೆಂದು 10,000 ನರ್ಪಣಗಳನ್ನು ನೀಡಿದ್ದಾನೆ.(ತಿ.ತಿ.-192,254) ರಾಜನ ಹಿಂದೆಯೇ ಇವನ ತಂದೆಯೂ ಬಂದು ಪ್ರಸಾದವನ್ನು ಸ್ವೀಕರಿಸಿರಬೇಕು.

ನಾಲ್ಕು ಭಾಷೆಗಳಲ್ಲಿನ-ತೆಲುಗು,ಕನ್ನಡ, ತಮಿಳು, ಸಂಸ್ಕೃತ-ನಾಲ್ಕು ಶಾಸನಗಳು (579, 580, 619, 620 ತಿ.ತಿ.) ಕ್ರಿ.ಶ,1515 ಅಕ್ಟೋಬರ್ 25 ರಂದು ಶಕವರ್ಷ 1437 ರ ಯುವ ಸಂವತ್ಸರ ಕಾರ್ತೀಕ ಮಾಸದ ಬಹುಳ ತೃತೀಯೆಯ ಗುರುವಾರದಂದು ವಿಜಯನಗರದಲ್ಲಿ ನಿಂದ ಕೃಷ್ಣದೇವರಾಯನು ತಿರುವೆಂಗಳನಾಥನಿಗೆ ನೀಡಿದ ಮಕರ ತೋರಣ ಅಥವಾ ನವರತ್ನ-ಪ್ರಭಾವಳಿಯ ಬಗ್ಗೆ ನಮಗೆ ತಿಳಿಸುತ್ತವೆ.

**ಐದನೆಯ ಸಂದರ್ಶನ :-**

ಕೃಷ್ಣದೇವರಾಯನು ಐದನೆಯ ಬಾರಿಗೆ ಶಕವರ್ಷ 1438 ರ ಧಾತುನಾಮ ಸಂವತ್ಸರದ ಪುಷ್ಯಮಾಸದ ದಶಮಿಯ ಶುಕ್ರವಾರದಂದು (2-1-1517) ಶ್ರೀ ವೆಂಕಟೇಶ್ವರ ಸ್ವಾಮಿಯನ್ನು ಸಂದರ್ಶಿಸಿದ. (ತಿ.ತಿ.-578) ಇದು ನಡೆದದ್ದು ಗಜಪತಿಯೊಡನೆ ಅವನ ಯುದ್ಧ ಮುಗಿದಾಗ. ಈ ಶಾಸನವು ಆತನು ಅಮರೇಶ್ವರದಲ್ಲಿ ತುಲಾಪುರುಷ ಮಹಾದಾನ ಮಾಡಿ ವಿಜಯನಗರಕ್ಕೆ ಹಿಂದಿರುಗುವವರೆಗೆ ಅವನ ವಿಜಯ ಯಾತ್ರೆಯಲ್ಲಿ ನಡೆದ ಘಟನೆಗಳನ್ನು ವಿವರಿಸಿ,ರಾಜ್ಯಭಾರ ಮಾಡುತ್ತಿರುವಾಗಲೇ ಆತನು ಕಳಿಂಗದ ಮೇಲೆ ದಂಡೆತ್ತಿ ಹೋಗಿ ಬೆಜವಾಡ, ಕೊಂಡಪಲ್ಲಿ ದುರ್ಗಗಳನ್ನು ಹಿಡಿದು ಕೋಟೆಯಲ್ಲಿದ್ದ ಪ್ರಹಾರರಾಜ,ಶಿರಶ್ಚಂದ್ರ ಮಹಾಪಾತ್ರ, ಬೋಧ ಜನ ಮಹಾಪಾತ್ರ, ಬಿಜಿಲಿ ಖಾನ್, ಮತ್ತಿತರರನ್ನು ಸೆರೆಹಿಡಿದು ಅವರಿಗೆ ಅಭಯನೀಡಿ, ಅನಂತಗಿರಿ, ಉರ್ಲಕೊಂಡ, ಉಂಡ್ರಕೊಂಡ, ಅರುವಪಲ್ಲಿ, ಜಲ್ಲಿಪಲ್ಲಿ, ಕೊಂಡಿಕೊಂಡ, ಕಪ್ಪುಲವಾಯಿ, ನಲ್ಲಗೊಂಡ, ಕಂಭಮೆಟ್ಟು, ಕನಕಗಿರಿ, ಶಂಕರಗಿರಿ ಮೊದಲಾದ ಕೋಟೆಗಳನ್ನು ಒಂದೇ ಧಾಳಿಯಲ್ಲಿ ಹಿಡಿದು ಸಿಂಹಾದ್ರಿ ಪೊತ್ನೂರುನಲ್ಲಿ ವಿಜಯಸ್ತಂಭವನ್ನು ಮಾಡಿಸಿ, ರಾಜಮಹೇಂದ್ರವರಕ್ಕೆ ಆಗಮಿಸಿ, ಅಲ್ಲಿ ತನ್ನ ರಾಣಿಯರಾದ ಚಿನ್ನಾದೇವಿ,ತಿರುಮಲದೇವಿಯರಿಂದ ಮಹಾದಾನಗಳನ್ನು ಮಾಡಿಸಿ, ನಂತರ ವಿಜಯನಗರಕ್ಕೆ ಹಿಂದಿರುಗಿದ. ಮೇಲೆ ಹೇಳಿದ ದಿನದಂದು ತಿರುಮಲೆಯಲ್ಲಿದ್ದು ಸ್ವಾಮಿಗೆ ಕಂಠಮಾಲೆಯನ್ನೂ ಪದಕವನ್ನೂ ಸಮರ್ಪಿಸಿದ.

ಗರ್ಭಗುಡಿಯ ಮೇಲಿನ ವಿಮಾನವನ್ನು ಚಿನ್ನದ ಗಿಲೀಟು ಮಾಡಲು 30,000 ವರಹಗಳನ್ನು ನೀಡಿ, ಜೊತೆಗೇ ಪ್ರತಿವಾರವೂ ನಡೆಯತಕ್ಕ ಪುಳಿಕಾಪ್ಪು ಸೇವೆಗೆಂದು ತಿರುಪತಿಯ ಗೊಡುಗರನಾಡುವಿನ (ಕುಡು ವರನಾಡು) ಸಾವಿರ ವರಹದ ನಿತ್ಯಮುಲವೀಸನ್ನದು (ಸುಂಕವನ್ನೂ), ತಳವಾರಸುಂಕ, ಮಾದಾರಿಸುಂಕದ ಐದುನೂರು ವರಹಗಳನ್ನು ಬೆಳಗಿನ ಪೂಜೆಗೆಂದೂ ನೀಡಿ ಹಿಂದಿರುಗಿದನು.

ತಿರುಮಲೆಗೆ ನಂತರದಲ್ಲಿ ಕೃಷ್ಣದೇವರಾಯನ ಕಾಣಿಕೆಯನ್ನು ಗುರುತಿಸುವ ದಾಖಲೆಯಂದರೆ (ತಿ.ತಿ.-576) ಶಕವರ್ಷ 1440ರ ಬಹುಧಾನ್ಯ ಸಂವತ್ಸರದ ಕನ್ಯಾಮಾಸದ ಶುದ್ಧ ಪಂಚಮಿಯಂದು ಸ್ವಾತಿ ನಕ್ಷತ್ರವಿದ್ದ ಗುರುವಾರ (9-9-1518) ಲಿಖಿತವಾಗಿದ್ದು, ರಾಜ ಮಹೇಂದ್ರವರದಿಂದ ವಿಜಯನಗರಕ್ಕೆ ಹಿಂದಿರುಗಿದ ಮೇಲೆ ಆತ ತಿರುವೆಂಗಳನಾಥನ ಆಲಯದ ಗರ್ಭಗುಡಿಯ ಮೇಲಿನ ದಿವ್ಯ ವಿಮಾನಕ್ಕೆ ಚಿನ್ನದ ಮುಲಾಮು ಹಾಕಿಸಿದನೆಂದು ತಿಳಿಸುತ್ತದೆ. ಈ ಶಾಸನವು ಗಜಪತಿಯ ವಿರುದ್ಧವಾದ ಆತನ ದಂಡಯಾತ್ರೆಯ ವಿವರಗಳನ್ನು ಈ ಹಿಂದೆ ಗಮನಿಸಿದ ತಿ.ತಿ.578 ಶಾಸನದಂತೆಯೇ ನೀಡುತ್ತದೆ. ಆತನ ಈ ಹಿಂದಿನ ಶಾಸನದ ಸಂದರ್ಶನದಲ್ಲಿ ಆತ ವಿಮಾನದ ಚಿನ್ನದ ಗಿಲೀಟಿಗಾಗಿ 30,000 ವರಹಗಳನ್ನು ನೀಡಿದ್ದು ಈ ಕೆಲಸ 9-9-1518 ರಲ್ಲಿ ಪೂರ್ತಿ ಆಯಿತು. ತಿ.ತಿ.576 ತಮಿಳಿನಲ್ಲಿದ್ದು ಇದರ ಸಾರಾಂಶವು ತಿ.ತಿ. 577 ಯಲ್ಲಿ ತೆಲುಗಿನಲ್ಲಿದ್ದು ಅದು ಚಿನ್ನದ ಮುಲಾಮನ್ನು ವಿವರಿಸುತ್ತದೆ.

**ಆರನೆಯ ಸಂದರ್ಶನ :-**

ವಿಮಾನಕ್ಕೆ ಚಿನ್ನದ ಮುಲಾಮು ಹಚ್ಚುವ ಕೆಲಸವಾದ ಮೇಲೆ ಐದು ವಾರಗಳಲ್ಲಿಯೇ ಆತ ತನ್ನ ಹಿರಿಯ ಪತ್ನಿ ತಿರುಮಲ ದೇವಿಯೊಡನೆ ಶಕವರ್ಷ 1440 ರ ಬಹುಧಾನ್ಯ ಸಂವತ್ಸರದಲ್ಲಿ (1518-ಅಕ್ಟೋಬರ್ 16) ತಿರುವೆಂಗಳನಾಥನನ್ನು ಸಂದರ್ಶಿಸಿದನೆಂದು ಬಳ್ಳಾರಿಯ ಕಮಲಾಪುರದ 697ನೆ ಶಾಸನ ತಿಳಿಸುತ್ತದೆ. ಇದರಂತೆ ಆತ ತನಗೆ ಪುತ್ರ ಸಂತಾನವಾದ ವರ್ಷ ದಲ್ಲೇ ಆ ಪುತ್ರನ ಹೆಸರಿನಲ್ಲಿ (ತಿರುಮಲರಾಯ ಮಹಾರಾಯ) ಹಲವು ಗ್ರಾಮಗಳನ್ನು ದೇವರಿಗೆ ಸಮರ್ಪಿಸಿದ. ತನಗೆ ಪುತ್ರಸಂತಾನವಾದದ್ದು ಭಗವತ್ಕೃಪೆಯೆಂದು ಭಾವಿಸಿದ ಆತ ತನ್ನ ಮಗುವಿನ ಆಯುರಾರೋಗ್ಯಗಳಿಗಾಗಿ ಭಗವಂತನಲ್ಲಿ ಪ್ರಾರ್ಥಿಸಲು ಹೀಗೆ ತುರ್ತಾಗಿ ತಿರುಮಲೆಗೆ ಬಂದಿರಬೇಕು.(ಆದರೆ ಅವನ ಈ ಸಂತೋಷ, ಆರೇ ವರ್ಷಗಳಲ್ಲಿ ತಿರುಮಲರಾಯನು ಪರಮಪದವೈದಿದಾಗ ಚೂರಾಯಿತು.)

(ಮುಂದುವರೆಯುತ್ತದೆ)



## ರಸಪ್ರಶ್ನೆಗಳು

**9**

**ಸಪ್ತಗಿರಿ ಕ್ವಿಜ್ ಏಪ್ರಿಲ್ 2023**
**ತಿಂಗಳ ರಸಪ್ರಶ್ನೆಯ ಉತ್ತರಗಳು**

1. ಜೀವನದಿ
2. 32
3. ಪರಶುರಾಮ
4. 55
5. ದಕ್ಷಿಣ
6. ಕಾಳರಾತ್ರಿ
7. ಮತ್ಸ್ಯಯಂತ್ರ
8. ವೆಂಕಟಾಚಲ ಮಹಾತ್ಮ್ಯೆ
9. ಒಳಗಣ್ಣು
10. ಮಜ್ಜಿಗೆ
11. ನರಸಿಂಹ
12. ಅಳಗಿಯಣವಾಳನ್
13. ಶ್ರೀವಿಜಯಧ್ವಜ ತೀರ್ಥರು
14. ಧರ್ಮರಾಯ ಸ್ವಾಮಿ ಕರಗ
15. ವೈಶಾಖಶುದ್ಧ ಅಷ್ಟಮಿ

## 29-04-2023 ರಿಂದ ಮೇ 01-05-2023 ರ ವರೆಗೆ ನಡೆದ ತಿರುಚಾನೂರು ಶ್ರೀ ಪದ್ಮಾವತಿ ಅಮ್ಮನವರ ಪರಿಣಯ ಮಹೋತ್ಸವ ಕಾರ್ಯಕ್ರಮದ ದೃಶ್ಯಮಾಲಿಕೆ















# ಅಷ್ಟಾಂಗ ಯೋಗ ಸೂತ್ರಗಳು

'ದಳಗಳು" ಎಂದು ಉಲ್ಲೇಖಿಸಬಹುದಾದ ಪತಂಜಲಿ ಯೋಗದ ಎಂಟು ಅಂಗಗಳು ಬಾಹ್ಯ ಸಮಸ್ಯೆಗಳ ಬದಲು ಮನಸ್ಸಿನ ಮೇಲೆ ಕೇಂದ್ರೀಕರಿಸುತ್ತವೆ. ಪ್ರತಿ ಅಂಗವು ಇತರ ಅಂಗಗಳಿಗೆ ಸಹ ಸಂಬಂಧ ಕಲ್ಪಿಸುವ ದೇಹ ಮನಸ್ಸಿನ ನಿರ್ದಿಷ್ಟ ಅಂಶದ ಮೇಲೆ ಕೇಂದ್ರೀಕೃತವಾಗಿದೆ. ಪತಂಜಲಿ ಯೋಗವನ್ನು ಸಮಗ್ರ ವಿಜ್ಞಾನವೆಂದು ಪರಿಗಣಿಸಲಾಗುತ್ತದೆ.





**ಯಮ :**

ಅಹಿಂಸೆ (ಕೊಲ್ಲುದಿರುವುದು), ಸತ್ಯ, ಆಸ್ತೇಯ (ಕಳ್ಳತನ ಮಾಡದಿರುವುದು), ಬ್ರಹ್ಮಚರ್ಯ (ಪಾವಿತ್ರತೆ), ಮತ್ತು ಅಪರಿಗ್ರಹ (ಅಸ್ವಾಮ್ಯತೆ) ಇವು ಯಮವನ್ನು ರೂಪಿಸುವ ಐದು ನೀತಿ ನಿಯಮಗಳಾಗಿವೆ. ಜೀವನದಲ್ಲಿ ಏನು ಮಾಡಬಾರದು ಎಂಬುದನ್ನು ನಮಗೆ ತಿಳಿಸಿಕೊಡುತ್ತವೆ. ಅವು ನೈತಿಕ, ಬೋಧ ಪ್ರದ ಮತ್ತು ನಿಷೇಧಿತವಾಗಿವೆ. ಯೋಗದ ಅನ್ವೇಷಣೆಯಲ್ಲಿ ಸಾಧಕನು ಉನ್ನತ ಹಂತಗಳನ್ನು ತಲುಪುವಲ್ಲಿ ಎದುರಿಸಬಹುದಾದ ಮಾನಸಿಕ ಮತ್ತು ಭಾವನಾತ್ಮಕ ಅಡಚಣೆಗಳನ್ನು ನಿವಾರಿಸುವುದು ಇದರ ಉದ್ದೇಶ ವಾಗಿದೆ. ಸ್ಥಳ, ಸಮಯ, ಸಂದರ್ಭಗಳು ಮತ್ತು ವೈಯಕ್ತಿಕ ಸಾಮಾಜಿಕ ಸ್ಥಾನಮಾನವನ್ನು ಲೆಕ್ಕಿಸದೆ ಈ ಸ್ವಯಂ ಸಂಯಮದ ಸದ್ಗುಣಗಳನ್ನು ಅಭ್ಯಾಸ ಮಾಡಬೇಕು.



**ನಿಯಮ :**

ಐದು ನಿಯಮಗಳೆಂದರೆ ಶೌಚ (ಶುದ್ಧತೆ), ಸಂತೋಷ (ತೃಪ್ತಿ) ತಪಸ್ (ಚಿಂತನೆ), ಈಶ್ವರ ಪ್ರಣಿಧಾನ (ಭಗವಂತನಲ್ಲಿ ಭಕ್ತಿ), ಮತ್ತು ಸ್ವಾಧ್ಯಾಯ (ಸ್ವಯಂ ಅಧ್ಯಯನ ). ನಾವು ಮುಂದಿನ ಹಂತ ತಲುಪಲು ಏನು ಮಾಡಬೇಕೆಂಬುದನ್ನು ನಿರೀಕ್ಷಿಸಿ, ಸ್ವಯಂ ನಿಯಂತ್ರಣವನ್ನು ಹೊಂದಲು ಸಹಾಯಕವಾಗಿವೆ. ಈ ಸದ್ಗುಣಗಳು ರಚನಾತ್ಮಕ ಮತ್ತು ಸಕಾರಾತ್ಮಕವಾಗಿವೆ. ಯಮ ಮತ್ತು ನಿಯಮ ಎರಡೂ ಪರಸ್ಪರ ಪ್ರತ್ಯೇಕವಲ್ಲದೇ ಪೂರಕವಾಗಿವೆ. ಅವು ನಮ್ಮನ್ನು ಶುದ್ಧೀಕರಿಸುತ್ತವೆ ಮತ್ತು ಯೋಗದ ಉನ್ನತ ಹಂತ ವನ್ನು ತಲುಪಲು ಸಹಾಯ ಮಾಡುತ್ತವೆ.





**ಆಸನ :**

ದೇಹಕ್ಕೆ ಸಂಬಂಧಿಸಿದ ಮೂರನೇ ಅತ್ಯಂತ ಮಹತ್ವದ ಅಂಗವೆಂದರೆ ಆಸನ. ಆದರೆ ಹಠ ಯೋಗ ಪ್ರದೀಪಿಕಾ, ಘೇರಾಂಡ ಸಂಹಿತಾ ಮತ್ತು ಶಿವ ಸಂಹಿತೆಯಂತಹ ಇತರ ಹಠ ಯೋಗ ಗ್ರಂಥಗಳಲ್ಲಿರುವಂತೆ ಪತಂಜಲಿಯು ತನ್ನ ಯೋಗ ಸೂತ್ರಗಳಲ್ಲಿ ಇದನ್ನು ವಿವರಿಸಿಲ್ಲ. ಪತಂಜಲಿಯ ಪ್ರಕಾರ ಆಸನಗಳು ಧ್ಯಾನಕ್ಕೆ ಸಿದ್ಧವಾಗಲು ಒಂದು ಸಾಧನವಾಗಿದೆ.ಆಸನವನ್ನು ಮೂರು ಸೂತ್ರಗಳಲ್ಲಿ ಮಾತ್ರ ಉಲ್ಲೇಖಿಸಲಾಗಿದೆ.(ಸಾಧನ ಪಾದದಲ್ಲಿ 46, 47 ಮತ್ತು 48).ರಾಜಯೋಗ ಎಂತಲೂ ಪ್ರಸಿದ್ಧಿಯಾಗಿರುವ ಪತಂಜಲಿಯ ಅಷ್ಟಾಂಗ ಯೋಗವು ಸ್ಥಿರ ಭಂಗಿಯಲ್ಲಿ ಮಾಡಬೇಕಾದ ಧ್ಯಾನಕ್ಕೆ ಸಿದ್ಧತೆ ಮಾಡುತ್ತದೆ.ಸಾಧನಾ ಪಾದದ 46 ನೇ ಸೂತ್ರದ ಪ್ರಕಾರ ಆಸನವನ್ನು ಸ್ಥಿರ - ಸುಖಂ ಆಸನಂ ಎಂದು ವ್ಯಾಖ್ಯಾನಿಸಿದ್ದಾರೆ. ಅಂದರೆ ಭಂಗಿಯು ಸ್ಥಿರವಾಗಿರಬೇಕು ಮತ್ತು ಹಿತಕರವಾಗಿರಬೇಕು.



**ಪ್ರಾಣಾಯಾಮ :**

ಇದು ಆಸನದ ನಂತರ ಬರುವ ಪ್ರಮುಖ ಅಂಗವಾಗಿದೆ. ಸಾಧನಾ ಪಾದದ ಐದು ಯೋಗ ಸೂತ್ರಗಳು (49,50,51,52, ಮತ್ತು 53) ಪ್ರಾಣಾಯಾಮದ ಕುರಿತು ಬೆಳಕು ಚೆಲ್ಲುತ್ತವೆ. ಸಾಧನಾ ಪಾದದ ಪ್ರಾಣಾಯಾಮವು ಹಠಯೋಗ ಪ್ರದೀಪಿಕಾ ಮತ್ತು ಘೇರಾಂಡಾ ಸಂಹಿತಾಗಳಲ್ಲಿ ಇರುವುದಕ್ಕಿಂತ ಭಿನ್ನವಾಗಿದೆ. ಪ್ರಜ್ಞೆಯನ್ನು ಪರಿವರ್ತಿಸಲು ದೇಹದ ಪ್ರಾಣಶಕ್ತಿಯನ್ನು ಪ್ರಾಣಾಯಾಮ ದಿಂದ ಜಾಗೃತಗೊಳಿಸಲಾಗುವುದೆಂದು ಹಠ ಯೋಗ ಗ್ರಂಥಗಳಲ್ಲಿ ಉಲ್ಲೇಖಿಸಿದೆ. ಆದರೆ, ಪತಂಜಲಿಯ ಪ್ರಕಾರ, ಪ್ರಾಣಾ ಯಾಮವನ್ನು (ಉಸಿರಾಟದ ನಿಯಂತ್ರಣ) ಸಾಧಿಸಲು ಎರಡು ಮಾರ್ಗಗಳಿವೆ. ಒಂದಕ್ಕೆ ಪ್ರಯತ್ನ ಬೇಕು.ಇನ್ನೊಂದಕ್ಕೆ ಪ್ರಯತ್ನ ಬೇಡ. ಸಹಿತ ಕುಂಭಕಕ್ಕೆ ಪ್ರಯತ್ನದ ಅಗತ್ಯವಿದೆ. ಕೇವಲ ಕುಂಭಕವು ಪ್ರಯತ್ನರಹಿತವಾಗಿರುತ್ತದೆ ಮತ್ತು ಸ್ಥಳ ಅಥವಾ ಸಮಯ ಅವಲಂಭಿತವಲ್ಲ. ಆದಾಗ್ಯೂ ಸಹಿತಾ ಕುಂಭಕವು ಕೇವಲ ಕುಂಭಕದ ಮೊದಲ ಹಂತವಾಗಿರುತ್ತದೆ. ಇದನ್ನು ಪತಂಜಲಿಯು ಸಾಧನಾ ಪಾದದ 51 ನೇ ಸೂತ್ರದಲ್ಲಿ ನಾಲ್ಕನೇ ಮತ್ತು ಅತ್ಯುನ್ನತ ಹಂತದ ಪ್ರಾಣಾಯಾಮ ಎಂದು ತಿಳಿಸಿದ್ದಾನೆ.



ಇಂಗ್ಲೀಷ್ ಮೂಲ : ಡಾ॥ ಕೆ.ವಿ. ರಘುಪತಿ
ಅನುವಾದ : ಪಾರ್ವತಿ ಭಟ್

ಪ್ರತಿ ವರ್ಷ ಜೂನ್ 21 ಅನ್ನು ಅಂತರಾಷ್ಟ್ರೀಯ ಯೋಗ ದಿನವೆಂದು ಆಚರಿಸಲಾಗುತ್ತಿದ್ದು, ಪ್ರಪಂಚದಾದ್ಯಂತ 100 ದಶಲಕ್ಷಕ್ಕೂ ಹೆಚ್ಚು ಜನರು ಯೋಗವನ್ನು ಅಭ್ಯಾಸ ಮಾಡುತ್ತಿದ್ದಾರೆ. ಆದರೆ ಜಾಗತೀಕರಣದ ಹಿನ್ನೆಲೆಯಲ್ಲಿ ತಮ್ಮ ದೇಹ ಮತ್ತು ಆರೋಗ್ಯದ ಬಗ್ಗೆ ಹೆಚ್ಚು ಗಮನ ಹರಿಸುತ್ತಿರುವುದರಿಂದ ಜನರು ಇಂದು ಅಭ್ಯಾಸ ಮಾಡುತ್ತಿರುವ ಯೋಗವು ಮಾನಸಿಕ ವಿಕಾಸ ವನ್ನು ಆಧರಿಸಿದ ಪತಂಜಲಿಯ ಸಾಂಪ್ರದಾಯಿಕ ಯೋಗದ ಬದಲಾಗಿ ಕೇವಲ ದೈಹಿಕ ವ್ಯಾಯಾಮವಾಗಿ ಮಾರ್ಪಟ್ಟಿದೆ.



**ಪ್ರತ್ಯಾಹಾರ :**
ಲೌಕಿಕ ಪ್ರಪಂಚದಲ್ಲಿ ಅತಿಯಾದ ಆನಂದವನ್ನು ಅನುಭವಿಸಬಹುದಾದ ಇಂದ್ರಿಯಗಳನ್ನು ನಿಗ್ರಹಿಸುವ ಅಭ್ಯಾಸವೇ ಪ್ರತ್ಯಾಹಾರ. ಇದು ಧಾರಣ ಮತ್ತು ಧ್ಯಾನಕ್ಕೆ ಸಿದ್ಧತಾ ಹಂತವಾಗಿದೆ. ಲೌಕಿಕ ಪ್ರಪಂಚದಲ್ಲಿನ ನಿರಂತರ ಅನುಭವವು ದೇಹ-ಮನಸ್ಸಿನ ಸಂಕೀರ್ಣದಿಂದ ಕ್ರಮೇಣ ಜಿಗುಪ್ಸೆಗೊಳ್ಳುವಂತೆ ಮಾಡುತ್ತದೆ. ಸಂಸ್ಕಾರಗಳು ಸುಪ್ತಪ್ರಜ್ಞೆಯಲ್ಲಿ ನಿರ್ಮಾಣಗೊಳ್ಳುವುದರಿಂದ, ಜಾಗೃತ ಮನಸ್ಸನ್ನು ವಿಚಲಿತಗೊಳಿಸು ತ್ತವೆ. ಹೀಗೆ, ಸಮಾಜದಿಂದ ಆಗಾಗ್ಗೆ ಬೇರ್ಪಡುವ ಅನುಭವವು ಸಾಧಕನು ಸೂಕ್ಷ್ಮ ಜೀವಿಯಾಗಿ ಹೊರ ಹೊಮ್ಮಲು ಸಹಾಯ ಮಾಡುತ್ತದೆ.





**ಸಂಯಮ :**
ಪತಂಜಲಿಯ ಅಷ್ಟಾಂಗ ಯೋಗದಲ್ಲಿ ಸಂಯಮ ಎಂದು ಕರೆಯಲ್ಪಡುವ ಉನ್ನತ ಮಟ್ಟದ ಯೋಗಾ ಭ್ಯಾಸವನ್ನು ಧಾರಣ (ಏಕಾಗ್ರತೆ), ಧ್ಯಾನ (ಧ್ಯಾನ) ಮತ್ತು ಸಮಾಧಿ ಎಂಬ ಪದಗಳಿಂದ ಉಲ್ಲೇಖಿಸ ಲಾಗುತ್ತದೆ. ಸಂಯಮವು ಧಾರಣ ಅಥವಾ ಏಕಾಗ್ರತೆಯಿಂದ ಪ್ರಾರಂಭವಾಗುತ್ತದೆ. ಪತಂಜಲಿಯ ಪ್ರಕಾರ, ಏಕಾಗ್ರತೆಯು ಮಾನಸಿಕ ಪ್ರಕ್ರಿಯೆಯಾಗಿದ್ದು ಅದು ಒಂದೇ ವಸ್ತುವಿನ ಮೇಲೆ ಗಮನವನ್ನು ಕೇಂದ್ರೀಕರಿಸುವುದಾಗಿದೆ ಮನೋವಿಜ್ಞಾನದಲ್ಲಿ ಸಾಮಾನ್ಯವಾಗಿ "ಏಕಾಗ್ರತೆ" ಎಂಬ ಪದವನ್ನು ಕೇವಲ ಒಂದು ವಿಷಯದ ಮೇಲೆ ಅಲ್ಪಾವಧಿಯ ಕಾಲ ಕೇಂದ್ರೀಕರಿಸುವುದಾಗಿದೆ. ಆದರೆ ಯೋಗದ ಮನೋ ವಿಜ್ಞಾನದ ಪ್ರಕಾರ ಮನಸ್ಸು ಕೇಂದ್ರೀಕೃತವಾಗಿರುವ ವಸ್ತುವಿನ ಮೂಲಭೂತ ಸ್ವಭಾವದೊಂದಿಗೆ ಆಳವಾಗಿ ಮೇಳೈಸುವುದನ್ನು ಏಕಾಗ್ರತೆ ಎನ್ನಲಾಗುತ್ತದೆ.



**ಧ್ಯಾನ :**
ಅಷ್ಟಾಂಗ ಯೋಗದ ಏಳನೇ ಅಂಗವೇ ಧ್ಯಾನ. ಸಾಧಕನು ವಿರಾಮವಿಲ್ಲದೇ ನಿರಾತಂಕವಾಗಿ ಒಂದು ವಸ್ತುವಿನ ಮೇಲೆ ತನ್ನ ಗಮನವನ್ನು ಇರಿಸುವುದನ್ನು ಧ್ಯಾನ ಎಂದು ಕರೆಯುತ್ತೇವೆ. ಪತಂಜಲಿ ಇದನ್ನು ಹೀಗೆ ವಿವರಿಸಿದ್ದಾನೆ. "ಒಂದು ವಸ್ತುವಿನ ಕಡೆಗಿನ ಮನಸ್ಸಿನ ಅಡೆತಡೆಯಿಲ್ಲದ ಹರಿವು, ಧ್ಯಾನವಾಗಿ ಬದಲಾಗುತ್ತದೆ". ವಿಷಯ ಮತ್ತು ವಸ್ತುವಿನ ನಡುವಿನ ಅಂತರವು ಕ್ಷೀಣಿಸಿದಾಗ, ನಿಜವಾದ ಧ್ಯಾನ ಉಂಟಾಗುತ್ತದೆ. ಅಲ್ಲಿಯವರೆಗೆ ಇದು ಪ್ರಕ್ರಿಯೆಯಾಗಿರುತ್ತದೆ. ಮಾನಸಿಕ ಗೊಂದಲಗಳ ಉಪಸ್ಥಿತಿಗನು ಗುಣವಾಗಿ ಧಾರಣ ಮತ್ತು ಧ್ಯಾನವನ್ನು ವ್ಯತ್ಯಸಿಸಬಹುದಾಗಿದೆ.





**ಸಮಾಧಿ :**
ಮನಸ್ಸಿಲ್ಲದ ಸ್ಥಿತಿಯನ್ನು ಸಮಾಧಿ ಎನ್ನುತ್ತೇವೆ. ಇದು ಸ್ವಯಂ ಪ್ರಜ್ಞೆ ಇಲ್ಲದ ಸಂಪೂರ್ಣ ತಲ್ಲೀನತೆಯಿಂದ ಕೂಡಿರುತ್ತದೆ. ಮನಸ್ಸಿನ ರೂಪವು ಸಂಪೂರ್ಣವಾಗಿ ಕಣ್ಮರೆಯಾಗುತ್ತದೆ. ಧಾರಣದಲ್ಲಿ ವಸ್ತುವು ಇರುತ್ತದೆ. ಧ್ಯಾನದಲ್ಲಿ ರೂಪವು ಕಣ್ಮರೆಯಾಗುತ್ತದೆ. ಆದರೆ ಅದರ ಸೂಕ್ಷ್ಮತೆಯು ಇನ್ನೂ ಇರುತ್ತದೆ ಮತ್ತು ಸಮಾಧಿಯ ಕೊನೆಯ ಹಂತದಲ್ಲಿ ವಸ್ತುವಿನ ಸೂಕ್ಷ್ಮತೆಯು ಸಂಪೂರ್ಣವಾಗಿ ಕ್ಷೀಣಿಸುತ್ತದೆ. ಇದು ಬಾಹ್ಯ ಜ್ಞಾನವಿಲ್ಲದ ಪ್ರಜ್ಞಾ ಸ್ಥಿತಿ. ಭೇದವಿಲ್ಲದ, ಏಕವಾದ ಮತ್ತು ಏಕರೂಪವಾದ ಪ್ರಜ್ಞೆ ಮಾತ್ರ ಉಳಿದಿದೆ. ಅದನ್ನು ಪದಗಳಲ್ಲಿ ವ್ಯಕ್ತಪಡಿಸಲು ಸಾಧ್ಯವಿಲ್ಲ. ಸಮಾಧಿ ಏನು ನೂತನ ಪರಿಕಲ್ಪನೆಯಲ್ಲ. ಇದು ಧ್ಯಾನದ ವಿಕಾಸದ ಹಂತವಾಗಿದೆ. ಧಾರಣದಿಂದ ಪ್ರಾರಂಭವಾಗಿ ಸಮಾಧಿಯಲ್ಲಿ ಅಂತ್ಯಗೊಳ್ಳುವ ಸಂಪೂರ್ಣ ಪ್ರಕ್ರಿಯೆಗೆ ಸಂಯಮ ಎಂದು ಹೆಸರು.



04-05-2023 ರಿಂದ 06-05-2023 ರ ವರೆಗೆ ತಿರುಚಾನೂರು ಶ್ರೀ ಪದ್ಮಾವತಿ ಅಮ್ಮನವರಿಗೆ ವಸಂತೋತ್ಸವಗಳು ನಡೆಯಿತು. ಈ ಸಂದರ್ಭದಲ್ಲಿ ಅಮ್ಮನವರಿಗೆ ಅಭಿಷೇಕ ಮತ್ತು ಸ್ವರ್ಣ ರಥೋತ್ಸವ ನಡೆಯಿತು.





04-05-2023 ರಂದು ಆಂಧ್ರಪ್ರದೇಶದ ಪಾರ್ವತಿಪುರಂ ಮನ್ಯಂ ಜಿಲ್ಲೆಯ ಸೀತಂಪೇಟೆಯಲ್ಲಿ ನೂತನವಾಗಿ ನಿರ್ಮಿಸಿದ ಶ್ರೀ ವೆಂಕಟೇಶ್ವರಸ್ವಾಮಿ ಆಲಯದ ವಿಗ್ರಹ ಸ್ಥಾಪನೆ, ಮತ್ತು ಮಹಾಸಂಪ್ರೋಕ್ಷಣೆ ನಡೆಯಿತು. ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡ ತಿ.ತಿ.ದೇ., ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಶ್ರೀ.ವಿ.ವೀರಬ್ರಹ್ಮ, ಐ.ಎ.ಎಸ್., ಮತ್ತು ವಿಶಾಖ ಶಾರದ ಪೀಠಾಧಿಪತಿ ಶ್ರೀ ಶ್ರೀ ಶ್ರೀ ಸ್ವರೂಪಾನಂದೇಂದ್ರಸರಸ್ವತಿ ಸ್ವಾಮಿಯವರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡರು. 04-05-2023 ರಂದು ಶ್ರೀ ಭೂದೇವಿ ಸಮೇತ ಶ್ರೀ ವೆಂಕಟೇಶ್ವರ ಸ್ವಾಮಿಯವರಿಗೆ ಕಲ್ಯಾಣೋತ್ಸವ ನಡೆಯಿತು.



ತಿರುಮಲೆ ವಸಂತ ಮಂಟಪದಲ್ಲಿ 04-05-2023 ರಂದು ನರಸಿಂಹ ಜಯಂತಿ ಸಂದರ್ಭದಲ್ಲಿ ಶ್ರೀ ನರಸಿಂಹ ಸ್ವಾಮಿಯವರಿಗೆ ವಿಶೇಶ ಪೂಜೆ ನಡೆಯಿತು.



05-05-2023 ತಿರುಮಲೆ ಸ್ವಾಮಿಯವರನ್ನು ದರ್ಶಿಸಿದ ವಿಶಾಖ ಶಾರದ ಪೀಠಾಧಿಪತಿ ಶ್ರೀ ಶ್ರೀ ಶ್ರೀ ಸ್ವರೂಪಾನಂದೇಂದ್ರ ಸರಸ್ವತಿ ಸ್ವಾಮಿಯವರು ಮತ್ತು ಅವರ ಉತ್ತರಾಧಿಕಾರಿ ಶ್ರೀ ಶ್ರೀ ಶ್ರೀ ಸ್ವಾತ್ಮಾನಂದೇಂದ್ರ ಸರಸ್ವತಿ ಸ್ವಾಮಿಯವರೊಂದಿಗೆ ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ ಎ.ವಿ. ಧರ್ಮಾರೆಡ್ಡಿ ಐ.ಡಿ.ಈ.ಎಸ್., ರವರು



29-04-2023 ರಂದು ತಿರುಮಲೆ ಸ್ವಾಮಿಯವರ ದರ್ಶನ ಪಡೆದ ಆಂಧ್ರಪ್ರದೇಶದ ರಾಜ್ಯಪಾಲರು ಗೌ॥ ಶ್ರೀ.ಎಸ್. ಅಬ್ದುಲ್ ನಜೀರ್. ನಂತರ ತಿ.ತಿ.ದೇ., ಕಾರ್ಯನಿರ್ವಹಾಣಾಧಿಕಾರಿ ಶ್ರೀ.ಎ.ವಿ. ಧರ್ಮಾರೆಡ್ಡಿ ಐ.ಡಿ.ಈ.ಎಸ್. ಯವರು ಮತ್ತು ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿ ಶ್ರೀ ಅನಿಲ್‌ಕುಮಾರ್ ಸಿಂಘಾಲ್ ಐ.ಎ.ಎಸ್., ರಾಜ್ಯಪಾಲರಿಗ ಸ್ವಾಮಿಯವರ ಚಿತ್ರಪಟವನ್ನು ನೀಡಿದರು.



ತಿ.ತಿ.ದೇ., ಆಡಳಿತ ಮಂಡಳಿಯ ಎಕ್ಸ್-ಅಫಿಷಿಯಾ ಸದಸ್ಯರಾಗಿ ದತ್ತಿ ಇಲಾಖೆಯ ಆಯುಕ್ತರು ಶ್ರೀ ಸತ್ಯನಾರಾಯಣ ರವರು 15-04-2023 ರಂದು ಪ್ರಮಾಣ ಸ್ವೀಕಾರ ಮಾಡಿದರು. ನಂತರ ತಿ.ತಿ.ದೇ., ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಶ್ರೀ ವಿ. ವೀರಬ್ರಹ್ಮ, ಐ.ಎ. ಎಸ್., ರವರು ಸ್ವಾಮಿಯವರ ತೀರ್ಥಪ್ರಸಾದಗಳನ್ನು ನೀಡಿದರು.




-ಶ್ರೀಮತಿ. ಪಾರಿಜಾತ.ಬಿ.ಎಸ್.
90083 35689

ಜೂನ್ 21 ರ ವಿಶ್ವ ಸಂಗೀತ ದಿನದಂದು "ನಾದಮಯ ಈ ಲೋಕವೆಲ್ಲಾ'' ಎಂಬ ಕವಿ ವಾಣಿಯಂತೆ ಎಲ್ಲೆಲ್ಲೂ ಸಂಗೀತವೇ.

"ಸಂಗೀತವೆಂದರೆ ಬರಿ ರಾಗ, ತಾಳ, ಮೇಳಗಳ ಸಂಗಮವಷ್ಟೇ ಅಲ್ಲ. ಅದೊಂದು ಜೀವನದ ರಾಗ. ಸಾರ್ಥಕ ಬದುಕಿನ ಭಾಗ. ಸಾಕುಬೇಕುಗಳ ಪ್ರೇರಕ. ನಾನು ತಾನೆಂಬುದಕ್ಕೆ ಧ್ಯೋತಕ. ಸಂಗೀತ ವಿಲ್ಲದ ಪ್ರಪಂಚ ಕಲ್ಪನೆಗೂ ನಿಲುಕದ ಬಾದಕ. ಜೀವನವೆಂಬ ರಾಗಕ್ಕೆ ಸುಖಶಾಂತಿಯೆಂಬ ತಾಳಮೇಳಗಳನ್ನು ಸರಿದೂಗಿಸಿ ಸುಶ್ರಾವ್ಯವಾದ ಸಂಗೀತದ ರಸದೌತಣ ನೀಡುವ ಸಾಧಕ.''

ಜೀವನದ ಪ್ರತಿ ಹೆಜ್ಜೆಯಲ್ಲೂ ಉತ್ಸಾಹ, ಹುಮ್ಮಸ್ಸನ್ನು ತುಂಬಿ, ಸಮಯವನ್ನು ಶೃಂಗಾರಮಯವಾಗಿಸಬಲ್ಲ ಶಕ್ತಿಯೇ ಸಂಗೀತ. ಬುದ್ಧಿವಂತ ಪ್ರಾಣಿ ಮನುಷ್ಯನು ಮಾತ್ರವಲ್ಲದೆ, ಪ್ರಾಣಿಪಕ್ಷಿಗಳು, ಗಿಡಮರಗಳು ಸಂಗೀತದ ಶಕ್ತಿಯನ್ನು ಬಳಸಿಕೊಳ್ಳುತ್ತವೆ ಎಂಬುದಕ್ಕೆ ಅನೇಕ ಉದಾಹರಣೆಗಳು ನಮ್ಮೊಂದಿಗಿವೆ. ಪ್ರಕೃತಿಯ ಕೂಸಾದ ಮನುಷ್ಯ ಮೊದಲಿಗೆ ಪ್ರಕೃತಿಯಲ್ಲಿನ ಬಗೆಬಗೆಯ ಸಂಗೀತದ ರಸ ದೌತಣವನ್ನು ಉಂಡು ಅದರ ಆಧಾರದಲ್ಲಿ ತನ್ನದೇ ರೀತಿಯ ಸಂಗೀತ ದೆಳೆಯನ್ನು ಹೆಣೆದುಕೊಂಡಿದ್ದಾನೆ.

ಕೋಗಿಲೆಯ ಕುಹೂ ಕುಹೂ , ಜೇನಿನ ಜೇಂಕಾರ, ಭ್ರಮರದ ಭ್ರಮರಿ, ಹರಿವ ನೀರ ಜುಳು ಜುಳು , ಹಕ್ಕಿಗಳ ಕಲರವ , ಜೀರುಂಡೆಯ ಜೀಕಲು , ಮಳೆಹನಿಯ ಮಾರ್ದನಿ , ತಂಗಾಳಿಯ ಸುಯ್ಯಾಲೆ ಎಲ್ಲವೂ ಪ್ರಕೃತಿಯ ಸಂಗೀತವೇ. ಇದರೊಂದಿಗೆ ಕಳೆವ ಜೀವನದ ಪ್ರತೀ ಹೆಜ್ಜೆಯೂ ರಸಮಯವಾದ ಕ್ಷಣ, ಇಂತಹ ಸಂಗೀತವೆಂಬ ಸಂಭ್ರಮಕ್ಕೆ ಪ್ರತ್ಯೇಕ ದಿನವೊಂದು ಬೇಕೆ? ಆದರೆ ಸಂಗೀತ ಲೋಕದಲ್ಲೇ ತಮ್ಮನ್ನು ತಾವು ಅರ್ಪಿಸಿ ಕೊಂಡವರನ್ನು ಅಭಿನಂದಿಸಲು, ಅವರಂತೆ ಪ್ರೇರಣೆ ಪಡೆಯಲು, ಸಂಗೀತದ ಶಕ್ತಿಯೇನೆಂಬುದನ್ನು ಪ್ರಪಂಚದ ಸಕಲ ಜೀವರಾಶಿಗೂ ಹಂಚುವ ಮಹೋನ್ನತಕಾರ್ಯ ಸದಾ ಜಾಗೃತವಾಗ ಲೆಂದು ಸಂಕಲ್ಪ ಮಾಡಲು, ಪಣತೊಡಲು, ಪ್ರತೀ ವರ್ಷ ಜೂನ್ 21 ರಂದು "ವಿಶ್ವ ಸಂಗೀತ''ದಿನಾಚರಣೆಯನ್ನು ಪ್ರಪಂಚ



ದಾದ್ಯಂತ ಆಚರಿಸಲಾಗುತ್ತದೆ. ಇದರಿಂದ ಸಂಗೀತಗಾರರಿಗೆ ಪ್ರೇರಣೆ, ಸಂಗೀತ ಪ್ರಿಯರಿಗೆ ಮನರಂಜನೆ ದೊರೆತಂತಾಗುವುದು.

1982 ರಲ್ಲಿ ಮೊದಲಿಗೆ "ಫೇಟ್ ಡೆ ಲಾ ಮ್ಯೂಸಿಕ್'' ಎಂಬ ಸಂಗೀತದ ಹಬ್ಬವನ್ನು ಫ್ರಾನ್ಸ್‌ನಲ್ಲಿ ಪ್ರಾರಂಭಿಸಲಾಯಿತು. ಇದರ ಅರ್ಥ ಸಂಗೀತ ಹಬ್ಬ. ಕಲೆ ಹಾಗೂ ಸಂಸ್ಕೃತಿಯ ಮಾಜಿ ಸಚಿವನಾಗಿದ್ದ ಜಾಕ್‌ಲಾಂಗ್‌ರಿಂದ ಪ್ರಾರಂಭವಾಯಿತು.ಸಂಗೀತಗಾರರನ್ನು ಹುರಿದುಂಬಿಸುವ ಹಾಗೂ ಅಭಿ ನಂದಿಸುವ ಕಾರಣದಿಂದ ಪ್ರಾರಂಭವಾದ ಈ ಉತ್ಸವ ವಿವಿಧ ಉದ್ಯಾನವನ ಗಳು, ಸಂಗೀತ ಕಲಿಕಾ ಕೇಂದ್ರಗಳು, ಪ್ರಮುಖ ನಗರಗಳು ಸಂಗೀತ ಮಂದಿರ ಗಳಲ್ಲಿ ಈ ದಿನ ವಿಶೇಷ ಸಂಭ್ರಮದೊಂದಿಗೆ ಸಂಗೀತ ಕಾರ್ಯಕ್ರಮಗಳನ್ನು ಏರ್ಪಡಿಸಲಾಯಿತು. ಹೀಗೆ ಪ್ರಾರಂಭವಾದ ಸಂಗೀತ ದಿನಾಚರಣೆ ಪ್ರಪಂಚದ ಅನೇಕ ದೇಶಗಳಿಗೂ ಹರಡಿತು.

ಮನದಾಳದ ಭಾವನೆಗಳು ಅಕ್ಷರಗಳಾಗಿ, ಪದಗಳಾಗಿ ಹೊರ ಹೊಮ್ಮಿ ಶ್ರುತಿ, ಲಯ, ರಾಗಗಳೊಂದಿಗೆ ಬೆರೆತು ವಿವಿಧ ಸಂಗೀತ ವಾದ್ಯವೃಂದ ದಲ್ಲಿ ಮಿಂದು ಸುಶ್ರಾವ್ಯವಾದ ಸ್ವರಾರಾಧನೆಯೊಂದಿಗೆ ತನುಮನವನ್ನು ಪುಳಕ ಗೊಳ್ಳುವಂತೆ ಮಾಡುವ ಶಕ್ತಿ ಸಂಗೀತಕ್ಕಿದೆ. ಇಂತಹ ಸಂಗೀತಕ್ಕೂ ಇತಿಹಾಸ ಇದೆ. ಪ್ರಾಗೈತಿಹಾಸ ಕಾಲದಲ್ಲಿ ಮನುಷ್ಯ ಕಾಡು ಮೇಡುಗಳಲ್ಲಿ ಸುತ್ತಾಡುತ್ತಾ ತನಗೆ ದೊರೆತ ಸಮಯ ಹಾಗೂ ವಸ್ತುಗಳ ಬಳಕೆಯಿಂದ ಸಂಗೀತದ ರಸ ದೌತಣ ಪಡೆಯಲಾರಂಭಿಸಿದ್ದ."ಬೇಚ್''ಎಂಬ ಕೊಳಲು ಸುಮಾರು 40000 ವರ್ಷಗಳ ಇತಿಹಾಸವನ್ನು ಹೊಂದಿದೆ. ಕರಡಿಯ ಮೂಳೆಯಿಂದ

ತಯಾರಾಗುತ್ತಿದ್ದ ಈ ಕೊಳಲು ಸಂಗೀತ ವಾದ್ಯ ಗಳ ಇತಿಹಾಸದಲ್ಲಿ ಪ್ರಮುಖವಾದ ಸ್ಥಾನ ಪಡೆದಿದೆ.

ಪಾಶ್ಚಾತ್ಯ ಸಂಗೀತದಂತೆ ಏಷ್ಯಾದ ಅನೇಕ ದೇಶಗಳು ತಮ್ಮದೇ ಆದ ಸಂಗೀತ ಇತಿಹಾಸವನ್ನು ಉಳಿಸಿವೆ. ಚೀನ ದೇಶವು ಸುಮಾರು 3000 ಹಳೆಯ ಇತಿಹಾಸ ಹೊಂದಿದೆ. ಮೆಸಪಟೋನಿಯ ಮನುಷ್ಯನ ನಾಗರೀಕತೆಯ ತೊಟ್ಟಿಲಾಗಿ ಅದರ ಪ್ರಮುಖಾಂಶ ಭಾಗಗಳಲ್ಲಿ ಸಂಗೀತ, ನೃತ್ಯವು ಪ್ರಮುಖ ಪಾತ್ರವಹಿಸಿವೆ. ಸಿಂಧೂ ಕಣಿವೆಯ ಹರಪ್ಪಾ, ಮೆಹಂಜೋದಾರೋವಿನ ಉತ್ಖನನದಲ್ಲಿ ಅನೇಕ ಸಂಗೀತ ವಾದ್ಯಗಳ ಬಳಕೆಯ ಕುರುಹುಗಳು ದೊರೆತಿವೆ.ಭಾರತದ ಶಾಸ್ತ್ರೀಯ ಸಂಗೀತವು ತನ್ನದೇ ಆದ ಮಹತ್ವದ ಸಾಂಪ್ರದಾಯಿಕ ವಿಶೇಷತೆಯನ್ನು ಪಡೆದಿದೆ. ಸಂಗೀತವು ಅತ್ಯಂತ ಪ್ರಾಚೀನ ಸಾಂಸ್ಕೃತಿಕ ಹಾಗೂ ಸಾಮಾಜಿಕ ಜೀವನದ ಭಾಗವಾಗಿದೆ.

ಇತಂಹ ಐಹಿತ್ಯವನ್ನು ಹೊಂದಿದ ಸಂಗೀತ ಕ್ಷೇತ್ರವು ನಿನ್ನೆ ಮೊನ್ನೆಯದಲ್ಲ. ಮನುಷ್ಯನ ಹುಟ್ಟಿನೊಂದಿಗೆ ಜೀವನದ ಭಾಗವಾಗಿ ಕೂಡಿಕೊಂಡಿದೆ. ಇದು ತನುಮನಕ್ಕೆ ಹಿತ ನೀಡುವುದರೊಂದಿಗೆ ಮಾನಸಿಕ ವ್ಯಾಧಿಗೆ ಚಿಕಿತ್ಸೆಯಾಗಿ, ದೈಹಿಕ ಹಾಗೂ ಮಾನಸಿಕ ವ್ಯಾಯಾಮವಾಗಿ ಬಳಕೆಯಾಗಿದೆ. ಮಾನಸಿಕ ಸಮಸ್ಯೆ, ಒತ್ತಡದ ಬದುಕು, ವ್ಯಸನಿಗಳ ಚಟುವಟಿಕೆ, ಉದ್ಯೋಗದ ಕ್ಷಮತೆ ಇತ್ಯಾದಿಗಳ ಉತ್ತಮ ಬದಲಾವಣೆಗೆ ಸಂಗೀತ ಅತ್ಯುತ್ತಮ ಮದ್ದು.

19 ನೇ ಶತಮಾನದಲ್ಲಿ ಸಂಗೀತವು ರೊಮ್ಯಾಂಟಿಕ್ ಮಾರ್ಗದಲ್ಲಿ ಹೆಚ್ಚು ಪ್ರಚಲಿತವಾಯಿತು. ನೊಂದ ಮನಸ್ಸು,ದೈಹಿಕ ಅಸಮರ್ಥತೆ ನಿವಾರಿಸಿ, ಪ್ರೀತಿಯ ಮಾರ್ಗದಲ್ಲಿ ಪ್ರೇಮಿಯ ಪ್ರೀತಿ ಹೆಚ್ಚಾಗಲು, ದೈವ ಭಕ್ತನಲ್ಲಿ ಭಕ್ತಿ ಹೆಚ್ಚಾಗಲು ಕಾರಣವಾಯಿತು. ಈ ನಿಟ್ಟಿನಲ್ಲಿ ಸಂಗೀತ ವಾದ್ಯಗಳು ಪ್ರಮುಖ ಪಾತ್ರವಹಿಸಿದವು. ತಾತ್ವಿಕವಾಗಿ ಶಬ್ದವನ್ನುಂಟು ಮಾಡುವ ವಸ್ತುವನ್ನು "ಸಂಗೀತ ವಾದ್ಯ" ವೆಂದು ಕರೆಯಲಾಗುತ್ತದೆ. ವಿವಿಧ ಬಗೆಯ ವಾದ್ಯಗಳು ಅದರಲ್ಲೂ 'ವಾಯು ವಾದ್ಯ', "ತಂತಿ ವಾದ್ಯ', 'ಮರ್ಧನ ವಾದ್ಯಗಳು' ವಿಶೇಷವಾದವು. ಸುಮಾರು 50-60 ವರ್ಷಗಳ ಇತಿಹಾಸ ಹೊಂದಿದ ವಾದ್ಯಗಳು ಪ್ರಾಕೃತಿಕ ಧ್ವನಿಯ ಅನುಕರಣೆಯಲ್ಲಿ ಬಳಕೆಯಾಗಿತ್ತು. ಪ್ರಾಣಿ ಪಕ್ಷಿಗಳು, ಗಿಡ ಮರಗಳ ವಸ್ತುಗಳನ್ನು ಬಳಸಿ ಸಂಗೀತ ವಾದ್ಯಗಳು ಸಿದ್ಧಗೊಳ್ಳುತ್ತಿದ್ದವು. ಅವುಗಳ ತಯಾರಿಕೆ ಹಾಗೂ ಬಳಕೆಯಲ್ಲಿ ಕಾಲಾನುಕ್ರಮದಲ್ಲಿ ಬದಲಾವಣೆಗೆ ಒಳಪಟ್ಟು ಮುಂದೆ ವಿದ್ಯುತ್ ಬಳಕೆಯ ಕಾರಣ ಎಲೆಕ್ಟ್ರಾನಿಕ್ ಉಪಕರಣಗಳ ಬಳಕೆಯಲ್ಲಿ ತಯಾರಾದವು. ಹೀಗೆ ಸಂಗೀತ ವಾದ್ಯಗಳು ಹೊಸ ರೂಪದಲ್ಲಿ ಹೊಸ ಛಾಪು ಮೂಡಿಸಿವೆ.

ಸಂಗೀತಕ್ಕೆ ತಲೆದೂಗದ ವ್ಯಕ್ತಿಯಿಲ್ಲ. ಪ್ರಾಣಿಯಿಲ್ಲ ಎಂಬಂತೆ, ಸರ್.ಜಗದೀಶ ಚಂದ್ರ ಬೋಸರು ಸಸ್ಯಗಳು ಸಂಗೀತ ಕೇಳುತ್ತವೆಂಬುದನ್ನು ಪ್ರಯೋಗದ ಮೂಲಕ ಸಾಬೀತು ಪಡಿಸಿದ್ದಾರೆ. ಇಂತಹ ಸಂಗೀತವು ಮಾನವನ ಜೀವನದ ಅತಿ ಮುಖ್ಯವಾದ ಭಾಗವಾಗಿದೆ ಎಂಬುದನ್ನು ಪ್ರತೀಕ್ಷಣವು ಸಾಬೀತು ಮಾಡಿದೆ. ಅವರವರ ಭಾವಕ್ಕೆ ತಕ್ಕ ರೀತಿಯ ಸಂಗೀತವು ಮನಸ್ಸನ್ನು ಹಕ್ಕಿಯಾಗಿಸಿ ಆಕಾಶದೆತ್ತರಕ್ಕೇ ಹಾರಿಸಿದರೆ ಹಗುರಾದ ಮನಸ್ಸಿನ ಮೂಲಕ ದೈಹಿಕವಾಗಿಯೂ ಚಟುವಟಿಕೆಯಿಂದ ಕೂಡಿರಲು ಸಹಕಾರಿ. ಜೀವನದ ಆಗುಹೋಗು ಗಳೊಂದಿಗೆ ಬೆರತು, ಅಗತ್ಯವಿದ್ದಾಗ ಮದ್ದಾಗಿ ಚಿಕಿತ್ಸೆ ನೀಡಿ. ಸಾಂತ್ವನ ನೀಡುವ ಸಂಗೀತಕ್ಕೊಂದು ವಿಶೇಷ ದಿನ ಬೇಕು. ಈ ಅಭಿಪ್ರಾಯದೊಂದಿಗೆ ಜೂನ್ 21 ರಂದು ವಿಶ್ವದಾದ್ಯಂತ "ವಿಶ್ವ ಸಂಗೀತ" ದಿನಾಚರಣೆಯನ್ನು ಆಚರಿಸಲಾಗುತ್ತದೆ . ಮನಸ್ಸಿನ ಭಾವನೆಯನ್ನು ವಿವಿಧ ರೂಪದಲ್ಲಿ ವಿನಿಮಯ ಮಾಡಿಕೊಳ್ಳುವಲ್ಲಿ ಸಂಗೀತದ ಪಾತ್ರವು ಮಹತ್ವದ್ದೇ ಮಾನವನ ಅಸ್ಥಿತ್ವದವರೆಗೂ ಇದು ಅವನ ಹಿಂಬಾಲಕ. ಸಂಗೀತವಿಲ್ಲದೆ ಮಾನವನಿಲ್ಲ. ಇದರ ಮಹತ್ವವನ್ನರಿತು ಎಲ್ಲರೊಂದಿಗೆ ಬೆರೆತು ಸಂಗೀತದ ಸಂಭ್ರಮದಲ್ಲಿ ಭಾಗಿಯೋಗೋಣ.



# ಸಾಗರಕಟ್ಟೆ ಮಠ ಸಂಸ್ಥಾಪಕ ಶ್ರೀ ಪ್ರದ್ಯುಮ್ನತೀರ್ಥರು (1910 - 1975)

- ಶ್ರೀಧರ ರಾಯಸಂ

ಸರ್ವ ಮೂಲ ಗ್ರಂಥ ಮತ್ತು ಅನೇಕ ಮಾಧ್ವ ಗ್ರಂಥಗಳ ಪಾಂಡಿತ್ಯ ಪಡೆದ ಶ್ರೀ ಪ್ರದ್ಯುಮ್ನ ತೀರ್ಥರು, ಬಹು ಗೃಹಸ್ಥ ಶಿಷ್ಯರನ್ನು ಸಂಪಾದಿಸಿದ ಮಹಾನ್‌ಯತಿಗಳು. ಇವರ ಆಶ್ರಮ ಅವಧಿ ಕ್ರಿ. ಶ. 1920 ರಿಂದ 1975 ಎಂದು ತಿಳಿದು ಬಂದಿದೆ. ಕುಂದಾಪುರ ವ್ಯಾಸರಾಜ ಮಠಾಧೀಶರಾಗಿದ್ದ ಲಕ್ಷ್ಮೀ ಪ್ರಿಯತೀರ್ಥರು 1920ರಲ್ಲಿ ಇವರ ಪಾಂಡಿತ್ಯ, ಶಾಸ್ತ್ರಾಭ್ಯಾಸ ಕಂಡು, ತಮ್ಮ ಉತ್ತರಾಧಿಕಾರಿಯಾಗಿ ಮಧ್ವ ಸಿದ್ಧಾಂತ ದೇಶದಲ್ಲೆಡೆ ಪ್ರಚಾರ ಮಾಡಲು, ಸೂಕ್ತರೆಂದು ಅರಿತು, ಧಾರವಾಡದ ಪಂಡಿತ ವೆಂಕಟರಮಣಾಚಾರ್ಯರ ಪುತ್ರನಿಗೆ ಆಶ್ರಮ ನೀಡಿ, ಪ್ರದ್ಯುಮ್ನ ತೀರ್ಥರೆಂದು ನಾಮಾಂಕಿತ ಮಾಡಿದರು. ಮುಳಬಾಗಿಲಿನ ಶ್ರೀಪಾದರಾಜ ಮಠಾಧೀಶರಾಗಿದ್ದ ಶ್ರೀವೇದನಿಧಿ ತೀರ್ಥರು ವಿದ್ಯಾಗುರುಗಳಾಗಿ, ಅನೇಕ ತತ್ವ, ಶಾಸ್ತ್ರ, ವೇದೋಪನಿಷತ್ತು, ಬ್ರಹ್ಮ ಸೂತ್ರ,ಮುಂತಾದ ಮಧ್ವಶಾಸ್ತ್ರಗಳನ್ನು ಉಪದೇಶಿಸಿದರು. ಶ್ರೀವೇದನಿಧಿ ತೀರ್ಥರ ಗುರೋಪದೇಶದಿಂದ, ಪ್ರದ್ಯುಮ್ನ ತೀರ್ಥರು ಸಕಲ ಶಾಸ್ತ್ರಗಳಲ್ಲಿ ಪಾಂಡಿತ್ಯ ಪಡೆದು, ಪ್ರಖ್ಯಾತ ಪಂಡಿತರಾಗಿದ್ದುದು ವಿಶೇಷ! ಹಲವು ಕಾಲ ಉತ್ತರಾಧಿ ಮಠಾಧೀಶರಾಗಿದ್ದ, ಶ್ರೀಸತ್ಯಧ್ಯಾನತೀರ್ಥರ ಹತ್ತಿರ ಪಾಠ, ಪ್ರವಚನದ ಉಪದೇಶ ಪಡೆದಿದ್ದರು.

ಶ್ರೀ ಪ್ರದ್ಯುಮ್ನತೀರ್ಥರು ಆಶ್ರಮ ಸ್ವೀಕರಿಸಿ, ಅನೇಕ ಗೃಹಸ್ಥರನ್ನು ಶಿಷ್ಯರನ್ನಾಗಿ ಮಾಡಿಕೊಂಡರು. ಮೈಸೂರು ಹತ್ತಿರ,25ಕಿ.ಮೀ. ದೂರದಲ್ಲಿರುವ ಕೃಷ್ಣರಾಜ ಸಾಗರ ಅಣೆಕಟ್ಟು ಹತ್ತಿರ, ಸಾಗರಕಟ್ಟೆಯಲ್ಲಿ ಶ್ರೀ ಪ್ರದ್ಯುಮ್ನ ತೀರ್ಥರು. ವಿಶೇಷ ಶ್ರಮದಿಂದ ಸಾಗರಕಟ್ಟೆ ಮಠ ಸ್ಥಾಪಿಸಿದರು. ಸಾಗರಕಟ್ಟೆ ಮಠದ ಪರಿಸರ ಸುಂದರವಾಗಿದ್ದು, ಜುಳು ಜುಳು ಹರಿಯುವ ಕಾವೇರಿ ಜೀವನದಿ, ಮತ್ತು ರಮಣೀಯ ಸ್ಥಳದೊಂದಿಗೆ, ಪಾವನ ಕ್ಷೇತ್ರವಾಗಿದೆ. ಈ ಸ್ಥಳದಲ್ಲಿ ಶ್ರೀ ಗೋಪಾಲ ಕೃಷ್ಣ ಸ್ವಾಮಿ, ಶ್ರೀಮುಖ್ಯ ಪ್ರಾಣ ದೇವರು, ಶ್ರೀಚಂದ್ರ ಮೌಳೀಶ್ವರ ದೇವರ ಸಾನಿಧ್ಯದಿಂದ ಪವಿತ್ರ ಆಧ್ಯಾತ್ಮಿಕ ತಾಣವಾಗಿದೆ.

ಶ್ರೀ ಪ್ರದ್ಯುಮ್ನ ತೀರ್ಥರು,ತಮ್ಮ ಶಿಷ್ಯರಾಗಿದ್ದ ಶ್ರೀ ಪ್ರಜ್ಞಾದಿರಾಜ ತೀರ್ಥರಿಗೆ ಕಾರ್ತಿಕ ಶುಕ್ಲ ನವಮಿ ಆಶ್ರಮ ನೀಡಿ ಮಠದ ಜವಾಬ್ದಾರಿವಹಿಸಿ, ಉತ್ತರಾಧಿಕಾರಿಯಾಗಿ ನೇಮಿಸಿಕೊಂಡರು. ಇವರ ಶಿಷ್ಯರಲ್ಲಿ ಶ್ರೀನರಸಿಂಹ ಮೂರ್ತಾಚಾರ್, ಶೇಷಗಿರಿ ಆಚಾರ್ ಮುಂತಾದವರು ಪ್ರಮುಖರು. ಸಾಗರಕಟ್ಟೆ ಮಠದ ಪರಂಪರೆ ಶ್ರೀ ಪ್ರದ್ಯುಮ್ನತೀರ್ಥರಿಂದ ಮುಂದುವರೆಯಿತು. ಸಾಗರಕಟ್ಟೆ ಪ್ರದ್ಯುಮ್ನತೀರ್ಥರು ಮಂತ್ರಾಲಯದ ಶ್ರೀರಾಘವೇಂದ್ರಸ್ವಾಮಿಗಳ ಅಂತರಂಗದ ಭಕ್ತರಾಗಿ ವಿಶೇಷ ಸೇವೆ ಮಾಡಿದ ಮಹಾನುಭಾವರು. ಮೈಸೂರಿನ ಕೃಷ್ಣಮೂರ್ತಿ ಪುರಂನಲ್ಲಿ ಸಾಗರಕಟ್ಟೆ ಮಠದ ಶಾಖಾ ಮಠ ಸ್ಥಾಪಿಸಿ,ಪೂಜೆ ದೇವತಾರ್ಚನೆ ನಡೆಯುತ್ತಲಿದೆ. ಶ್ರೀಪ್ರಜ್ಞಾಧಿರಾಜೇಂದ್ರ ತೀರ್ಥರು ಮೈಸೂರಿನ ಕೃಷ್ಣಮೂರ್ತಿಪುರಂನ ಮಠದಲ್ಲಿ ಯತಿಪರಂಪರೆ ಮುಂದುವರಿಸಿಕೊಂಡು, ದೇವತಾ ಪೂಜೆ, ಪಾಠ ಪ್ರವಚನ ನಡೆಸುತ್ತಿದ್ದಾರೆ. ಸಾಗರಕಟ್ಟೆ ಪ್ರದ್ಯುಮ್ನ ತೀರ್ಥರು,ಮೈಸೂರಿನ ಕೃಷ್ಣಮೂರ್ತಿಪುರಂನ ಮಠದಲ್ಲಿ ಜೇಷ್ಠ ಬಹುಳ ಅಮಾವಾಸ್ಯೆ. ರಾಕ್ಷಸ ಸಂವತ್ಸರ, 1975 ರಂದು ಬೃಂದಾವನಸ್ಥರಾದರು.

ಶರಣ್ಯ ವಿಠಲಾಸಕ್ತಂ ಪ್ರಜ್ಞಾಪೀಠಸ್ಥ ಸ್ಥಾಪಕಮ್।
ಪ್ರಮಾಣಜ್ಞಂ ಪ್ರಮೇಯಜ್ಞಂ ಪ್ರದ್ಯುಮ್ನಾಖ್ಯ ಗುರುಂ ಭಜೇ ॥

**ಧಾರಾವಾಹಿ**

# ತಿರುಮಲೆ ಕಾಲಮಾನಾಚರಣೆಗಳು

- ಮೂಲ . ಡಾ॥ ಎನ್.ಸಿ.ವಿ. ನರಸಿಂಹಾಚಾರ್ಯ

- ಅನುವಾದ : ಶ್ರೀಮತಿ

ಸಮಗ್ರ ದೇಶಗಳಲ್ಲಿ ನಿಖಿಲದೇಶದಲ್ಲಿ ಸರ್ವಕಾಲದಲ್ಲಿಯೂ ಅಪ್ರತಿಹತರಾಗಿಯೂ ವಿಜೃಂಭಿತರಾಗುವ ಶ್ರೀಮದ್ರಾಮಾನುಜಚಾರ್ಯರು ದಿವ್ಯಜ್ಞಾನ ಗಣಿಯಲ್ಲವೇ? ಉಳಿದವರಿಗೂ ಮಾದರಿಯಲ್ಲದೆ ಮತ್ತೇನು? ದಿಗಂತವ್ಯಾಪ್ತರಾಗಿರುವ ಸಕಲ ಜನರಿಗೂ ಶಿರೋಧಾರ್ಯರಲ್ಲದೆ ಮತ್ತೇನು?

ಎಂಬ ಶ್ಲೋಕವನ್ನು ಅನುಸಂಧಿಸುವಾಗ ನಮ್ಮ ರಾಮಾನುಜಾಚಾರ್ಯರು ಭಗವಂತ ಅನುಗ್ರಹಿತರಾಗದೇ ಮತ್ತೇನು? ಎಂದು ಕೋವಿದರು ಉದ್ಗರಿಸಲು ಶ್ರೀ ಭಗವದ್ರಾಮಾನುಜಾಚಾರ್ಯರು ಕೃತಾರ್ಥರಾಗಿ ಮತ್ತೆ ಪ್ರದಕ್ಷಿಣಕಾರವಾಗಿ ಹೊರಟು ನಿಂತರು. ನಂತರ ಭಗವದ್ರಾಮಾನುಜರಿಗೆ ಸಂಬಂಧಿಸಿದ ಅಧ್ಯಾಪಕರು ಯತಿರಾಜವಂಶತಿ ಮೊದಲುಗೊಂಡು ಎಲ್ಲವನ್ನು ಅನುಸಂಧಿಸುವುದರ ಜೊತೆಗೆ ಸಮಸ್ತ ನೃತ್ಯಗೀತವಾದ್ಯಗಳೊಂದಿಗೆ ತಮ್ಮ ಸನ್ನಿಧಿಗೆ ಪ್ರಸ್ಥಾನಗೊಂಡು ನೀರಾಜನ ಆರತಿಗೈದು,ಆತ್ಮೀಯರಿಗೆ ತೀರ್ಥಪ್ರಸಾದಗಳನ್ನು 'ಆನಂದಾಳ್ವಾನ್' (ಶಠಾರಿಯಂತಹುದು) ಮೊದಲಾದುವುಗಳನ್ನು ಎಲ್ಲರಿಗೂ ಪ್ರಸಾದಿಸಿ ಆಶೀರ್ವಾದಿಸುವಂಥವರಾದರು.ಇದಾದ ಹನ್ನೆರಡನೇ ದಿನ ನೂತ್ತಂದಾದಿ ಅನುಸಂಧಾನವಾದ ಬಳಿಕ ಭಗವದ್ರಾಮಾನುಜರ ಮಂಗಳಶಾಸನದ ಕ್ರಮಪಾಲಿಕೆ. ಹೀಗೆ ಅಲ್ಲಿಯವರೆಗೂ ಹಿರಿಯರ ನಿಯಮವು. ಹೀಗೆ ಭಗವದ್ರಾಮಾನುಜರ ಇತರ ಸನ್ನಿಧಿಗಳಿಗಿಂತ ಭಿನ್ನರೂಪವಾದ ಮಂಗಳ ಶಾಸನವೇ ತಿರುಮಲೆಯಲ್ಲಿಯ ಮೂಲವಿರಾಟ್ ರೂಪವೇ ಪ್ರಾಧಾನ್ಯವಾಗಲು ಕಾರಣವೆಂದು ಖಚಿತಪಡಿಸಿದರು.

ತಿರುಮಲ ಬ್ರಹ್ಮೋತ್ಸವದ ಮೊದಲದಿನ ಪ್ರಾತಃ ಕಾಲದಲ್ಲಿ ಸಂಧಾನವಿರದು. ರಾತ್ರಿ ಮೊದಲಿಗೆ ತಿರುವಂತಾದಿ, ಎರಡನೇ ಉತ್ಸವ ದಿನದಂದು ಪ್ರಾತಃ ಸಾಯಂಕಾಲಗಳಲ್ಲಿ ಎರಡನೇ ತಿರುವಂತಾದಿ, ಮೂರನೇ ದಿನ ಪ್ರಾತಃ ಸಾಯಂಕಾಲದಲ್ಲಿ ಮೂರನೇ ತಿರುವಂತಾದಿ, ನಾಲ್ಕನೇ ದಿನದಲ್ಲಿ ಬೆಳಗ್ಗೆ ಸಂಜೆ ನಾಲ್ಕನೇ ತಿರುವಂತಾದಿ, ಅಂದು ಸಂಜೆ ನಾಲ್ಕನೇ ನಾನ್ಮುಗನ್ ತಿರುವಂತಾದಿ ,ತಿರುವಂತಾದಿ , ಐದನೇ ದಿನ ಬೆಳಗ್ಗೆ ತಿರುವಿರುತ್ತಂ ಒಂದು ಪರ್ಯಾಯ ಅನುಸಂಧಾನ ಮಾಡಲಾಗುವುದು. ನಂತರ ಮುದಲಾಯಿರಂ ಆರಂಭಿಸತಕ್ಕದ್ದು. ರಾತ್ರಿ ಸಹ ತಿರುವಿರತ್ತಂ ಒಂದು ಸಾರಿ ಅನುಸಂಧಾನ ಮಾಡಿ, 'ಮುದಲಾಯಿರಂ' ನ ಉಳಿದ ಭಾಗವನ್ನು ಅನುಸಂಧಾನ ಮಾಡತಕ್ಕದ್ದು. ಆರನೇ ದಿನದಲ್ಲಿ ಪ್ರಾತಃ ಸಾಯಂಕಾಲಗಳಲ್ಲಿ ಪೆರಿಯು ತಿರುವಂತಾದಿಯ ಒಂದು ಪರ್ಯಾಯವನ್ನು ಅನುಸಂಧಾನ ಮಾಡಿದ ನಂತರ ಮುದುಲಾಯಿರಂ ನ ಶೇಷ ಭಾಗವನ್ನು ಅನುಸಂಧಿಸಬೇಕು. ಏಳನೇ ದಿನದ ಮುಂಜಾನೆ (ಪೆರಿಯ) ತಿರುಮೊಳಿಯ ಆರಂಭ. ತೋಟೋತ್ಸವದ ಸಂಚಾರ ಸಮಯದಲ್ಲಿ ರಾತ್ರಿಯ ವೇಳೆಯೂ ಸಹಿತ ತಿರುಮೊಳಿಯೇ ಎರಡನೇ ಆವೃತ್ತಿಯಲ್ಲಿ ಅನುಸಂಧಿಸಲಾಗುವುದು.ರಥ ಹಿಂದಿರುಗಿ ತನ್ನ ಸ್ಥಾನಕ್ಕೆ ಸೇರಿದ ನಂತರ ತೇರಿನ ಸಂಪ್ರದಾಯನುಷ್ಠಾನ ಆಗುವಲ್ಲಿ ಪೆರಿಯಳ್ವಾರ್ ತಿರುಮೊಳಿ. ಪೆರಿಯತಿರುಮೊಳಿಯ ಸಮಾಪ್ತಿ ಮಾಡತಕ್ಕದ್ದು ತಿರುಮೊಳಿ ಸಮಾಪ್ತಿಯ ನಂತರ ತಿರುವೆಳುಕೂತ್ತಿರುಕ್ಕೈ, ಶಿರಿಯ ತಿರುಮಡಲ್, ಪೆರಿಯ ತಿರುಮಡಲ್ ಈ ಮೂರನ್ನು ಅನುಸಂಧಿಸತಕ್ಕದ್ದು. ರಥದಿಂದಿಳಿದು ದೇವಾಲಯಕ್ಕೆ ಹೋಗುವಾಗ ತಿರುವಾಶಿರಿಯವನ್ನು ರಾತ್ರಿ ಮುದಲಾಯಿರಂನ ಶೇಷ ಭಾಗವನ್ನು ಅನುಸರಿಸತಕ್ಕದ್ದು ಒಂಬತ್ತನೇ ದಿನ ಬೆಳಗ್ಗೆ ಮುದಲಾಯಿರಂ ಉಳಿದ ಭಾಗ,ತಿರುಕ್ಕುಂದಾಂಡಕಂನ್ನು, ತಿರುನೆಡುಂ



ದಾಂಡಕಂ,ಮಧ್ಯಾಹ್ನ ಚೂರ್ಣಾಭಿಷೇಕ ಸಮಯದಲ್ಲಿ (ಗಂಧಾದಿ ಉತ್ಸವ) ರಾಜಮಾರ್ಗದಲ್ಲಿ, ಗೋಪುರಗಳಲ್ಲಿ ತಿರುಚ್ಚೆಂದವಿರುತ್ತಂ ರಾತ್ರಿ ನೂತ್ತಂದಾದಿಗಳನ್ನು ಅವಕಾಶವಿದ್ದಲ್ಲಿ ಆವೃತ್ತಿ ಮಾಡಬಹುದು. ಬಳಿಕ ಸ್ವಾಮಿಯೆದುರು ಸಮಾಪ್ತಿ, ಹತ್ತನೇ ದಿನ ಶ್ರೀ ಪುಷ್ಪಯಾಗ ವೇಳೆಯಲ್ಲಿ ದ್ವಾದಶಾರಾಧನೆಯ ಸಮಯದಲ್ಲಿ ತಿರುವಾಯ್‌ಮೊಳಿ ಅನುಸಂಧಾನವು ಆರನೇ ಉತ್ಸವದ ಸಾಯಂಕಾಲದಲ್ಲಿ ವಸಂತೋತ್ಸವದ ಅಂಗವಾಗಿ ಚೂರ್ಣಾಭಿಷೇಕ ಜರಗುವ ಬೀದಿಯಲ್ಲಿ ಮೆರವಣಿಗೆ ಸಮಯದಲ್ಲಿ ಅನುಸಂಧೇನವಿಲ್ಲ.

ತಿರುಮಲೆಯಲ್ಲಿ 'ಇಯಚ್ಚಾ ' ಅಲ್ಲದೇ ಮೂರು ಸಾವಿರ ಪ್ರಬಂಧಗಳಲ್ಲಿನ ಶ್ರೀ ವೇಂಕಟೇಶ್ವರ ವಿಷಯಕವಾದ ಪಾಶುರಗಳನ್ನು ಎರಡು ಸಾರಿ ಅನುಸಂಧಿಸುವುದಕ್ಕಾಗಿ 'ಇಯಚ್ಚಾ' ಪಾಶುರವನ್ನು ಎರಡು ಸಾರಿ ಅನುಸಂಧಿಸುವ ರಿವಾಜೇ ಕಾರಣ.

ಶ್ರೀ ಭಗವದ್ರಾಮಾನುಜರು ಶ್ರೀಮನ್ನಾಥರೊಡಗೂಡಿ ಮೊದಲು ಗೊಂಡ ಸಂಪ್ರದಾಯದ ಪ್ರಕಾರ ಕೋರಿ ಬಂದವರ ಇಚ್ಛೆಗಳನ್ನು ತೀರಿಸುವ (ಮುದಲಾಳ್ವಾರ್) ಮೂಲೋಕಕ್ಕೆ ದೇವನೀತನು ಎಂದು ಕೇಳಿದ್ದನ್ನು ಹೇಳು ತ್ತಲೇ ಮುದಲಾಳ್ವಾರರು ಮೂರು ಜನರ ಆಸೆಗಳನ್ನು ಸರಿಯಾಗಿ ತೀರಿಸಿದ ಬೆನ್ನಲ್ಲೇ ತಿರುವಂತಾದಿಗಳಿಗೆ ಶ್ರೀವೇಂಕಟೇಶ್ವರನೇ ಪ್ರತಿಪಾದ್ಯನು. ತಿರು ಮಂತ್ರದಲ್ಲಿರುವ (ಅಷ್ಟಾಕ್ಷರಿಮಂತ್ರ) 'ನಾರಾಯಣಾಯ' ಎಂಬ ಪದದಲ್ಲಿ ವ್ಯಕ್ತವಾಗಿರುವ ಚತುರ್ಥಿವಿಭಕ್ತ್ಯರ್ಥಕ್ಕೆ ಕೈಂಕರ್ಯದ್ವಾರ ವಾಗಿರುವ ಈ ತಿರುವಂತಾದಿಯನ್ನು ಸಮಾನಾರ್ಥಕನಾಗಿ ಇಯಚ್ಚಾ ಶೇಷಕ್ಕೆ ಈತನೇ ಪ್ರತಿಪಾದ್ಯನೆಂದು ನಿರ್ಣಯಿಸಿ ಅಧ್ಯಯನೋತ್ಸವದಂದು ಶ್ರೀವೇಂಕ ಟೇಶ್ವರ ಸ್ವಾಮಿಯೇ ಮೊದಲು ಕೇಳಬೇಕೆಂದು ನಿಯಮವಿರುವು ದರಿಂದಲೇ ಇಯಚ್ಚಾ, ಪ್ರಬಂಧಕ್ಕೆ ಶ್ರೀವೇಂಕಟೇಶ್ವರನೇ ಪ್ರತಿಪಾದ ನಾಗಿರುವುದರಿಂದ ಶ್ರೀವೇಂಕಟೇಶ್ವರ ವಿಷಯವಾದ ಪಾಶುರವನ್ನು 2-3 ಬಾರಿ ಅನುಸಂಧಿಸಬೇಕೆಂದು ಹಿರಿಯರ ನಿರ್ಣಯ. 'ಉಲಗಮುಣ್ಡ ಪೆರುವಾಯಾ' (ದಶಕವು) 'ತಾಯ್ತೆಂದೆ (ದಶಕವು) ದಶಕಗಳ ಮೂಲಕವೇ ನಮ್ಮಾಳ್ವಾರುಗಳಿಗೆ ಭಗವದ್ವಿಷಯದಲ್ಲಿರುವ ಆ ಜನ್ಮಸಿದ್ಧ ಪ್ರಾವೀಣ್ಯ ಪ್ರತಿಪಾದನೆಗಾಗಿ ತಿರುವಿರುತ್ತದೆ. ಮುಂಚೆ 'ಮುಲ್ಲೈಯೊಳುಮುಳು ಮುತ್ತಂ' ಎಂಬ ಪಾಶುರವನ್ನು ಅನುಸಂಧಾನ ಮಾಡುವಾಗ ಎರಡು ಬಾರಿ ಅನುಸಂಧಿಸಬೇಕೆಂದು ಯಾದಾನು ಮೊರಾಕ್ಕೈ ಎಂಬ ಹಾಡನ್ನು ಎರಡು ಸಾರಿ ಹಾಡಿ ಹಾಡಿ ತಿರುಕ್ಕೊಟಿಯೂರ್‌ನಂಬಿ (ಗೋಷ್ಠಿಪೂರ್ಣರ) ಐತಿಹ್ಯ ವನ್ನು ಅನುಸರಿಸಬೇಕೆಂದು ಹಿರಿಯರು ನುಡಿದಿದ್ದಾರೆ.

ತಿರುಮಲೆ - ತಿರುಪತಿ ಎರಡು ಸ್ಥಳಗಳು ಕಲೆತು ಒಂದೇ ಕ್ಷೇತ್ರಾ ವೆಂದು ಶ್ರೀ ಭಗವದ್ರಾಮಾನುಜರು ಸ್ವತಃ ನಿಖರವಾಗಿ ಹೇಳಿದ್ದಾರೆ. ಆ ದಿನದ ಐತಿಹ್ಯವಿರುವುದರಿಂದಲೇ ತಿರುಪತಿಯಲ್ಲಿರುವ ಶ್ರೀ ಗೋವಿಂದ ರಾಜು ಸ್ವಾಮಿಯವರಿಗೆ ಅಧ್ಯಯನೋತ್ಸವು ಜರಗುವವರೆಗೂ ತಿರುಮಲೆ ಯಲ್ಲಿ ವೈಷ್ಣವರು ಯಾರೂ ಪ್ರಬಂಧಗಳನ್ನು ಓದುವುದಾಗಲೀ ಓದಿಸುವು ದಾಗಲೀ ಮಾಡಕೂಡದು.

ಪ್ರಬಂಧಗಳಲ್ಲಿ ಶ್ರೇಷ್ಠವಾದ ತಿರುವಾಯ್ ಮೊಳಿ ಮೊದಲು ಗೊಂಡು,ಇತರ ಪ್ರಬಂಧಗಳು ಮೊದಲುಗೊಂಡು ಯಾವುದೇ ಆಗಲಿ ಅನುಸಂಧಿಸುವುದು ಮೊದಲು ಇಯಚ್ಚಾದಿಂದ ಆರಂಭಿಸುವುದಕ್ಕೆ ಕಾರಣವು.

ಶ್ರೀ ಭಗವದ್ರಾಮಾನುಜರ ಆಜ್ಞೆಯನ್ನು ಪೆರಿಯವಾಚ್ಚಾನ್‌ಪಿಳ್ಳೈ ಅನುಗ್ರಹಿಸಿರುವ 'ಕಲಿಯನ್ ಅರುಳ್‌ನಾಡು ' (ಇದೊಂದು ಗ್ರಂಥ) ಶ್ರೀವೇಂಕಟೇಶ್ವರನು ಶ್ರೀಗೋವಿಂದರಾಜು ಸ್ವಾಮಿಯ ಪ್ರಬಂಧಗಳನ್ನು ಪಠಿಸುವ ವೇಳೆ ಎರಡು ಬಾರಿ ಅನುಸಂಧಾನವನ್ನು ಮಾಡುವ ಪಾಶುರಗಳನ್ನು ಅನುಕ್ರಮವಾಗಿ ಇಯಚ್ಚಾ ಮೊದಲಾಯಿರಮಂ, ತಿರುಮೊಳಿ, ತಿರುಕ್ಕಂದಾಂಡಕಂ ತಿರುನೆಡುಂಡಾಂಕಮಂ, ತಿರುವಾಯ್ ಮೊಳಿ (ಇರಾಮನುಜ) ನೂತ್ತಂದಾದಿ, ಉಪದೇಶರತ್ನಮಾಲ ಇದು ಕ್ರಮ ಮೊದಲು ಇಯಚ್ಚಾ ಪ್ರಬಂಧದ ತಿರುವಿರುತ್ತದಲ್ಲಿರುವ 2-3 ಅನು ಸಂಧಿಸಬಹುದಾದ ಪಾಶುರಗಳು - ಮುಲ್ಲೈಯಾ ಮುಳುಮುತ್ತಂ, ಯಾದಾನುಮಾರಾಕ್ಕೈ, ಶಿರಿಯ ತಿರುಮಡಲ್, ನಾರಾಯಣಾ ಓ ಮಣಿವಣ್ಣಾ, ನಾಗಣೈಯಾಮ್ ವಾರಾಯ್ ಎನ್ ಆರಿಡರೈ ನಿಕ್ಕಾಯ್, 'ಶಿರಾರ್ ತಿರುವೇಂಗಡಮೇ, ತಿರುಕ್ಕೊವಲೂರೇ' ಆರಾಮಂ ಶೂಳಂದ ವರಂಗಮ್ ಎಂಬ ಮೂರು ವಾಕ್ಯಗಳು, ಪೆರಿಯ ತಿರುಮಡಲ್, ಪ್ರಬಂಧದ - ಪೊನ್ನಿಯಲು ಮಾಡಕ್ಕವಾಡಂ ಕಡೆಂದು ಪುಕ್ಕು ಎನ್ನುಡೈ ಯಕಣ್‌ಕಳಿಪ್ಪ ನೊಕ್ಕಿನೆನ್ ಮನ್ನು ಮರಂಗತ್ತೈ ಮ್ಮಾಮಣಿಯ್ಯೆ ತೆನ್‌ತಿಲ್ಲೆ ಚಿತ್ತಿರಕೂಡೆತ್ತನ್ ಶೆಲ್ವನ್ನೈ ಮಿನ್ನಿಮಳ್ಳೈ ತವಳುಂ ವೇಂಗಡತ್ತಂ ವಿತ್ತ ಕನ್ನೈ ಮನ್ನನ್ನೈ ಮಾಲಿರಂ ಜೋಲ್ಲೈ ಮಣಾಲನ್ನೈ ಎಂಬ ಮುದಲಾಯಿರದಲ್ಲಿನ ಶುತ್ತು ಮೊಳಿವಟ್ಟಂ ಉನ್ನಿಯು ಬಕ್ಕಲ್ಲೈಯಲ್ ಶೆಂಗಮಲಕ್ಕಳಲಿಲ್ ಎನ್ನಿದು ಮಾಯಂ ಮಿನನ್ನಯ್ಯೆ ನುಣಿಡ್ಯೆಯಾರ್ ತೆನ್ನಿಲಿಂಗೈ ಮುನ್ನನ್ ಮಚ್ಚಾಡುವಾಳಿಗೈ ಯೇಣಿ, ಕೊಂಡಲ್ ಪಣ್ಣಾ ಇಂಗೆ ಪಾದರ್ ಕಂಡಾಯ್ ಇಂಗೆ, ಕಡಿಯಾನ್ ಪೊಳಲಿಣಿವೇಂಗಡವಾ, ಮೂನ್ನೆಳು ತ್ತದನ್ನೈ. ತನ್ನಡಿಯಾರ್ ತಿರುತ್ತುಕುತ್ತ, ಏದಂಗಳಾಯಣ, ಉಂಗಳ್, ಉಂಗಲ್, ಪರುಪ್ಪದತ್ತು ತಿರುಪ್ಪಾವೈ ಪ್ರಬಂಧದಲ್ಲಿರುವ - ಓಂಗಿ ಯುಲ ಗಳಂದ.ನಾಯಕನಯ್, ಉಂದು, ಮಾರಿಮಲ್ಲೈ ಅನ್ನಿವುಳಕಮ್, ಕೂಡಾರೈ ನಾಯ್‌ಚ್ಚಿಯಾರ್ ತಿರುಮೊಳಿಯಲ್ಲಿನ ಮತ್ತನನ್ ನಲಿ ಮಲಿರ್, ಕಾಟ್ಟಲ್ ವೇಂಗಡಮ್ ವೆಳ್ಳೈ ವಿಳಿಶಂಗು,ಮೆನ್ನೈಡೆ, ಶಂಗ ಮಾಡ ಕಲ್, ಮದಯಾನ್ನೈ,ನಾಳನಳಮ್ ಪೊಳಿಲ್ ಪಾಡುಜ್ಕಯಲ್ ಕಾಳ್, ಮಳ್ಳೈಯೆ ಮಳ್ಳೈಯೆ, ಪೋಜ್ಗೋದಂಶೂಳಂದ, ಮಾದನೆನ್, ಮಣಿಯನ್ನೈ ಪೆರುಮಾಳ್ ತಿರುಮೊಳಿಯಂದು-ವಾಯಾರೀರ್ರೈವಾರು, ವನ್‌ಪೆರು ವಾನಕಮ್,ಶಿಡಿಯಾಮಂ, ದೇವರ್ರೈಯಮ್, ಕುರ್ರೈಕಡಲ್ಲೈ ತಿರುಚ್ಚಿಂದ ವಿರುತ್ತತ್ತಿಲ್ ಶೆಳುಜ್ಕೊಳಮ್, ಪೆರುಮ್ವನಿ, ನಡಂದಕಾಳ್‌ಗಳ್ ತರಂಡ ಮಾಡು, ಕಡ್ಯೆಂದು ಪಾರ್ಕಡಲ್, ಅರಂಗನೇ ತರಂಗನೀರ್, ಕುಲಂ ಗಳಾಯ್,ಇರಂಡುರೈಪ್ಪದು, ವೈದುನಿನ್ನೆ, ಅತ್ತನಾಗಿ,ತಿರುಮಾಲೈಯಲ್ಲಿ ರುವ ವಚ್ಚೆಮಾನುಲ್ಲೈ, ಕುಡದಿಶೈ, ಮೇಯ್‌ಪಾರುಳ್, ಅಮಲನಾದಿ ಪಿರಾನ್ ಪ್ರಬಂಧದಲ್ಲಿರುವ -

(ಮುಂದುವರೆಯುತ್ತದೆ)

# ಮುದ್ರಾ ಯೋಗಾ

ಡಾ|| ಲೀಲಾ ಬಸವರಾಜು
87628 35104

ಭಾರತ ಹಲವಾರು ಮಹಾಮಹಿಮರಾದ ಋಷಿ, ಮುನಿಗಳು ಜನಿಸಿದ ಪುಣ್ಯಭೂಮಿ. ಅಂತಹ ಮಹಾಮಹಿಮರು ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಲು ಪ್ರತಿದಿನ ಸುಪ್ರಭಾತ ಸಮಯದಲ್ಲಿ ಪ್ರತ್ಯಕ್ಷ ದೈವವಾದ ಸೂರ್ಯನಾರಾಯಣನಿಗೆ ಭಕ್ತಿಯಿಂದ ನಮಸ್ಕಾರವನ್ನು ಓಂ ಪ್ರಥಮವಾಗಿ ಪ್ರಾರಂಭಿಸಿ ಹಲವಾರು ರೀತಿಯ ಯೋಗವನ್ನು ಮಾಡುವುದರಿಂದ ತಮ್ಮ ಆರೋಗ್ಯವನ್ನು ತಾವೇ ಕಾಪಾಡಿಕೊಳ್ಳಬಹುದು, ಇದು ನಮ್ಮ ಹತೋಟಿಯಲ್ಲಿಯೇ ಇದೆ, ಇದು ಸಾಧ್ಯ ಎಂದು ದಾರಿತೋರಿದರು. ಅಂತಹ ಪೂಜ್ಯರು ಜನಿಸಿ, ಬಾಳಿದರ ಫಲವೇ ಇಂದು ನಮ್ಮ ಭಾರತ, ಯೋಗ ಭೂಮಿ ಭಾರತ, ತ್ಯಾಗ ಭೂಮಿ ಭಾರತವಾಗಿದೆ. ಭಗವದ್ಗೀತೆ ಯೋಗಶಾಸ್ತ್ರವೂ ಹೌದು. ಯೋಗ ಎಂದರೆ ಸಂಯೋಗ ಎಂಬ ಶಬ್ದಾರ್ಥವೂ ಹೌದು. ಗೀತೆಯಲ್ಲಿ ಯೋಗ ಎಂಬ ಪದವನ್ನು ವ್ಯಾಪಕ ಅರ್ಥದಲ್ಲಿ ಅರ್ಥೈಸಿದ್ದಾರೆ. ವೇದಕಾಲದಲ್ಲಿ ಯೋಗ ಎಂಬ ಶಬ್ದವು ಯುಜ್ ಧಾತುವಿನಿಂದ ಬಂದಿದೆ. ಇದರ ಭಾವಾರ್ಥ ಒಟ್ಟುಗೂಡಿಸುವ ಎಂಬುದೇ ಆಗಿದೆ.


"ಯೋಗ" ಎಂದ ಕೂಡಲೆ ನಮ್ಮ ಕಣ್ಣೆದುರಿಗೆ ಬರುವುದು ಹಲವಾರು ಆಸನಗಳನ್ನು ಒಳಗೊಂಡ ಅಷ್ಟಾಂಗಯೋಗ",.. ಇದು ಇಂದು ನಮ್ಮ ಸುತ್ತಲೂ ಕಾಣಬರುತ್ತಿದೆ. ಈ ವಿಧದ ಯೋಗ ಒಂದೇ ನಮ್ಮ ಕಣ್ಣಿಗೆ ಕಾಣಿಸುತ್ತಿರುವುದು, ನಮ್ಮ ಅಲ್ಪಮತಿಗೆ ಗೋಚರ ಆಗಿರುವುದು, ಅಷ್ಟಾಂಗ ಯೋಗವಲ್ಲದೆ ಹಲವಾರು ರೀತಿಯ ಯೋಗವೂ ಇದೆ. ಗೀತಾಚಾರ್ಯನ ಭಗವದ್ಗೀತೆಯಲ್ಲಿ ಇದನ್ನು ಕಾಣಬಹುದು. ಸಾಂಖ್ಯಾಯೋಗ, ಕರ್ಮಯೋಗ, ಆತ್ಮಸಂಯಮಯೋಗ, ಅಕ್ಷರ ಬ್ರಹ್ಮಯೋಗ ಹೀಗೇ ಅಷ್ಟಾದಶೋಧ್ಯಾಯದಲ್ಲಿ ನಮ್ಮ ಇಹಪರದ ಸಾಧನೆ, ಮೋಕ್ಷ, ಭಗವಂತನಲ್ಲಿ ಅನುಸಂಧಾನದ ಪರಾಕಾಷ್ಠೆ ಅನುಭವಿಸಲು ಶ್ರೀಕೃಷ್ಣಪರಮಾತ್ಮ ಹಲವಾರು ರೀತಿಯಲ್ಲಿ ನಮ್ಮ ಜೀವನವನ್ನು, ಬರಿ ಜೀವನವಲ್ಲ ಅಮೂಲ್ಯವಾದ ಜೀವನವನ್ನು ರೂಪಿಸಿಕೊಳ್ಳಲು ಬೋಧಿಸಿದ್ದಾನೆ.

ಭಗವದ್ಗೀತೆಯನ್ನು ಪಠನ ಮಾಡಿ, ಅದರಲ್ಲಿರುವ ಸಾರವನ್ನು ಮನನ ಮಾಡಿಕೊಂಡು, ಅದನ್ನು ಜೀವನದಲ್ಲಿ ಅಳವಡಿಸಿಕೊಂಡಾಗ ನಾವು ಕಾಣುವುದೇ ಸತ್ - ಚಿತ್ ಆನಂದ ದಿನಂಪ್ರತಿ ನಾವು ನಮ್ಮಲ್ಲಿರುವ ಪಂಚಭೂತ ಸಾತ್ವಿಕ, ರಜ, ತಮೋಗುಣ ಈ ತ್ರಿಗುಣಗಳನ್ನು ನಮ್ಮ ಹತೋಟಿಗೆ ತೆಗೆದುಕೊಳ್ಳುವ ಮಂಥನ - ಚಿಂತನ ಅಭ್ಯಾಸ ಬಹಳ ಮುಖ್ಯ. ಇದಕ್ಕೆ ಮೂಲ ಸಾಧನವೇ ಯೋಗ. ವೈಜ್ಞಾನಿಕವಾಗಿಯೂ ಯೋಗ ದೈಹಿಕ ಮಾನಸಿಕ ವಿಕಾಸದ ಮೂಲವಾಗಿದೆ. ಯೋಗ ಒಂದು ಪ್ರಬಲವಾದ, ಶಕ್ತಿಯುತವಾದ ಆಯುಧ. ಚಿಕ್ಕವಯಸ್ಸಿನಿಂದಲೇ ಯೋಗವನ್ನು ಅಭ್ಯಾಸ ಮಾಡುವುದರಿಂದ ಅದು ನಮ್ಮ ಜೀವನದ ಅಮೂಲ್ಯವಾದ ಆಪತ್ಕಾಲದ ಆಸ್ತಿಯಾಗಿ ನಿಲ್ಲುತ್ತದೆ ಚಿಕ್ಕವಯಸ್ಸಿನಲ್ಲಿಯೇ ಯೋಗಾಭ್ಯಾಸ ಮಕ್ಕಳು ಕಣ್ಣು, ಕಿವಿ, ಸರ್ವಾಂಗಗಳ ಕಾರ್ಯಕ್ಕೆ ಸಾಧನವಾದರೆ, ವಯೋವೃದ್ಧರಿಗೆ ಅವರ ಇಳಿವಯಸ್ಸಿನಲ್ಲಿ ಕಾಣಿಸಿಕೊಳ್ಳುವಂತಹ ದೈಹಿಕ, ಮಾನಸಿಕ ತೊಂದರೆಗಳನ್ನು ನಿವಾರಿಸುವ ದಿವ್ಯೌಷಧವಾಗಿದೆ. ಯೋಗವನ್ನು ಅಭ್ಯಾಸ ಮಾಡುವುದರಿಂದ ಪ್ರಯೋಜನವೇನು? ಯೋಗ ಒಂದು ವಿಶಿಷ್ಟವಾದ ಪುರಾತನ ಕಲೆ, ಗೀತಾಚಾರ್ಯನೇ ಹೇಳಿರುವಂತೆ ನಾವು ನಮ್ಮ ದೇಹ ಮತ್ತು ಮನಸ್ಸು ಇದನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳಬೇಕು. ಆಗ ಮಾತ್ರ ನಾವು ಒಬ್ಬ ಸತ್ಪ್ರಜೆಯಾಗಿ ಬಾಳಲು ಸಾಧ್ಯ. ನಿಯಂತ್ರಣ ಸಾಧಿಸದೇ ಇದ್ದಲ್ಲಿ ಅಸುರೀ ಪ್ರವೃತ್ತಿ, ನಮ್ಮ ಮೇಲೆ ತನ್ನ ಪ್ರಭಾವವನ್ನು ಬೀರಿ, ಕ್ಷುದ್ರ ಮನಸ್ಸಿನವರನ್ನಾಗಿ, ಕಡಿವಾಣ ವಿಲ್ಲದ ಕುದುರೆಯಂತೆ ಮನಸ್ಸನ್ನು ಹರಿಬಿಟ್ಟರೆ, ನಮಗೇ ಗೊತ್ತಿಲ್ಲದಂತೆ ಸಮಾಜಘಾತಕರಾಗುತ್ತೇವೆ. ಯೋಗವು ಮನಸ್ಸನ್ನು ಚುರುಕುಗೊಳಿಸುತ್ತ ಜ್ಞಾನವೃದ್ಧಿಗೆ ಸಹಾಯಕವಾಗಿದೆ. ಅಲ್ಲದೆ ಏಕಾಗ್ರತೆಯನ್ನು ಸಾಧಿಸಲು ಸಹಾಯಕವಾಗಿದೆ. ದಿನಂಪ್ರತಿ ಅಭ್ಯಾಸ ಮಾಡುವುದರಿಂದ ನಮ್ಮಲ್ಲಿ ಶಿಸ್ತು, ಸಂಯಮ ಜ್ಞಾನವೃದ್ಧಿಯ ಸಾಧಕವಾಗಿ ನಿಲ್ಲುತ್ತದೆ.

ಇತ್ತೀಚೆಗೆ ಪ್ರತಿವರ್ಷ ಜೂನ್ 21 ರಂದು "ಅಂತರಾಷ್ಟ್ರೀಯ ಯೋಗ ದಿನ" ಎಂದು ಘೋಷಿಸಿ ವಿಶ್ವಜನತೆ ಯೋಗವನ್ನು ಅರಿಯುವಂತೆ ಮಾಡಿ, ಅದನ್ನು ಅರಿತು ಯೋಗಾಭ್ಯಾಸ ಮಾಡುವಂತಾಗಿದೆ. ವಿದೇಶಿಯರೂ ಯೋಗಕ್ಕೆ ಮನಸೋತು, ಅದರ ಆರೋಗ್ಯ ಲಾಭ ವನ್ನು ಅರಿತು ಯೋಗಾಭ್ಯಾಸ ಮಾಡುತ್ತಿದ್ದಾರೆ ಎಂದರೆ ಅದಕ್ಕೆ ಕಾರಣ ನಮ್ಮ ಯೋಗಭೂಮಿ ಭಾರತ ಅಷ್ಟಾಂಗ ಯೋಗದ ಬಗ್ಗೆ ಅಧ್ಯಯನ ಮಾಡುತ್ತಿದ್ದಾಗ ದೊರೆತದ್ದೇ "ಮುದ್ರಾಯೋಗ" ದ ಅಮೂಲ್ಯವಾದ ಮಾಹಿತಿ. ಇದರ ಬಗ್ಗೆ ಇನ್ನಷ್ಟು ತಿಳಿಯಬೇಕೆಂಬ ಜ್ಞಾನದಾಹ.

ಉತ್ತಮ ಅಂಗಸೌಷ್ಠವಕ್ಕಾಗಿ ಹಾತೊರೆಯುವ ಇಂದಿನ ಯುವಪೀಳಿಗೆ, ಅದನ್ನು ತಮ್ಮದಾಗಿಸಿಕೊಳ್ಳಲು ಮತ್ತು ಉತ್ತಮ ಆರೋಗ್ಯವನ್ನು ಪಡೆಯಬೇಕು, ಪಡೆದದ್ದನ್ನು ಹೇಗೆ ಕಾಪಾಡಿಕೊಳ್ಳಬೇಕು ಎಂಬುದನ್ನು ಅರಿಯುವುದು ಬಹಳ ಅವಶ್ಯ. ನಮ್ಮ ದೇಹದಲ್ಲಿರುವ ಅಗ್ನಿ, ಹಾಗೂ ಭಗವಂತನ ವರವಾಗಿರುವ ನಮ್ಮ ಕರಗಳು, ಅದರ ಮುಖೇನ ನಮ್ಮ ಆರೋಗ್ಯವನ್ನು ನಾವೇ ಹೇಗೆ ಕಾಪಾಡಿಕೊಳ್ಳಬಹುದು ಎಂಬುದನ್ನು ತಿಳಿಯುವುದು ಬಹಳ ಅವಶ್ಯಕ.

ಸಾಮಾನ್ಯವಾಗಿ ಹಿರಿಯರಿರುವ ಮನೆಯಲ್ಲಿ ಇಂದಿಗೂ ಬೆಳಿಗ್ಗೆ ಎದ್ದೊಡನೆ ಕರಗಳನ್ನು ಉಜ್ಜುತ್ತಾ ಆದರಿಂದ ಉಂಟಾದ ಶಾಖವನ್ನು ಎರಡೂ ಕಣ್ಣುಗಳ ಮೇಲೆ ಇಟ್ಟುಕೊಳ್ಳುವುದು ವಾಡಿಕೆ. ಈ ಕ್ರಿಯೆಯಿಂದ ಕಣ್ಣಿಗೆ ಏನೋ ಒಂದು ಹಿತವಾದ ಅನುಭವ. ಜೊತೆಗೆ "ಕರಾಗ್ರೇ ವಸತೇ ಲಕ್ಷ್ಮೀ ಕರಮಧ್ಯೆ ಸರಸ್ವತಿ ಕರಮೂಲೇ ಸ್ಥಿತೇ ಗೌರಿ, ಪ್ರಭಾತೇ ಕರದರ್ಶನಂ" ಎಂದು ಹೇಳಿ ಕರದರ್ಶನ ಮಾಡುವುದರ ಮೂಲಕ ದಿನವಿಡೀ ಚೈತನ್ಯಶೀಲರನ್ನಾಗಿ ಇಡುತ್ತದೆ ಎನ್ನುವುದು ನಂಬಿಕೆ. ದೇಹರಚನೆ, ಅಂಗ, ಅವಯವ, ಇದರ



ಕಾರ್ಯದ ಬಗ್ಗೆ ನಾವು ತಿಳಿದು ಕೊಂಡಿರುವುದು ಬಹಳ ಕಡಿಮೆ. ಇದರ ಬಗ್ಗೆ ಹೆಚ್ಚು ಹೆಚ್ಚು ತಿಳಿದಷ್ಟು ನಮ್ಮ ಆರೋಗ್ಯವನ್ನು ನಾವೇ ಕಾಪಾಡಿಕೊಳ್ಳಲು ಸಹಕಾರಿ ಆಗುತ್ತದೆ. ಬ್ರಹ್ಮಾಂಡದ ಸೃಷ್ಟಿಯೇ ಪಂಚಭೂತಗಳಿಂದ ಆಗಿದ್ದು, ನಮ್ಮ ಹಸ್ತದ ಬೆರಳುಗಳು ಈ ಪಂಚಭೂತಗಳ, ಪಂಚತತ್ತ್ವಗಳ ಸಂಕೇತ. ಈ ಬೆರಳುಗಳಿಂದ ಮುದ್ರೆಗಳನ್ನು ರಚಿಸಿ, ಅಭ್ಯಾಸ ಮಾಡುವುದರ ಮೂಲಕ ಪಂಚಭೂತಗಳ ಸಮತೋಲನವನ್ನು ಸಾಧಿಸಿ ತನ್ಮೂಲಕ ಉತ್ತಮ ಆರೋಗ್ಯವನ್ನು ಪಡೆದುಕೊಳ್ಳುವ ಸುಲಭ ಸರಳ ಮಾರ್ಗ ಹಾಗೂ ಹಸ್ತದಲ್ಲಿರುವ ಬೆರಳುಗಳಲ್ಲಿ ಅಡಗಿರುವ ಹಲವಾರು ವಿಸ್ಮಯಗಳನ್ನು ತಿಳಿಯುವ ಪ್ರಯತ್ನ ನಮ್ಮದಾಗಲಿ. ಋಷಿಮುನಿಗಳು ತಮ್ಮ ಅಸಮಾನ್ಯ ಶಕ್ತಿಯನ್ನು ಪಡೆದುಕೊಂಡಿದ್ದೇ ಮುದ್ರಾ ಮತ್ತು ಯೋಗ ಸಾಧನೆಗಳಿಂದ ಎಂಬುದು ಸರ್ವ ವಿದಿತ.

ಮಿತ್ರಂ ವಯಂ ಹವಾಮಹೇ ವರುಣಂ ಸಮೋಪೀತಯೇ। ಜಜ್ಞಾನ ಪೂತದಕ್ಷ ಸಾ ॥

ಪ್ರಾಣಾಯಾಮದ ಮೂಲಕ ಸಂಪೂರ್ಣ ಆರೋಗ್ಯ, ದೀರ್ಘವಾದ ಆಯುಷ್ಯ, ಉತ್ತಮವಾದ ಶರೀರಕ ಬಲ ಹಾಗೂ ಪವಿತ್ರವಾದ ಆತ್ಮೀಕ ಬಲವು ಪ್ರಾಪ್ತವಾಗುತ್ತದೆ.

ಅಭಿತ್ವಾ ಪೂರ್ವಪೀತಯೇ ಸೃಜಾಮಿ ಸೌಮ್ಯಂ ಮಧು ಮಧುದ್ಬಿರಗ್ನ ಆ ಗಹಿ॥


ಈ ಮಂತ್ರದ ಒಳಹೊಕ್ಕು ಆಧ್ಯಾತ್ಮಿಕ ಅರ್ಥವನ್ನು ಅರಿಯುವ ಪ್ರಯತ್ನ ಮಾಡಿದಾಗ ಸಿಗುವ ಎಳೆ, "ಪ್ರಾಣಾಯಾಮ" ಯೋಗಸಾಧನೆಯ ಮೂಲಕ ಆತ್ಮಜ್ಞಾನವನ್ನು ಪಡೆದು ತನ್ಮೂಲಕ ಪಡೆಯುವ ಆತ್ಮನ ಸ್ವರೂಪ, ಶಕ್ತಿಯನ್ನು ರಕ್ಷಿಸುತ್ತಾ ಸಮಾಜಕ್ಕೆ ಒಳಿತಾಗುವ ಸತ್ಕರ್ಮಗಳನ್ನು ಮಾಡುತ್ತಾ, ಜ್ಞಾನರಸವನ್ನು, ಸಚ್ಚಿದಾನಂದದ ಮಧುವನ್ನು ಸವಿಯುವ ಆಶಯ ಇದಾಗಿದೆ. ಸಾಮಾನ್ಯವಾಗಿ ಮನುಷ್ಯ ತನ್ನ ದೇಹದ ಬಾಹ್ಯ ಸೌಂದರ್ಯಕ್ಕೆ, ಅಂಗಸೌಷ್ಟವಕ್ಕೆ ಹೆಚ್ಚಿನ ಆದ್ಯತೆ ಕೊಡುತ್ತಾನೆಯೇ ಹೊರತು ನಮ್ಮ ದೇಹದೊಳಗಿನ ಭಾಗಗಳನ್ನು ಗಮನಿಸುವುದಿಲ್ಲ. ನಮ್ಮ ದೇಹದ ಬಗ್ಗೆ ನಮಗೆ ಗೊತ್ತೇ ಇಲ್ಲ ಎನ್ನಬಹುದು. ನಮ್ಮ ದೇಹದ ರಚನೆ, ಅಂಗಾಂಗಳ ಕೆಲಸ ಕಾರ್ಯಗಳ ಅರಿವು ಸಂಪೂರ್ಣವಾಗಿ ತಿಳಿದಿಲ್ಲ. ಅದನ್ನು ಅರಿಯುವುದು, ಅದರ ಬಗ್ಗೆ ಅಧ್ಯಯನ ಯಾರಿಗೂ ಬೇಕಿಲ್ಲ. ದೇಹದಲ್ಲಿ ಏನಾದರೂ ಏರುಪೇರಾದಾಗ ಅದನ್ನು ಸರಿಪಡಿಸುವುದು ವೈದ್ಯರ ಕೆಲಸ ಎಂಬ ಮನೋಭಾವನೆಯನ್ನು ಬೆಳಸಿಕೊಂಡು ನಮ್ಮ ದೇಹದ ಅದರ ರಚನೆಯ ಬಗ್ಗೆ ಸಂಪೂರ್ಣವಾಗಿ ಅಜ್ಞಾನಿಗಳಾಗಿರುತ್ತೇವೆ. ನಮ್ಮ ದೇಹದ ರಚನೆಯ ಬಗ್ಗೆ ಜ್ಞಾನವನ್ನು ಬೆಳಸಿಕೊಂಡರೆ ಆರೋಗ್ಯಕರವಾದ ಜೀವನವನ್ನು ನಡೆಸಬಹುದು. ಪಂಚಭೂತಗಳ, ಪಂಚತತ್ವಗಳ ಪ್ರತೀಕವಾದದ್ದು ನಮ್ಮ ಹಸ್ತ. ಕ್ರಮವಾಗಿ ಉಂಗುರದ ಬೆರಳಿನಿಂದ ಪೃಥ್ವಿಯಿಂದ ಆರಂಭವಾಗಿ ಕಿರು ಬೆರಳು ಜಲತತ್ವ ಹೆಬ್ಬೆರಳು ಅಗ್ನಿಯಾಗಿ, ತೋರು ಬೆರಳು ವಾಯುವಾಗಿ, ಮಧ್ಯಮ ಆಕಾಶದಲ್ಲಿ ಅಂತ್ಯವಾಗುತ್ತದೆ. ಈ ಐದು ಬೆರಳುಗಳಲ್ಲಿ ಅಂಗುಷ್ಟಕ್ಕೆ ಪ್ರಧಾನ್ಯತೆ ಹೆಚ್ಚು, ಹಾಗೆಯೇ ನಿತ್ಯ ಜೀವನದಲ್ಲಿ ಇದರ ಪಾತ್ರ ಬಹಳ ದೊಡ್ಡದು. ಇದು ಹಸ್ತದಲ್ಲಿ ತನ್ನದೇ ಆದ ಚಕ್ರಾಧಿಪತ್ಯವನ್ನು ಸ್ಥಾಪಿಸಿದೆ. "ಅಗ್ನಿ ಭೂತಾನಾಂ ಅಧಿಪತಿಃ" ಮಾನವನು ಯಾವುದೇ ಕೆಲಸವನ್ನು ಮಾಡಬೇಕಾದರೂ ಅಂಗುಷ್ಟದ ಸಹಾಯವಿಲ್ಲದೆ ಮಾಡಲು ಸಾಧ್ಯವಿಲ್ಲ. ಹಸ್ತದಲ್ಲಿರುವ ಉಳಿದ ಬೆರಳುಗಳು ಈ ಹೆಬ್ಬೆರಳಿನ ಮೇಲೆ ಅವಲಂಭಿತವಾಗಿದೆ. ಇದರ ಸಹಾಯವಿಲ್ಲದೆ ಬೇರೆ ಬೆರಳುಗಳು ಸ್ವತಃ ಏನನ್ನು ಮಾಡಲು ಸಾಧ್ಯವಿಲ್ಲ.

ಪಂಚಭೂತಗಳಲ್ಲಿ, ಪಂಚತತ್ವಗಳಲ್ಲಿ ಏರುಪೇರಾದಾಗ ರೋಗಲಕ್ಷಣಗಳು ಕಾಣಿಸಿಕೊಳ್ಳುತ್ತದೆ. ಪುರಾತನ ಋಷಿಮುನಿಗಳು ಹಸ್ತಮುದ್ರೆಗಳನ್ನು ರಚಿಸಿ ಅಭ್ಯಾಸ ಮಾಡುವುದರಿಂದ ರೋಗಗಳಿಂದ ಮುಕ್ತರಾಗಲು ಸಾಧ್ಯ ಎಂಬುದನ್ನು ಹೇಳಿ, ದಾರಿ ತೋರಿಸಿದ್ದಾರೆ. ನಮ್ಮ ದೇಹದಲ್ಲಿ ನಮಗೇ ಗೊತ್ತಿಲ್ಲದ ಹಲವಾರು ವಿಸ್ಮಯಗಳು ಇದೆ. ಈ ದೇಹದ ರಚನೆ ಹೇಗೆ? ಅದರಲ್ಲಿ ಅಡಗಿರುವ ಆಶ್ಚರ್ಯಗಳು ಏನು? ದೈಹಿಕ ಸಮಸ್ಯೆಗಳಿಗೆ ಮುದ್ರೆಗಳನ್ನು ಅಭ್ಯಾಸ ಮಾಡುವುದರಿಂದ ದೇಹದಲ್ಲಿರುವ ತೊಂದರೆಗಳನ್ನು ಹೇಗೆ ನಿವಾರಿಸಿಕೊಳ್ಳಬಹುದು? ಎಂಬುದನ್ನು ತಿಳಿಯೋಣ.

ನಮ್ಮ ಪುರಾಣ ಇತಿಹಾಸಗಳನ್ನು ಪರಿಶೀಲಿಸಿದಾಗ ಋಷಿಮುನಿಗಳು ಹಿಮಾಲಯ ಪರ್ವತದಂತಹ ಮಂಜಿನಿಂದ ಅಮೃತವಾದ ಗಿರಿಶಿಖರಗಳಲ್ಲಿ ನಿರಶನ, ಏಕವಸ್ತ್ರ ಧಾರಿಗಳಾಗಿ, (ಕೌಪೀನ) ಪಾದರಕ್ಷೆಯೂ ಇಲ್ಲದೆ ಹಲವಾರು ವರ್ಷ ತಪಸ್ಸು ಮಾಡುತ್ತಿದ್ದರು. ಕೊರೆಯುವ ಚಳಿಯಲ್ಲಿ, ಏಕ ವಸ್ತ್ರಧಾರಿಗಳಾಗಿ ಅವರು ತಪಸ್ಸು ಮಾಡುತ್ತಿದದ್ದು ಹೇಗೆ ಸಾಧ್ಯ ? ತುಂಬಾ ಸರಳವೂ, ಸುಲಭವೂ ಆದ ಮುದ್ರಾವಿಜ್ಞಾನವನ್ನು ಅಭ್ಯಾಸಮಾಡಿ ಯೋಗ ಮತ್ತು ಆಸನಗಳಿಂದ ಮಾತ್ರ ಸಾಧ್ಯ ಎಂದು ತಿಳಿಸಿದ್ದಾರೆ. ಅಂದಮೇಲೆ ನಾವು ಅದನ್ನು ಅರಿಯುವ ಪ್ರಯತ್ನ ಮಾಡಬೇಕು.

ಇಹತ್ವಷ್ಟಾರಮಗ್ರಿಯಂ।

ವಿಶ್ವರೂಪಂ ಉಪಹ್ವಯೇ। ಅಸ್ಮಾಕಂ ಅಸ್ತುಕೇವಲಃ॥



ವಿಶ್ವದ ರೂಪಗಳೆಲ್ಲವನ್ನೂ ಕಲ್ಪಿಸುವುದರೊಂದಿಗೆ, ವ್ಯಕ್ತ ವಿಶ್ವದ ದ್ರವವೆಲ್ಲವೂ ಅಗ್ನಿಯೇ ಆಗಿದ್ದಾನೆ. ಅವನು ಮಾನವರಲ್ಲಿ ಜಡ್ಡುಗಟ್ಟಿದ ಭಾವಗಳನ್ನು ತೆಗೆದು, ಅದರಲ್ಲಿ ಪ್ರಾದುರ್ಭಾವಗೊಳ್ಳಲು ಯತ್ನಿಸುತ್ತಿರುವ ವಿಶ್ವ ಶಕ್ತಿಗಳನ್ನು ಧರಿಸಬಲ್ಲ ಸಾಮರ್ಥ್ಯ ಇರುವ ಜೀವಿಗಳನ್ನಾಗಿ ಮಾಡುತ್ತಾನೆ.

"ಅಗ್ನಿ ಎಂದಾಕ್ಷಣ ಕಣ್ಣ ಮುಂದೆ ಬಂದು ನಿಲ್ಲುವ ಹೋಮ ಕುಂಡಲಿದಲ್ಲಿನ ಅಗ್ನಿ, ಸ್ನಾನದ ಮನೆಯಲ್ಲಿನ ಉರಿಯುವ ಸೌದೆ, ಬೆಂಕಿ ಕಡ್ಡಿಯ ಉರಿ, ಅಂತಿಮ ಸಂಸ್ಕಾರದ ಅಗ್ನಿ ಅದೇ ಚಿತಾಗ್ನಿ ಇತ್ಯಾದಿ. ಅಗ್ನಿಯ ವಿವಿಧ ಸ್ವರೂಪಗಳನ್ನು ಮರೆತ್ತಿದ್ದೇವೆ. ಅಗ್ನಿಯನ್ನು ಯಾವ ಯಾವ ರೂಪದಲ್ಲಿ ನೋಡಬಹುದು ಎಂಬುದನ್ನೂ ಮರೆತ್ತಿದ್ದೇವೆ.

ತ್ವಂ ಅಗ್ನೇ ಪ್ರಥಮೋ ಅಂಗಿರಃ ತಮಃ।

ಕವಿ ದೇವಾನಾಂ ಪರಿಭೂಷಸಿ ವ್ರತಮ್ ।

ವಿಭುಃ ವಶ್ವಸ್ಮೈಭುವನಾಯ ।

ಮೇಧಿರೋ ದ್ವಿಮಾತಾ ।

ಶಯುಃ ಕತಿಧಾ ಚಿತ್ ಆಯವೇ ॥

ಋಗ್ವೇದದಲ್ಲಿ ಇರುವಂತಹ ಅಗ್ನಿಯ ವಿವಿಧ ಸ್ವರೂಪದ ಮಂತ್ರಗಳ ಬಗ್ಗೆ ಅರ್ಥ ತಿಳಿಯುವಂತಹ ಪ್ರಯತ್ನಮಾಡಿದರೆ ಮಾನವನ ಈ ಸೂಕ್ಷ್ಮ ದೇಹದಲ್ಲಿ ಅಗ್ನಿ ಪ್ರಾದುರ್ಭಾವ ಹೊಂದಿ ಆ ದೇಹದಷ್ಟೇ ಪ್ರಾಮುಖ್ಯವಾಗಿದೆ ಎಂಬುದನ್ನು ತಿಳಿಯಬಹುದು.

(ಮುಂದುವರೆಯುತ್ತದೆ)

# ಶ್ರೀ ಪಾದರಾಜರ ಆರಾಧನಾ ಮಹೋತ್ಸವ

- ಪ್ರಣವ

9035618076

ಶ್ರೀ ಪಾದರಾಜರು ಕನ್ನಡ ಸಾಹಿತ್ಯಕ್ಕೆ ಭಗವದ್ಭಕ್ತರಿಗೆ ದಾಸಕೂಟಸ್ಥರಿಗೆ ಮಾಡಿರುವ ಉಪಕರ ಬಹುಸ್ಮರಣೆಯವಾದುದು. ಸಂಸ್ಕೃತ ಮಂತ್ರ ಮಾತುಗಳಲ್ಲಿಯ ಮಂಗಳಾತ್ಮಕ ಪಾವಿತ್ರವನ್ನು ಕನ್ನಡಕ್ಕೆ ತಂದುಕೊಟ್ಟ ಕೀರ್ತಿ ಶ್ರೀಪಾದರಾಜರದು. ದಾಸ ಸಾಹಿತ್ಯವೆಂಬ ಹೊಸ ಕಲ್ಪನೆಯೆಂಬ ಅವರ ಬ್ರಹ್ಮಚೈತನ್ಯದಿಂದ ಪಲ್ಲವಿಸಿ ಕನ್ನಡ ಭಾಷೆ ಹಾಗೂ ಸಾಹಿತ್ಯಗಳಿಗೆ ಹೊಸ ಆಯಾಮವನ್ನು ಮೂಡಿಸಿತು. ತಮ್ಮ ಸಮರ್ಥ ವಾಗ್ವೈಖರಿಯಿಂದಾಗಿ ಕನ್ನಡದಲ್ಲಿ ಹೊಸದೊಂದು ದಾಸ್ಯ ಭಾವದ ಮಧುರ ಶೈಲಿಗೆ ಪ್ರವರ್ತಕರಾದರು ಶ್ರೀ ಪಾದರಾಜರು. ಅವರಿಂದ ಸ್ಫೂರ್ತಿಗೊಂಡ ಅನೇಕ ಜನ ಯತಿಗಳು, ವೈದಿಕರು, ಗೃಹಸ್ಥರು ಕನ್ನಡದಲ್ಲಿ ಧೈರ್ಯವಾಗಿ ಕೃತಿಗಳನ್ನು ರಚಿಸ ತೊಡಗಿದರು. ತೊರವೆ ರಾಮಾಯಣ, ನಾರಣಪ್ಪನ ಭಾರತಗಳು ಶ್ರೀಪಾದರಾಜರ ನಂತರವೇ ಬಂದಿರುವುದು ಈ ಹಿನ್ನೆಲೆಗೆ ನಿದರ್ಶನ. ಮುದುಡಿ ಮಲಗಿದ್ದ ಭಾಗವತ ಧರ್ಮ ಮೈಚಳಿ ಬಿಟ್ಟ ಎದ್ದು, ಜಾಗೃತವಾಗಿ ಧೃಢವಾಗಿ ನಡೆಯಲು ಪ್ರಾರಂಭವಾಯಿತು. ಕರ್ನಾಟಕ ಹರಿದಾಸ ಪರಂಪರೆಯಲ್ಲಿ ಬಹಳ ಮುಖ್ಯವಾದ ಹೆಸರು ಶ್ರೀಪಾದರಾಜರು ಕನ್ನಡದಲ್ಲಿ ಹರಿದಾಸ ಸಾಹಿತ್ಯ ರಚನೆಯ ಆದ್ಯ ಪ್ರವರ್ತಕರೂ ಅವರೇ ಎಂದರೆ ತಪ್ಪಾಗಲಾರದು. ಅವರಿಗಿಂತ ಪೂರ್ವದಲ್ಲಿ ಹರಿದಾಸ ಸಾಹಿತ್ಯ ರಚನೆಯಾಗಿತ್ತೆ ಎಂಬುದರ ಬಗೆಗೆ ಚರ್ಚೆಗಳಿದ್ದು, ಅದಿನ್ನೂ ನಿಲುಗಡೆ ಬಂದಿಲ್ಲದಿರುವುದರಿಂದ ಶ್ರೀಪಾದರಾಜರೇ ದಾಸ ಸಾಹಿತ್ಯದ ಪ್ರವರ್ತಕರೆಂದು ಭಾವಿಸಲು ಅಡ್ಡಿಯಿಲ್ಲ.



ದಾಸ ಸಾಹಿತ್ಯ ವಿಶ್ವ ಸಾಹಿತ್ಯ ಕಂಡ ವಿನೂತನ ಬಗೆಯ ಸಾಹಿತ್ಯ ಶೈಲಿಯಲ್ಲಿ ಸಂಗೀತ ಮಾಧ್ಯಮದ ಮೂಲಕ ತತ್ವ ಪ್ರಸಾರಕ್ಕೆ ತೊಡಗಿದ್ದು ಇದೆ. ವೈಶಿಷ್ಟ್ಯ. ಸಂಗೀತದಿಂದಾಗಿ ಕಣರಮಣೀಯವಾಗಿ, ಸಾಹಿತ್ಯದಿಂದಾಗಿ ಹೃದಯಸ್ಪರ್ಶಿಯಾಗಿ ತತ್ವ ಶ್ರೀಮಂತಿಕೆಯಿಂದಾಗಿ ಬುದ್ಧಿ ವಿಕಸನಕ್ಕೆ ಕಾರಣವಾಗುವ ಅಪೂರ್ವತೆ ಇದರದು. ಆಧ್ಯಾತ್ಮವು ಜೀವನದ ಉಸಿರು ಎಂಬ ತಾತ್ವಿಕ ಮಹತ್ವವನ್ನು ಪಾಮರ ಜನರಿಗೂ ತಿಳಿಸಿ ಕೊಟ್ಟಿದ್ದು ಇದರ ಸಾಧನೆ.

ನರಹರಿತೀರ್ಥರು ಹರಿದಾಸ ಪರಂಪರೆಯನ್ನು ಪ್ರಾರಂಭಿಸಿದ ನಂತರ ಅದನ್ನು ಒಂದು ನಿರ್ದಿಷ್ಟವಾದ ರೂಪಕ್ಕೆ ತಂದು ಭದ್ರ ಬುನಾದಿಯನ್ನು ಹಾಕಿಕೊಟ್ಟು ಬೆಳೆಸಿದವರು ಶ್ರೀಪಾದರಾಜರು. ನರಹರಿ ತೀರ್ಥರು ಕಿಡಿಯಾದರೆ ಶ್ರೀಪಾದರಾಜರು ಜ್ಯೋತಿ ತಮ್ಮ ಕಾಲದಲ್ಲಿ ಸಂಸ್ಕೃತ ವಿದ್ಯೆಯು ಉನ್ನತ ಮಟ್ಟದಲ್ಲಿದ್ದರೂ ಅದು ಭಕ್ತಿ ಪ್ರಚೋದನೆಗೆ ಹೆಚ್ಚು ತೀವ್ರವಾಗಿ ಪ್ರಯೋಜನವಾಗುತ್ತಿಲ್ಲವೆಂಬುದನ್ನು ಮನಗಂಡ ಶ್ರೀಪಾದರಾಜರು, ದೇಶಕಾಲೋಚಿತವಾಗಿ ವಿಜಯನಗರ ಸಾಮ್ರಾಜ್ಯದಲ್ಲಿ ಹಿಂದೂ ಸಂಸ್ಕೃತಿ , ಸಂಪ್ರದಾಯ ಪರಂಪರೆಗಳ ಬಗ್ಗೆ ಸುಲಭವಾಗಿ ತಿಳಿಸಿ ಸಂಘಟನೆಯನ್ನು ಪ್ರಚೋದಿಸಲು ದಾಸಪಂಥವನ್ನು ಉದ್ಘಾಟಿಸಿದರು. ಸಕಲ ತತ್ವ ವಿಷಯಗಳನ್ನೂ ಸಂಗೀತ ಬದ್ಧವಾಗಿ ಕನ್ನಡದಂತಹ ಲಲಿತಭಾಷೆಯಲ್ಲಿ ಜನರಿಗೆ ಕೊಟ್ಟು ಶ್ರೀಪಾದರಾಜರು ಈ ಮಾರ್ಗದಲ್ಲಿ ತಾವೇ ಮೊದಲು ಕನ್ನಡದಲ್ಲಿ ದೇವರ ನಾಮಗಳನ್ನು ಉಗಾಭೋಗಗಳನ್ನು ಸುಳಾದಿಗಳನ್ನು ರಚನೆಮಾಡಿ ಗಂಭೀರವಾದ ಗಂಧರ್ವ ಕಂಠದಿಂದ ದೇವರೆದುರು ಗಾನಮಾಡಿ ತೋರಿಸಿದರು. ಸಂಗೀತ ಸಾಹಿತ್ಯಗಳ ಅಮೋಘ ಮೇಳವಾದ ಈ ಮಾರ್ಗಾ ದಿನೇ ದಿನೇ ಹೆಚ್ಚು ಜನರನ್ನು ಆಕರ್ಷಿಸಲಾರಂಭಿಸಿತು. ಶ್ರೀಪಾದರಾಜದಿಂದ ಬಂದ ಪ್ರತಿ ಶಬ್ದವೂ ಬೀಜಾಕ್ಷರಾಭಿಮಾನಿ ದೇವತೆಗಳ ದಿವ್ಯ ಸುಂದರ ನರ್ತನವಾದುವು.

ನಾರದ ಭಕ್ತಿ ಸೂತ್ರದ ಮೂಲಭೂತ ಆಸಕ್ತಿ ರೂಪಗಳಾದ ಗುಣಮಹಾತ್ಮಾಸಕ್ತಿ, ರೂಪಾಸಕ್ತಿ, ಪೂಜಾಸಕ್ತಿ, ದಾಸ್ಯಾಸಕ್ತಿ, ಸ್ಮರಣಾಸಕ್ತಿ, ಸಖ್ಯಾಸಕ್ತಿ, ಕಾಂತಾಸಕ್ತಿ, ವಾತ್ಸಲ್ಯಾಸಕ್ತಿ, ಆತ್ಮನಿವೇದನಾಸಕ್ತಿ ತನ್ಮಯಾಸಕ್ತಿ. ವಿರಹಾಸಕ್ತಿಗಳೆಂಬ ಏಕದಶಾ ವಿಧ ಭಕ್ತಿಯಾಸಕ್ತಿಗಳನ್ನು ಮುಂದೆಂದಿಗೂ ಹರಿದಾಸ ಸಾಹಿತ್ಯದಲ್ಲಿ ನಿರಂತರ ಪ್ರವಹಿಸುವಂತೆ ಪ್ರಭಾಸಪೂರ್ಣವಾಗಿ ತಮ್ಮ ಕಾವ್ಯಗಳಲ್ಲಿ ಬಳಕೆ ಬಗೆ ತಂದು ಶತಮಾನಗಳ ಪ್ರೇರಕಶಕ್ತಿಯಾದರು. ತಮಿಳುನಾಡಿನ ಆಳ್ವಾರುಗಳು ಮಧುರಭಕ್ತಿಯನ್ನು ಕನ್ನಡದಲ್ಲಿ ಮೊಟ್ಟಮೊದಲ ಬಾರಿಗೆ ಅತ್ಯಂತ ದಟ್ಟವಾಗಿ, ಅನನ್ಯವಾಗಿ ತಮ್ಮ ಕೀರ್ತನೆಗಳಲ್ಲಿ ಒಡಮೂಡಿಸಿದವರೆಂದರೆ ಶ್ರೀಪಾದ ರಾಜರು.

ಶ್ರೀ ಪಾದರಾಜರು ಅಂತರಂಗದ ಆತ್ಮಶೋಧನೆಗೆ ಹೆಚ್ಚು ಗಮನವಿತ್ತು ಆಡಂಬರ ಬೂಟಾಟಿಕೆಗಳನ್ನು ಖಂಡಿಸಿದರು. ಮುಖದ ತೊಳೆದು ನಾಮ ಬಳಕೊಂಡೆ ನೆಲ್ಲದೆ ಸುಖ ತೀರ್ಥ ಶಾಸ್ತ್ರವ ನೋದಿದೆನೋ, ಮುಖಶೃಂಗಾರಕ್ಕೆ ಮನಸೋತನಲ್ಲೆ ಭಕುತಿ ರಸದಲ್ಲಿ ಮುಳುಗಿದೆನೇನಯ್ಯ ಎಂದು ಆಚಾರ್ಯ ಶಾಸ್ತ್ರಪಾರಾಯಣದ ಅಗತ್ಯಗಳನ್ನು ಒತ್ತಿಹೇಳಿದರು.

ಉತ್ತಮರ ಸಂಗ ಎನಗಿತ್ತು ಸಲಹೋ ಕೃತಿಯಲ್ಲಿ ತಿರುತಿರುಗಿ ಪುಟ್ಟಲಾರೆ ಎನ್ನುತ್ತಾ ಮರುಜನ್ಮವಿಲ್ಲ ದಂತಾಗಲೂ ಉತ್ತಮ ಸಂಗಬೇಕು. ಅದೇ ಕುಜನರ ಸಂಗ ಹೀನ ಜನರೊಳಗಾಟ ಶ್ವಾನಾದಿಗಳ ಕೂಟದಂತೆ ಎನ್ನು ತ್ತಾರೆ. ಮುಕ್ತಿ ಪ್ರದಾಯಕ ಶಕ್ತಿಯನ್ನು ಉತ್ತಮರ ಸಂಗ ಹೊಂದಿದೆ ಎಂಬ ಮಾತು ಪರಿಣಾಮಕಾರಿಯಾಗಿದೆ. ದುರ್ಗಂಧದವರೊಂದಿಗಿನ ಸ್ನೇಹಕ್ಕಿಂತ ಸುಗಂಧದವರೊಂದಿಗೆ ಗುದ್ದಾಟ ಲೇಸು ಎಂಬ ಮಾತಿದೆ. ವಾಸುದೇವನೇ ನಿನ್ನ ದಾಸರ ದಾಸರ ದಾಸರ ದಾಸ್ಯವ ಕೊಡು ಸಾಕು ಎಂಬ ಸಾಲುಗಳು ಮಾರ್ಮಿಕವಾಗಿದೆ. ಶ್ರೀಶನ ದಾಸರ ದಾಸರ ದಾಸ್ಯವೇ ನಿಮ್ಮನ್ನು ಉದ್ಧರಿಸ ಬಲ್ಲದು. ಇತರೆ ವಿಷಯಗಳಿಗೆರಗಿಸದೆ ಮನಕೆ ನಿನ್ನ ಕಥಾಮೃತವ ಕೊಡು ಸಾಕೆಂದರೆ ಎಂದು ಭಿನ್ನವಿಸಿಕೊಂಡಿದ್ದಾರೆ. ಇಂದ್ರಿಯಗಳೆಲ್ಲ ನಿನ್ನನ್ನೇ ಆರಾಧಿಸುವಂತೆ ಮಾಡು. ಅನ್ಯ ದುಷ್ಟಮಾರ್ಗಗಳ ಕಡೆಗೆ ಮನಚಲಿಸದಂತೆ ಮಾಡು ಎಂಬ ಪ್ರಾರ್ಥನೆ ಗಮನಾರ್ಹವಾಗಿದೆ. "ಏರುದಂಡಿಗೆ ನೂರಾಳು ಮಂದಿಯ ಮೂರು ದಿನದ ಭಾಗ್ಯ ಋಣ ಋಣವು ಎಂಬ ಕಾಳ ಬೆಳದಿಂಗಳ ಸಂಸಾರ ಎಂಬ ಕೃತಿಯಲ್ಲಿ ಸಾಲು ಬದುಕಿನಂತೆ ಬದುಕಿನಲ್ಲಿನ ಸಿರಿತನವೂ ನಶ್ವರ ಭಾಗ್ಯವ ನಂಬಿ ಶಾಶ್ವತ ಜನರ ಕಳೆದುಕೊಳ್ಳದಿರಲು ಸೂಚಿಸುತ್ತಾರೆ. ಶ್ರೀಪಾದರಾಜನು ಭಕ್ತಮಂದಾರರೂ, ಹರಿಪಾದಾಂಬುಭೃಂಗರೂ, ಸಿರಿಕೃಷ್ಣದಿವ್ಯಪಾದಜ್ಯ ಚಿಂತಾಲೋಲರು ಆಗಿದ್ದು. ಆಗ ತಾನೇ ಅರಳತೊಡಗಿದ್ದ ಹರಿದಾಸ ಪರಂಪರೆಯ ಹರಿಕಾರರೂ ಆಗಿದ್ದು, ಶರಣ ಕೀರ್ತಿತರಂಗರೂ ಶರಣ ಜನಸುರ ಧೇನುಗಳೂ ಆಗಿದ್ದರೆಂದು ಶ್ರೀವ್ಯಾಸರಾಜರು ಕೀರ್ತಿಸಿದ್ದಾರೆ.

ಭಗವಂತನ ಕೃಪೆಯ ರಹಸ್ಯವನ್ನು ಚೆನ್ನಾಗಿ ಅರಿತು ಶ್ರೀಪಾದರಾಜರು, ಬದಕನ್ನು ಪರಮಾತ್ಮನ ಕೃಪೆಗೆ ಅರ್ಪಿಸಿ ಅವರ ಅನುಗ್ರಹಕ್ಕೆ ಪಾತ್ರರಾಗಬೇಕೆಂದು ತಿಳಿಸಿದ್ದಾರೆ. ಮನುಷ್ಯನ ಉನ್ನತಿ ಹಾಗೂ ಅವನತಿಗಳಿಗೆ ಭಗವಂತನೇ ಕಾರಣ ಎಂದು ನಂಬಿದ ಅವರು ಇಟ್ಟಾಂಗೆ ಇರುವೆನೋ ಹರಿಯೇ ಎನ್ನ ದೊರೆಯೇ ' ಎಂದು ಭಿನ್ನವಿಸಿದ್ದಾರೆ. ಅವನ ಕರುಣೆ ಇದ್ದಷ್ಟು ಕಾಲ ಯಾವುದಕ್ಕೂ ಕೊರತೆಯಿಲ್ಲ. ಆದರೆ ಆತನ ಮಮತೆ ತಪ್ಪಿದರೆ ಮಾತನಾಡಿಸುವವರು ಗತಿಯಲ್ಲ. ಒಮ್ಮೊಮ್ಮೆ ಕರುಣಾನಿಧಿಯ ಕರುಣೆಸಮೂಹ ತಪ್ಪುವುದುಂಟು ಎಂಬ ಎಚ್ಚರಿಕೆ ನೀಡಿದ್ದಾರೆ.

ಶ್ರೀ ಪಾದರಾಜರು ಭಗವಂತನನ್ನು ಯಾವ ನಿಲುವಿನಿಂದ ಕೊಂಡಾದಿದ್ದಾರೆಂಬುದಕ್ಕೆ ಅವರ ಕೀರ್ತನೆಗಳೇ ಸಾಕ್ಷಿಯಾಗಿದೆ. ಶ್ರೀ ಪಾದರಾಜರಿಗೆ ಭಗವಂತನಲ್ಲಿ ತುಂಬು ಭಕ್ತಿ ಅವರ ಹಾಡುಗಳಲ್ಲಿ ವ್ಯಕ್ತವಾಗಿದೆ. ಶ್ರೀ ರಂಗನಾಥನಲ್ಲಿ ಅವರದು ನಿರ್ವ್ಯಾಜ್ಯ ಭಕ್ತಿ. ನವವಿಧ ಭಕ್ತಿಯು ಅವರ ಹಾಡುಗಳಲ್ಲಿ ಇದೆಯಾದರೂ ಮಧುರ ಭಾವದ ಭಕ್ತಿಯ ಕೈಮೇಲಾಗಿದೆ.



# ಆಳ್ವಾರುಗಳು ಕಂಡ ತಿರುವೇಂಗಡ

- ಎಂ. ಆರ್. ನರಸಿಂಹನ್

" The golden hued holy one (siva) and the one who rose to the skies to encompass this earth Trivikrama Vishnu, the two may pass as separate ones, but the one is really in the other." (History of Tirupati by Sri T.K.T. Veera Raghavacharya, 1953, page 70)

Nammalawar himself concedes the unity of that Lord of Tirumalai is a Combinat ,,,,,, Brahma etc.

" He has merged in himself Rudra, Brahma and lakshmi after losing their separate entity. He pierced by his growth the highest heavens to encompass the creation. Is there a higher divinity than that of vishnu ?" (History of Tirupati by Sri T.K.T . Veera Raghavacharya, 1953 Page 70)

Some of the views of the nature of the Lord Venkateswara's image have been indicated above. Devotees who flock to Lord venkate swara at Tirumalai Worship him in various forms as their Ist a Daivam' as Lord Vishnu, Skanda or subrabmanya, Siva, Sakti a combination of the Trimurthies Brahama , Vishnu ad Siva or as Venka teswara a combination of Hari and Hara. There can be no Finality in the arguments of any of threse devotess nor is it desirable to pursue such arguments of conflict and impertinence when the lord is one and only one.

ಇದೇ ಪುಸ್ತಕದ ೮೯ ನೆಯ ಪುಟದಲ್ಲಿ ಮತ್ತೆ ವಿಚಾರಧಾರೆ ಈ ರೀತಿ ಸಾಗಿದೆ :

The compositions of the first poigai Alwar makes several references to Tirumalai and the Lord of Tirumalai, A verse quoted from Dr. Krishnaswamy Ayyangar's History of tirupaiti reads as follows:

He rides the bull and bird

He burnt the castle (the three castles in the air)

And Broke open the heart (tore up Hiranyakashipu's)

Chest with his claws as Narasimha

He is smeared over with ash (Vibhuthi)

He is of the sapphire blue colour

part of his body is a lady (Parvathi)

And in one part is the Lady born of the Lotus

Sri or Lakshmi His coiffure the long matted locks

His Head (is) covered by a tall crown

He wears the Ganga (ganges) on his Head (siva)

And on his lengthening foot (Trivikrama)

Another of his verses has alredy been quoted in chapter II .

This Alwar appears to have regarded the Lord of Tirumalai as a combination of Vishnu and Shiva.

The second Alwar Bhutam Alwar author of the work " Irandam Thiruvandadi" also a devotee of vishnu regards the lord of Tirumalai in one verse as the one who destroyed ravana like poigai Alwar he also visulaised the suprem deity as a combination of the two froms of siva and vishnu or as hari hara.

The Third in the list of early alwars is pay alwar author of munram Tiruvandadi Who also recognises the twin aspect of Hari Hara of lord Vishnu. Two of his verses clearly mention (quoted in Chapter II of the book) that the lord of Tirumalai has combined into one - the forms of Siva and Vishnu.

ಈ ಲೇಖಕರು ಮೂರ್ತಿಯನ್ನು ಶುಕ್ರವಾರದ ಅಭಿಷೇಕವಾಗುವಾಗ ದರ್ಶಿಸಿ ಅಡಿಯಿಂದ ಮುಡಿಯವರೆಗೂ ವಿವರ ನೀಡಿರುವುದನ್ನು ಅವರ ಪುಸ್ತಕದ 18-19 ನೆಯ ಪುಟಗಳಲ್ಲಿ ಮನವರಿಕೆ ಮಾಡಿಕೊಳ್ಳಬಹುದು. ಅದರಲ್ಲಿನ ಕೆಲವು ಸ್ವಾರಸ್ಯಗಳು ಇಂತಿವೆ.

"The Lord's figure is richly adored with flowing locks of hair or Jata juta and some of these locks of curly hair rest on his shoulders.... the lord wearing a Mukuta or Crown which is more than 20 inches high.... The Lord's, image has four arms, the upper two being carved to hold the chakram and conch The chakram and conch are not integral parts of the main Idol ... Mother Lakshmi is carved on the right chest of the Lord in the sitting pose and is an integral part of the mula murthy...... The arms have armlets with finger like projections which appear be Naga bharanam or cobra ornament. A cbora is also said to be coiled around the Lord's right arm.. the hipples of the lord in his chest are button like and are prominent. There is however a Katibhanadam or waist band and it is about two inches thick.

ಮತ್ತೆ ಪುಟ 23 ರಲ್ಲಿ ಮತ್ತೊಂದು ಮುಖ್ಯ ಅಂಶವು ಇಂತಿದೆ.

The image has a crescent mark on the head indicating. that the images is Siva, if not Kumara Swamy.

ಮೇಲೆ ಶ್ರೀ ಸೀತಾಪತಿಯವರು ಉದಾಹರಿಸಿರುವ ಶ್ಲೋಕಗಳು ಮೊದಲಾಳ್ವಾರ್‌ಗಳ ತಿರುವಂದಾದಿಗಳಲ್ಲಿ ಈ ಕೆಳಕಂಡಂತೆ ಇವೆ. ಇವುಗಳ ಅರ್ಥವನ್ನು ವಾಚಕರ ಅವಗಾಹನೆಗೆ ನೀಡಲಾಗಿದೆ. ಈ ಅರ್ಥಗಳು ಶ್ರೀ ಅನಂತ ರಂಗಾಚಾರ್ಯರ ಪುಸ್ತಕಗಳ ಮೇಲೆ ಆಧಾರಿತವಾಗಿದೆ.

ಮೊದಲ ಪಾಶುರ ಪೊಯ್ಗಯ್ ಆಳ್ವಾರ್ ಅವರ ಮೊದಲು ತಿರುವಂದಾದಿಯ ಐದನೆಯ ಪಾಶುರ

ಅರನ್ ನಾರಣನ್ ನಾಮಮ್ ಆನ್ ವಿಡ್ಶೈ ಪುಳ್ಳೂರ್ತಿ
ಉರೈನೂಲ್ ಮರೈ ಉರೆಯುಂ ಕೋಯಿಲ್ - ವರೈನೀರ್
ಕರುಮಂ ಅಪ್ಪು ಅಳಿಪ್ಪು ಕೈಯ್ಯದು ವೇಲ್ ನೇಮಿ
ಉರುವಂ ಎರಿಕಾರ್ ಮೇನಿಒನ್‌ರು

ಹರ ಮತ್ತು ನಾರಾಯಣನೆಂಬ ಹೆಸರು. ಜ್ಞಾನವಿಲ್ಲದ ವೃಷಭ ಮತ್ತು ಗರುತ್ಮಂತ ವಾಹನ ; ಆಗಮ, ವೇದಗಳು ಪುಸ್ತಕ ಪ್ರಮಾಣ, ವಾಸಸ್ಥಳ ಕೈಲಾಸ ಮತ್ತು ಮಹಾರ್ಣವಾದ ಕ್ಷೀರಸಾಗರ. ಕಾರ್ಯ ಸಂಹಾರ, ರಕ್ಷಣೆ ಆಯುಧ ಭಲ್ಯೆ (ವೇಲ್) ಮತ್ತು ಸುದರ್ಶನ ಚಕ್ರ. ಶರೀರ, ಬೆಂಕಿ ಮತ್ತು ಕಾರ್ಮೇಘದಂತೆ. ರುದ್ರನು ಶರೀರ ; ನಾರಾಯಣನು ಶರೀರಿ.

(ಮುಂದುವರೆಯುತ್ತದೆ)

# 108 ದಿವ್ಯ ದೇಶಗಳು

# ತಿರುನರಯೂರ್ (ನಾಚ್ಚಿಯಾರ್ ಕೋಯಿಲ್)

- ಆಚಾರ್ಯ ಚಕ್ರವರ್ತಿ ರಂಗನಾಥನ್
- ಕನ್ನಡಾನುವಾದ - ಸೂರ್ಯವಂಶಿ

**ಧ್ಯಾನ ಶ್ಲೋಕ**


ಊಢಾ ವಞ್ಜುನಾಯಕೀ ಖಲು ನಿಜಪ್ರಧಾನ್ಯಶುಲ್ಕಾ ಪುರಾ
ಶುದ್ಧಂ ಗೇಹವಿಮಾನಮತ್ರ ಸಮಣೀಮುಕ್ತಾ ನದೀ ಪ್ರಾಙ್ಮುಖಃ
ಅತ್ರಾರ್ಥಿಶಸುರದ್ರುಕಲ್ಪ ಭಗವಾನ್ ಪೂರ್ಣಾಹ್ವಯಃ ಶ್ರೀನಿಧಿಃ
ಪ್ರತ್ಯಕ್ಷೇಣ ಚತುರ್ಮುಖೇನ ಋಷಿಣಾ ಮೇಧಾವಿನಾರಾಧ್ಯತೇ।

ಈ ಕ್ಷೇತ್ರವು ಕುಂಭಕೋಣದಿಂದ ಹೆಚ್ಚು ಕಡಿಮೆ ಒಂಭತ್ತು ಕಿ.ಮೀ ದೂರದಲ್ಲಿದ್ದು ಸುಮಾರು ಐದು ಎಕರೆಗಳ ಸ್ಥಳದಲ್ಲಿ ಅದ್ಭುತವಾದ ಐದು ಪ್ರಾಕಾರಗಳೊಂದಿಗೆ ಅದೇ ಪ್ರಕಾರವಾಗಿ ಐದು ಶಿಖರಗಳಿಂದ ಇರುವಂತಹಾ ರಾಜಗೋಪುರದೊಂದಿಗೆ ಮತ್ತು ಹದಿನಾರು ಚಿಕ್ಕ ಚಿಕ್ಕ ಗೋಪುರಗಳೊಂದಿಗೆ ಸುಂದರವಾದ ಪ್ರಕೃತಿಯ ಶೋಭೆಯೊಂದಿಗೆ ರಾರಾಜಿಸುತ್ತಿದೆ. ಈ ಕ್ಷೇತ್ರದ ಗರ್ಭಗೃಹ ವಿಮಾನವೇ ಗೋಪುರದಂತೆ ಕಂಡು ಬರುತ್ತದೆ. ಅದೇ ಅಲ್ಲದೇ ಇಲ್ಲಿ ವೈಕುಂಠ ದ್ವಾರವೆನ್ನುವುದು ಉತ್ತರ ದ್ವಾರದಲ್ಲದೆ ದಕ್ಷಿಣ ದ್ವಾರದತ್ತ ನೆಲಸಿದ. ಈ ಕ್ಷೇತ್ರವನ್ನು ತಿರು ನರಯೂರ್ ಅಥವಾ ನಾಚಿಯಾರ್ ಕೋಯಿಲ್ ಎಂದು ಕರೆಯುತ್ತಾರೆ. ಇದು ಪುರಾತನ ಕಾಲದಿಂದಲೂ ಕರೆಯಲ್ಪಡುತ್ತಿರುವ ಹೆಸರಾಗಿದೆ. ಮುಖ್ಯವಾದ ವಿಷಯವೇನೆಂದರೆ ಇತಿಹಾಸ ಪುರಾಣಗಳು ಯಾವ ಸ್ತ್ರೀಯರ ಮಹಿಮೆಯನ್ನು ತಿಳಿಯಪಡಿಸಿವೆಯೋ ಅಂತಹಾ ಪ್ರಾಮುಖ್ಯತೆಯನ್ನು ಇಲ್ಲಿರುವ ಅರ್ಚಾಸ್ವರೂಪಿಣಿಯಾದ ಅಮ್ಮನವರ ವೈಭವವನ್ನು ತಿಳಿಯಪಡಿಸುವಂತೆ ದೇವದೇವನು ಇಲ್ಲಿ ನೆಲೆಸಿದ್ದಾನೆ. ಆದ್ದರಿಂದ ತಿರುನರಯೂರ್ ಎಂದು ಈ ಕ್ಷೇತ್ರಕ್ಕೆ ಹೆಸರು ಬಂದಿದೆ.

ಇಲ್ಲಿನ ಕ್ಷೇತ್ರದ ಮೂಲಮೂರ್ತಿ ಶ್ರೀನಿವಾಸ! ತಿರುನಲ್ಲೂಲಂಬಿ, ವ್ಯೂಹಾ ವಾಸುದೇವನ್ ಎಂಬ ಹೆಸರಿನಿಂದ ನೆಲೆಸಿದ್ದಾನೆ. ಅಮ್ಮನವರನ್ನು ವಿವಾಹ ಮಾಡಿಕೊಂಡ ನಂತರ ಆ ಸ್ವರೂಪದಲ್ಲಿ ಸ್ವಾಮಿಯವರು. ಪೂರ್ವಮುಖವಾಗಿ ನಿಂತಿರುವಂತಹಾ ಭಂಗಿಯಲ್ಲಿ ರಾರಾಜಿಸುತ್ತಿದ್ದಾನೆ. ಅಮ್ಮನವರು ಮಂಜುಲವಲ್ಲಿ ಆ ಭಗವಂತನನ್ನು ವಿವಾಹ ಮಾಡಿಕೊಳ್ಳುತ್ತಿರುವ ಭಂಗಿಯಲ್ಲಿ ನೆಲೆಸಿದ್ದಾಳೆ. ಗರ್ಭಗೃಹದಲ್ಲಿ ಸಂಕರ್ಷಣ, ಅರ್ಜುನ, ಅನಿರುದ್ಧ, ಸಾಂಬ, ಬ್ರಹ್ಮ ಮೊದಲಾದ ದೇವತೆಗಳೂ ನೆಲೆಸಿದ್ದಾರೆ. ಪುಷ್ಕರಿಣಿಯು ಮಣಿಮುಕ್ತಾ ಪುಷ್ಕರಿಣಿ, ಸಂಕರ್ಷಣತೀರ್ಥ, ಪ್ರದ್ಯುಮ್ನ ತೀರ್ಥ, ಅನಿರುದ್ಧ ತೀರ್ಥ, ಸಾಂಬತೀರ್ಥ ಎಂಬ ಅನೇಕ ತೀರ್ಥಗಳಿಂದ ಈ ದಿವ್ಯದೇಶವು ಕಂಗೊಳಿಸುತ್ತದೆ. ಬಿಲ್ವಮರವು ಇಲ್ಲಿ ಕ್ಷೇತ್ರ ವೃಕ್ಷವಾಗಿದೆ. ಎಡಗಡೆಯ ಭಾಗದಲ್ಲಿ ಉತ್ತರದಿಕ್ಕನ್ನು ನೋಡುತ್ತಿರುವ ಅತ್ಯದ್ಭುತವಾದ ಶಿಲಾರೂಪದಲ್ಲಿರುವ ಗರುಡನು ತನ್ನ ದರ್ಶನ ಭಾಗ್ಯವನ್ನು ನೀಡುತ್ತಿದ್ದಾನೆ. ಉತ್ಸವದ ಸಮಯದಲ್ಲಿ ಈ ಶಿಲಾ ಗರುಡನ ಮೇಲೆ ಭಗವಂತನು ಮೆರವಣಿಗೆಯಲ್ಲಿ ಹೊರಡುತ್ತಾನೆಂದು ಪ್ರತೀತಿ ಇದೆ.

ಸ್ಥಳ ಪುರಾಣದ ಪ್ರಕಾರ, ಕ್ಷೀರಾಬ್ಧಿಯಲ್ಲಿ ಪವಡಿಸಿರುವ ಪರಮಾತ್ಮನಿಗೆ ಮಹಾಲಕ್ಷ್ಮಿಯು ಸದಾ ಪಾದಸೇವೆಯನ್ನು ಮಾಡುತ್ತಿರುತ್ತಾಳೆ. ಒಮ್ಮೆ ಆಕೆ ಕೋಪದಿಂದ ವೈಕುಂಠವನ್ನು ಬಿಟ್ಟು ಹೊರಡುತ್ತಾಳೆ. ಅಂತಹಾ ಮಹಾಲಕ್ಷ್ಮಿ ತನಗೆ ಪುತ್ರಿಯಾಗಿ ಜನ್ಮಿಸಬೇಕೆಂದು ಮೇಧಾವಿ ಎನ್ನುವ ಮಹರ್ಶಿಯು ಘೋರವಾದ ತಪಸ್ಸು ಮಾಡಿ ಅಮ್ಮನವರನ್ನು ಪುತ್ರಿಯಾಗಿ ಪಡೆದನು. ಒಂದು ಮರದ ನೆರಳಿನಲ್ಲಿ ಸುಗಂಧವನದಲ್ಲಿ ಆಕೆ ಆವಿರ್ಭವಿಸಿದಳು. ಸುಗಂಧಕ್ಕೆ ಮಧು ಎಂಬ ಅರ್ಥವೂ ಬರುತ್ತದೆ. ಹಾಗೇ ಪರಿಮಾಣ ಎಂದೂ ಅರ್ಥ ಬರುತ್ತದೆ. ಇಲ್ಲಿ ತಿರು ಎಂಬ ಶಬ್ದಕ್ಕೆ ಮಹಾಲಕ್ಷ್ಮಿ ಎಂದರ್ಥ! ಆದ್ದರಿಂದ ಸಾಕ್ಷಾತ್ತು ಭಗವಂತನು ಅಮ್ಮನವರನ್ನು ಹುಡುಕುತ್ತಾ ಇಲ್ಲಿ ಬಂದು ವಿವಾಹವನ್ನು ಮಾಡಿಕೊಂಡನಂತೆ. ಒಂದೇ ಸ್ವರೂಪದಲ್ಲಿ ಹೋದರೆ ಅಮ್ಮನವರು ತನ್ನನ್ನು ಗುರುತುಹಿಡಿಯುತ್ತಾಳೆಂಬ ಉದ್ದೇಶದಿಂದ ಸ್ವಾಮಿಯು ವಾಸುದೇವನಾಗಿ, ಸಂಕರ್ಷಣನಾಗಿ, ಪ್ರದ್ಯುಮ್ನನಾಗಿ, ಅನಿರುದ್ಧನಾಗಿ, ಸಾಂಬನಾಗಿ ಐದು ಸ್ವರೂಪಗಳಲ್ಲಿ ಲೋಕಗಳಲ್ಲೆಲ್ಲಾ ಹುಡುಕಿದರು. ಕೊನೆಯದಾಗಿ ಮೇಧಾವಿ ಮಹರ್ಷಿಯ ತಪಸ್ಸಿನಿಂದ ಪುತ್ರಿಯಾಗಿ ಮಂಜುಲವಲ್ಲಿಯಾಗಿ ಇಲ್ಲಿಯೇ ಇರುವಳೆಂದು ಗರುತ್ಮಂತನ ಮುಖಾಂತರ ತಿಳಿದುಕೊಂಡು ಭಗವಂತನು ಅಲ್ಲಿಗೆ ಹೋಗಿ ಐದು ರೂಪಗಳನ್ನೆಲ್ಲಾ ಒಂದೇ ರೂಪವನ್ನಾಗಿಸಿ ಮೇಧಾವಿ ಮಹರ್ಷಿ ಬಳಿ ಹೋದನು. ಅಲ್ಲಿ ಆತಿಥ್ಯವನ್ನು ಸ್ವೀಕರಿಸಿ, ತನ್ನ ಮಹಾಲಕ್ಷ್ಮಿಯನ್ನು ಅಲ್ಲಿಯೇ ನೋಡಿದನು ವಾಸುದೇವಮೂರ್ತಿ, ನೋಡಿದ ತಕ್ಷಣ ಆ ಐದು ಮಂದಿಗೂ ಆಕೆಯೇ ಅಡಿಗೆ ಮಾಡಿ ಬಡಿಸಿದಳು. ಬಡಿಸುವ





ಸಂದರ್ಭದಲ್ಲಿ ಭಗವಂತನು ಪ್ರೇಮದಿಂದ ಆಕೆಯ ಕೈಗಳನ್ನು ಹಿಡಿದು ಕೊಂಡನಂತೆ ಆಗ ಮೇಧಾವಿ ಮಹರ್ಷಿಯು ಕುಪಿತನಾಗಿ ಇನ್ನೇನು ಶಾಪ ವನ್ನು ನೀಡಬೇಕೆಂದುಕೊಂಡ ಸಮಯದಲ್ಲಿ ಭಗವಂತನು ಐದು ಸ್ವರೂಪ ಗಳನ್ನೂ ತನ್ನಲ್ಲೇ ಒಂದಾಗಿಸಿಕೊಂಡು ಶಂಖಚಕ್ರಗದಾಧಾರಿಯಾಗಿ ದರ್ಶನವನ್ನು ನೀಡಿದನಂತೆ. ಆಗ ಮೇಧಾವಿ ಮಹರ್ಷಿಯು ಸಂಭ್ರಮದಿಂದ ತನ್ನ ಮಗಳು ಮಂಜುವಲ್ಲಿಯನ್ನು ಶ್ರೀನಿವಾಸನಿಗೆ ಕನ್ಯಾದಾನ ಮಾಡಿದನಂತೆ. ನಂತರ ಮೇಧಾವಿ ಮಹರ್ಷಿಯ ಪ್ರಾರ್ಥನೆಯ ಮೇರೆಗೆ ಭಗವಂತನು ಮಂಜುಲವಲ್ಲಿಗೆ ಪ್ರಾಮುಖ್ಯತೆಯನ್ನು ನೀಡಬೇಕೆಂಬ ಉದ್ದೇಶದಿಂದ ಈ ಕ್ಷೇತ್ರದಲ್ಲಿ ಮೊದಲ ಪೂಜೆ, ಆರಾಧನೆಯನ್ನು ಅಮ್ಮನವರಿಗೆ ಕಲ್ಪಿಸಿದನಂತೆ ನಂತರ ತನ್ನನ್ನು ಆರಾಧಿಸಬೇಕೆಂದು ಶಾಸಿಸಿದನಂತೆ. ಇಂದಿಗೂ ಉತ್ಸವಗಳ ಸಂದರ್ಭದಲ್ಲಿ ಅಮ್ಮನವರಾದ ಮಂಜುಲವಲ್ಲಿಯನ್ನು ಮೆರವಣಿಗೆ ಮಾಡಿ ಸುತ್ತಾ ಮುನ್ನಡೆದಾಗ ಹಿಂದೆ ಭಗವಂತನು ಮೆರವಣಿಗೆಯಲ್ಲಿ ಬರುತ್ತಾನೆ. ಇದೇ ಈ ಕ್ಷೇತ್ರದ ವೈಶಿಷ್ಟ್ಯತೆ. ಉಳಿದ ಯಾವ ಕ್ಷೇತ್ರಗಳಲ್ಲೂ ಇಲ್ಲದ ಈ ನಿಯಮವನ್ನು ಇಲ್ಲಿ ಪಾಲಿಸಲಾಗುತ್ತದೆ. ಎರಡನೆಯ ವಿಶೇಷವೇನೆಂದರೆ ಆಚಾರ್ಯತ್ವ! ಈ ಸ್ಥಳದಲ್ಲಿ ನೆಲೆಸಿರುವ ಸ್ವಾಮಿಯನ್ನು ತಿರು ಮಲದವರು ವೈಷ್ಣವ ಚಂದ್ರನೆಂದು ಶಂಖ ಚಕ್ರಾಗಳನ್ನೂ ಧರಿಸಬೇಕೆಂದು ಬೇಡಿ ಕೊಂಡರಂತೆ.

ಕೊಮುರವಲ್ಲಿ ನಾಚಿಯಾರ್ ಯಾವಾಗ ಭಗವಂತನನ್ನು ವಿವಾಹ ಮಾಡಿಕೊಳ್ಳುತ್ತಾಳೋ ಆ ಸಂದರ್ಭದಲ್ಲಿ ಶ್ರೀ ವೈಷ್ಣವನಾಗಿ ಇರಬೇಕೆಂದು ಪಂಚ ಸಂಸ್ಕಾರಗಳೂ ಇರಬೇಕೆಂದು ಭಗವಂತನನ್ನು ಅವರೆಲ್ಲಾ ಬೇಡಿಕೊಂಡರಂತೆ. ಅದೇ ಪ್ರಕಾರ ಪರಮಪೃಶ್ಯಂ ನಾರಾ ಯಣಿ ಎನ್ನುವಂತಹಾ ಆ ಸ್ವಾಮಿಯು ಪಂಚಸಂಸ್ಕಾರವನ್ನು ಹೊಂದಿದನಂತೆ. ಸಾಕ್ಷಾತು ದೇವದೇವನೇ ಹೆಂಗಸರಿಗೆ ಆಚಾರ್ಯ ನಾಗಿ ಇಲ್ಲಿ ದೊರೆತನಂತೆ. ಆಚಾರ್ಯನಾಗಿ ಬಂದನಾದ್ದರಿಂದ ತಿರು ಮಲದ ಶಾಸನವನ್ನು ಇಲ್ಲಿ ಅನುಸರಿಸುತ್ತಾರೆ ಇದೇ ಇಲ್ಲಿರುವ ಮತ್ತೊಂದು ವಿಶೇಷತೆ!

ಅದೇ ಪ್ರಕಾರ ಅರವತ್ತ ಮೂರು ನಾಯನ್ಮಾರ್‌ಗಳಲ್ಲಿ ಕೊಚ್ಚಂ ಗಚೋಲನ್ ಎಂಬ ಶಿವಭಕ್ತನ ರಾಜ್ಯವು ಅವನಿಂದ ಕೈತಪ್ಪಿ ಹೋದ ಸಮಯ ದಲ್ಲಿ ಮನುಷ್ಯರ ಮೂಲಕ, ಮಹರ್ಷಿಗಳ ಮೂಲಕ ಈ ಕ್ಷೇತ್ರದ ವೈಭವವನ್ನು ತಿಳಿದುಕೊಂಡು, ಆ ಮಣಿಮುಕ್ತನದಿಯಲ್ಲಿ ಸ್ನಾನವನ್ನು ಮಾಡಿ ಸ್ವಾಮಿಯನ್ನು ದರ್ಶಿಸಿದನಂತೆ. ಈತನೇ ಈ ಸ್ವಾಮಿಗೆ ಈ ದೇವಾಲಯವನ್ನು ನಿರ್ಮಿಸಿದಂತೆ ಚರಿತ್ರೆಯಲ್ಲಿ ತಿಳಿಸ ಲಾಗಿದೆ.

ಇನ್ನೊಂದು ಮುಖ್ಯವಾದ ವಿಷಯವೇನೆಂದರೆ ಕಲ್ಲರನೆಂಬ ಶಿಲಾ ರೂಪದದಲ್ಲಿ ಇರುವ ಗರುಡನು ಇಲ್ಲಿಯ ವಿಶೇಷ. ಪ್ರತಿ ಯೊಬ್ಬರೂ ಈ ಗರುಡನನ್ನು ದರ್ಶಿಸಬೇಕು. ಸ್ವಾಮಿಯವರು, ಅಮ್ಮನವರೊಂದಿಗೆ ವಿವಾಹವಾಗುವುದಕ್ಕೆ ಗರುಡನ ಮೇಲೆ ಬರುತ್ತಾ ನಂತೆ. ಆ ಮೆರವಣಿಗೆಯ ಅದ್ಭುತವಾದ ಘಟನೆಯನ್ನು ಇಲ್ಲಿ ನೋಡ ಬಹುದು. ಇದನ್ನು ಎಲ್ಲೂ ನೋಡಲಾರೆವು. ಮಾರ್ಗಶಿರ ಮಾಸದಲ್ಲಿ ಬಹಳ ಅದ್ಭುತವಾಗಿ ನಡೆಯುವ ಈ ಸೇವೆಯಲ್ಲಿ ಗರುಡನನ್ನು ಮೆರ ವಣಿಗೆ ಮಾಡುತ್ತಾರೆ. ದೇವದೇವನ ಸನ್ನಿಧಾನದಿಂದ ಮೆರವಣಿಗೆಯನ್ನು ಮಾಡುವ ಸಂದರ್ಭದಲ್ಲಿ ನಾಲ್ವರು ದೇವರನ್ನು ಕರೆತರುತ್ತಾರೆ. ಕೆಲ ಸಮಯದ ನಂತರ ಆ ನಾಲ್ವರು ಎಂಟು ಜನ, ಆ ನಂತರ ಹನ್ನೆರಡು ಜನ ಹೀಗೇ ಒಟ್ಟು 64 ಜನ ಒಮ್ಮೆಲೇ ಭಗವಂತನನ್ನು ಕರೆತರುತ್ತಾ ರಂತೆ. ಅದ್ಭುತವಾದ ಈ ಸೇವೆಯನ್ನು ಎಲ್ಲರೂ ಒಮ್ಮೆಯಾದರೂ ವೀಕ್ಷಿಸಬೇಕು. ಭಗವಂತನ ಶರೀರದಿಂದ ಅದೇ ದಿವ್ಯ ಮಂಗಳ ವಿಗ್ರಹದಿಂದ ಬೆವರೂ ಬರುತ್ತದೆಂದು ಅನುಭವಜ್ಞರ ಮಾತು! ಈ ರೀತಿ ಅದ್ಭುತವಾದ ಈ ಕ್ಷೇತ್ರವು ವೈಖಾನಸ ಆಗಮಾನಸಾರ ಆಗಮಾ ರಾಧನೆಯನ್ನು ಅನುಸರಿಸುತ್ತಿದೆ. ಬ್ರಹ್ಮ ಮೇಧಾವಿ ಮೊದಲಾದವರಿಗೆ ಪ್ರತ್ಯೇಕವಾದ ಬಂಗಾರದ ವಿಮಾನದಲ್ಲಿ ಅಥವಾ ಶ್ರೀನಿವಾಸನ ವಿಮಾನದಲ್ಲಿ ಆ ವಿವಾಹ ಭಂಗಿಯಲ್ಲಿ ಅಮ್ಮನವರು ದರ್ಶನವನ್ನು ನೀಡುತ್ತಾರೆ. ಇಂತಹಾ ಶ್ರೀನಿವಾಸ ಸ್ವಾಮಿಯನ್ನು ಯಾರು ದರ್ಶಿಸು ತ್ತಾರೋ ವಿಶೇಷವಾಗಿ ವಿವಾಹವಾಗದೇ ಇರುವವರಿಗೆ ಶೀಘ್ರವಾಗಿ ಕಂಕಣ ಯೋಗವು ಒದಗಿ ಬರುತ್ತದೆ. ಆದ್ದರಿಂದ ಪ್ರತಿಯೊಬ್ಬರೂ ಈ ಕ್ಷೇತ್ರಕ್ಕೆ ಹೋಗಿ ಆ ದೇವ ದೇವನನ್ನು ದರ್ಶಿಸಿಕೊಂಡು ಸಮಸ್ತವಾದ ಶ್ರೇಯಸ್ಸನ್ನು ಪಡೆದು ಧನ್ಯರಾಗಿ.

# ಆರೋಗ್ಯ ಪ್ರದಾಯಿನಿ ಬೀಟ್ರೂಟ್

ತೆಲುಗು ಮೂಲ -ಡಾ|| ಸಿ. ಮಧುಸೂದನ್ ಶರ್ಮ
90007 61390
ಅನುವಾದ- ಡಿ. ಎಸ್. ಬದ್ರಿನಾಥ್



"ಆಹಾರ ಸಂಭವಂ ವಸ್ತುಃ ರೋಗಾಶ್ಚಾಹರ ಸಂಭವಃ  ಹಿತಾಹಿತ ವಿಶೇಷಶ್ಚ ವಿಶೇಷ ಸುಖ ದುಃಖಿಯಾ।"

ಎಂದು ಪ್ರಾಮಾಣಿಕ ಆಯುರ್ವೇದ ಗ್ರಂಥದ ಚರಕ ಸಂಹಿತೆಯಲ್ಲಿ ಹೇಳಲಾಗಿದೆ. ಆಹಾರದಿಂದಲೇ ಈ ಶರೀರ ಉದ್ಭವಿಸುತ್ತದೆಂದೂ, ಅಂತಹ ಶರೀರಕ್ಕೆ ಆಹಾರದಿಂದಲೇ ರೋಗಗಳುಂಟಾಗುತ್ತದೆಂದೂ ಇದರ ಸ್ಥೂಲ ಅರ್ಥ ಆದ್ದರಿಂದ ದೈವ ಪ್ರಸಾದಿತವಾದ ಅಂತಹ ಆಹಾರವನ್ನು ಸಕ್ರಮವಾಗಿ ಸದ್ವಿನಿಯೋಗ ಮಾಡಿಕೊಳ್ಳುವುದರ ಮೇಲೆಯೇ ನಮ್ಮ ಮುಂದಿನ ಜೀವನ ಆಧಾರವಾಗಿರುತ್ತದೆ

ಅಂತಹ ಆಹಾರ ಪದಾರ್ಥಗಳ, ಅಡುಗೆ ಮನೆಯ ತಯಾರಿಕೆಗಳಲ್ಲಿ ಪ್ರಕೃತಿಮಾತೆ ಪ್ರಸಾದಿಸುವ ಎಲೆಸೊಪ್ಪು, ಕಾಯಿಗಡ್ಡೆಗಳು, ಏಕಧಾನ್ಯ, ದ್ವಿದಳ ಧಾನ್ಯಗಳು, ಬೇಳೆಗಳು ದಂಟುಗಳು. ಹೀಗೆ ವಿವಿಧ ದ್ರವ್ಯಗಳನ್ನು ವಿನಿಯೋಗಿಸುತ್ತೇವೆ. ಇದರಲ್ಲಿ ಗಡ್ಡೆಗಳ ಜಾತಿಗೆ ಸೇರಿದ ಬೀಟ್‌ರೂಟ್ ಗಡ್ಡೆಯು ಪೋಷಕಾಂಶ, ಔಷಧ ಸತ್ವಗಳನ್ನು ಹೊಂದಿ ಶರೀರ ಪೋಷಣೆಗೆ, ಆರೋಗ್ಯ ಸಂರಕ್ಷಣೆಗೆ, ಸೌಂದರ್ಯ ಪೋಷಣೆಗೆ ಉಪಯುಕ್ತವಾಗಿವೆ. ನಾವು ಪ್ರತಿನಿತ್ಯಜೀವನದಲ್ಲಿ ಎದುರುಗೊಳ್ಳುವ ವಿವಿಧ ಅನಾರೋಗ್ಯ ಸಮಸ್ಯೆಗಳಿಗೆ ಈ ಬೀಟ್ರೂಟ್‌ನ್ನು ಹೇಗೆ ಸದ್ವಿನಿಯೋಗ ಮಾಡಿಕೊಳ್ಳಬಹುದು, ಪರಿಷ್ಕರಿಸಿಕೊಳ್ಳಬಹುದೆಂದು ಪ್ರಸ್ತುತ ತಿಳಿಯೋಣ.

**ರಕ್ತಹೀನತೆಗೆ:** ದಿನವೂ ಒಂದು ಬಾರಿ 100 ಮಿ.ಲೀ ಬಿಟ್ರೂಟ್ ರಸದಲ್ಲಿ ಕಾಲು ಟೀಸ್ಪೂನ್‌ನಿಂದ ಅರ್ಧ ಟೀ ಸ್ಪೂನ್‌ವರಗೆ ನೆಲ್ಲಿಕಾಯಿಪುಡಿ, ಅರ್ಧ ಟೀಸ್ಪೂನ್ ಬೆಲ್ಲ ಕಲಿಸಿ ಸೇವಿಸುತ್ತಿದ್ದರೆ ಒಳ್ಳೆಯ ಫಲಿತವುಂಟಾಗುತ್ತದೆ.

**ಜ್ಞಾಪಕಶಕ್ತಿವೃದ್ಧಿಯಾಗಲು:** ವಾರಕ್ಕೊಂದು ಸಾರಿ 200 ಮೀ.ಲೀ. ನೀರಿನಲ್ಲಿ ಒಂದು ಟೀಸ್ಪೂನ್ ಬೀಟ್ರೂಟ್ ಪೇಸ್ಟ್ 10 ಕುಟ್ಟಿದ ಕರಿಮೆಣಸಿನ ಕಾಳು, ಅರ್ಧ ಟೀ ಸ್ಪೂನ್ ಜೀರಿಗೆ, ಕಾಲು ಟೀಸ್ಪೂನ್ ಉಪ್ಪು ಕಲಿಸಿ 100 ಮೀ.ಲೀ ನೀರು ಉಳಿಯುವಂತೆ ಸಣ್ಣ ಉರಿಯಲ್ಲಿ ಮರಳಿಸಿ ಕೆಳಗಿಳಿಸಿ ಬಿಸಿಯಾರಿದ ನಂತರ ಶೋಧಿಸಿ ಸೇವಿಸುತ್ತಿದ್ದರೆ ಜ್ಞಾಪಕಶಕ್ತಿ,ಗ್ರಹಣಶಕ್ತಿ ವೃದ್ಧಿಗೊಳ್ಳುತ್ತದೆ. ಅಲ್ಜಿಮರ್ಸ್, ಡಿಮೆನ್ಷಿಯಾದಂತಹ ಅನಾರೋಗ್ಯ ಪರಿಸ್ಥಿತಿಯಲ್ಲುಂಟಾಗುವ ಮರಗುಳಿ ಸಮಸ್ಯೆ ಹಿಡಿತದಲ್ಲಿ ಬರುತ್ತದೆ.

**ಒಣ ಚರ್ಮ ಸಮಸ್ಯೆಗೆ:** ಸ್ವಲ್ಪ ದಿನಗಳವರೆಗೆ ದಿನವೂ ಖಾಲಿ ಹೊಟ್ಟೆಯಲ್ಲಿ 50 ಮಿ.ಲೀ. ಬೀಟ್ರೂಟ್ ರಸದಲ್ಲಿ 50 ಮಿ.ಲೀ. ಕೊಬ್ಬರಿ ಹಾಲು, ಅರ್ಧ ಟೀ ಸ್ಪೂನ್, ಕಲ್ಲುಸಕ್ಕರೆ ಸೇವಿಸುತ್ತಾ, ಬೀಟ್ರೂಟ್ ಪೇಸ್ಟ್, ಕೊಬ್ಬರಿ ಹಾಲು, ಕಲಿಸಿ ಮೇಲೆ ಲೇಪನದಂತೆ ಸವರಿ ಅರ್ಧಗಂಟೆ ಬಿಟ್ಟು ತೊಳೆದುಕೊಂಡರೆ ತ್ವರದಲ್ಲಿ ಫಲಿತಾಂಶ ಹೊರ ಹೊಮ್ಮುತ್ತದೆ.

**ಹೊಟ್ಟೆಯಲ್ಲಿನ ಹುಣ್ಣು - ವ್ರಣಗಳಿಗೆ:** ದಿನವೂ ಬೆಳಗ್ಗೆ ಆಹಾರ ಸೇವನೆಗೆ ಅರ್ಧ ಗಂಟೆ ಮೊದಲು 100 ಮಿ.ಲೀ. ಬಿಟ್ರೂಟ್ ರಸದಲ್ಲಿ 15 ಮಿ.ಲೀ. ಜೇನು ಕಲಿಸಿ ಸೇವಿಸುತ್ತಿದ್ದರೆ ಅವು ಒಣಗಿ ಹೋಗುತ್ತವೆ.

**ಬಾಲನೆರೆಗೆ:** ವಾರಕ್ಕೆ ಒಂದೆರಡು ಬಾರಿ 100 ಗ್ರಾಂ ಬೀಟ್ರೂಟ್ ಗಡ್ಡೆಯ ಪೇಸ್ಟ್ ಕರಿಜೀರಿಗೆ ಕುಟ್ಟಿ ಮಾಡಿದ ಪುಡಿ ಗೋರಂಟಿ, ನೆಲ್ಲಿಕಾಯಿಪುಡಿ ಒಂದೊಂದು 15 ಗ್ರಾಂನಂತೆ ಕಲಿಸಿ ತಲೆಗೆ, ಕೂದಲಿಗೆ ಹಚ್ಚಿ ಎರಡು ಗಂಟೆ ಬಿಟ್ಟು ತಲೆಸ್ನಾನ ಮಾಡಿದರೆ ಸಣ್ಣ ವಯಸ್ಸಿನಲ್ಲೇ ಕೂದಲು ಬಿಳಿಯಾಗುವ ಸಮಸ್ಯೆಯನ್ನು ಹಿಡಿತದಲ್ಲಿಟ್ಟುಕೊಳ್ಳಬಹುದು.

**ಮುಖದ ಮೇಲಿನ ಕರಿಮಚ್ಚೆಗೆ:** ದಿನವೂ ಒಂದು ಬಾರಿ ಎರಡು ಟೀ ಸ್ಪೂನ್ ಬೀಟ್ರೂಟ್ ರಸ ಎರಡು ಟೀ ಸ್ಪೂನ್ ನೆನಗಡಲೆಹಿಟ್ಟು, ಒಂದು ಟೀ ಸ್ಪೂನ್ ಮೊಸರು, ಒಂದು ಟೀ ಸ್ಪೂನ್ ನಿಂಬೆರಸ ಒಂದು ಟೀ ಸ್ಪೂನ್ ಜೇನು ಕಲಿಸಿ ಕರಿಮಚ್ಚೆಯ ಮೇಲೆ ಗಂಟೆ ಹೊತ್ತು ಸವರಿ ನಂತರ ತೊಳೆದುಕೊಂಡರೆ ಉತ್ತಮ ಪರಿಷ್ಕಾರ ದೊರಕುತ್ತದೆ.

**ಬಾಣಂತಿಯಲ್ಲಿಸ್ತನ್ಯಉತ್ಪತ್ತಿಯಾಗಲು:** ಪ್ರತಿದಿನ 100 ಮಿ.ಲೀ. ಬೀಟ್ರೂಟ್ ರಸ, 100 ಮಿ.ಲೀ. ಕ್ಯಾರೆಟ್ ರಸ ಒಂದು ಟೀ ಸ್ಪೂನ್ ಬೆಲ್ಲ, ಇಲ್ಲವೇ ಕಾಲು ಟೀ ಸ್ಪೂನ್ ಕರಿ ಮೆಣಸಿನ ಪುಡಿ ಕಲಿಸಿ ಸೇವಿಸಿದರೆ ಬಾಣಂತಿಯರಲ್ಲಿ ಶಿಶುವಿಗೆ ತಕ್ಕಷ್ಟು ಹಾಲು ಉತ್ಪತ್ತಿಯಾಗುತ್ತದೆ. ಶಿಶುವು ಸಹಾ ಆರೋಗ್ಯವಾಗಿರುತ್ತದೆ.

**ಸೀಳು ಕೂದಲಿಗೆ:** ವಾರಕ್ಕೊಂದು ಬಾರಿ, 100 ಗ್ರಾಂ ಬೀಟ್ರೂಟ್ ಹೋಳುಗಳು, 50 ಗ್ರಾಂ ಶುಂಠಿ, ಹೋಳುಗಳು, ಕಲಿಸಿ ಮಿಕ್ಸಿಯಲ್ಲಿ ಹಾಕಿ ರಸತೆಗೆದು ತಲೆಗೆ ಮರ್ದಿಸಿದಲ್ಲಿ ಒಂದು ತಾಸು ಬಿಟ್ಟು ತಲೆಸ್ನಾನ ಮಾಡುತ್ತಿದ್ದರೆ ಒಳ್ಳೆಯ ಫಲಿತಾಂಶ ಬರುತ್ತದೆ.

**ಕೊಲೆಸ್ಟ್ರಾಲ್ ಸಮಸ್ಯಗೆ:** ದಿನವೂ ಒಂದು ಸಾರಿ 100 ಮಿ.ಲೀ. ಬೀಟ್ರೂಟ್ ರಸದಲ್ಲಿ ಅರ್ಧ ಟೀಸ್ಪೂನ್ ಜೀರಿಗೆ ಪುಡಿ, ಕಾಲು ಟೀ ಸ್ಪೂನ್ ಕಾಳಮೆಣಸಿನ ಪುಡಿ, ಒಂದು ಗ್ರಾಂ ಅರಿಶಿನ ಕಲಿಸಿ ಮರಳಿಸಿ ಕೆಳಗಿಳಿಸಿ ಬಿಸಿಯಾರಿದ ನಂತರ ಉಗುರುಬೆಚ್ಚಗೆ ಇರುವಾಗಲೇ ಸೇವಿಸುತ್ತಿದ್ದರೆ ನಮ್ಮ ಶರೀರಕ್ಕೆ ಉಪಯೋಗವಾಗುವ ಒಳ್ಳೆಯ ಕೊಲೆಸ್ಟ್ರಾಲ್ ವೃದ್ಧಿಯಾಗಿ ಹಾನಿಕಾರಕವಾದ ಕೆಟ್ಟ ಕೊಲೆಸ್ಟ್ರಾಲ್ ತಗುತ್ತದೆ. ಈ ಔಷಧಿಯನ್ನು ಹೀಗೆ ಬಳಸುತ್ತಿದ್ದರೆ ರಕ್ತ ಪರಿಚಲನೆ ಕೂಡಾ ಹಿಡಿತದಲ್ಲಿರುತ್ತದೆ.

**ರಕ್ತಶುದ್ಧಿಗೆ:** ಕಾಲು ಕಿಲೋ ಬೀಟ್ರೂಟ್ ರಸ, ಮುಕ್ಕಾಲು ಕಿಲೋ ಕ್ಯಾರೆಟ್ ರಸ, ಕಿಲೋ ಸ್ಪಟಿಕ ಬೆಲ್ಲದ ಪುಡಿ , ಕಲಿಸಿ ಎಳೆಪಾಕ ಬರುವವರೆಗೆ ಸಣ್ಣಉರಿಯಲ್ಲಿ ಮರಳಿಸಿ ಕೆಳಗಿಳಿಸಿ ಉಗುರು ಬೆಚ್ಚಗಿರುವಾಗ ಒಂದು ಗ್ರಾಂ ಪಚ್ಚಕರ್ಪೂರ ಪುಡಿ ಕಲಿಸಿ ಬಿಸಿಯಾರಿದ ನಂತರ ಒಂದು ಗಾಜಿನ ಸೀಸೆಯಲ್ಲಿ ಶೇಖರಿಸಿಟ್ಟುಕೊಂಡು ದಿನವೂ ಬೆಳಗ್ಗೆ ಸಾಯಂಕಾಲ ಬಾರಿಯೊಂದಕ್ಕೆ 10 ಮಿ.ಲೀ. ಔಷಧವನ್ನು 50 ಮಿ.ಲೀ ನೀರಿನಲ್ಲಿ ಕಲಿಸಿ ಸೇವಿಸುತ್ತಿದ್ದರೆ ರಕ್ತ ಶುದ್ಧಿಯಾಗಿ ವಿವಿಧ ಬಗೆಯ ಚರ್ಮರೋಗಗಳು ಕಡಿಮೆಯಾಗಿ ಚರ್ಮವು ಮೃದುತ್ವವನ್ನು ಹೊಂದುತ್ತದೆ.



# ಜೂನ್ ತಿಂಗಳ

# ರಾಶಿ ಫಲಗಳು



ಮೂಲ- ಬ್ರಹ್ಮಶ್ರೀ ತಂಗಿರಾಲ ವೆಂಕಟಕೃಷ್ಣ ಪೂರ್ಣಪ್ರಸಾದ್ ಸಿದ್ಧಾಂತಿ

ಅನುವಾದ- ಕೆ.ಎಸ್.ಎಸ್

**ಮೇಷ**

ಹಣಹೂಡಿಕೆಗಳಿಗಾಗಲೀ ನೂತನ ವ್ಯಾಪಾರಕ್ಕಾಗಲೀ ಒಳ್ಳೆಯ ಸಮಯವಲ್ಲ ಕಪಟ ಸ್ನೇಹ ಪ್ರದರ್ಶನ. ವೃತ್ತಿ ವ್ಯಾಪಾರಗಳು ಸಾಮಾನ್ಯ ಗತಿಯಲ್ಲಿ ಮಾಸದ ದ್ವಿತೀಯಾರ್ಧ ಅನುಕೂಲಕರ. ಇಷ್ಟ ಕಾಮ್ಯಾರ್ಥ ಸಿದ್ಧಿ. ಬಂಧು - ಮಿತ್ರರ ಸಮಾಗಮ. ಶುಭಕಾರ್ಯ ನಿರ್ವಹಣೆ ಪುತ್ರರಿಂದ ಸೌಖ್ಯವುಂಟಾಗುವುದು.

**ವೃಷಭ**

ಆರೋಗ್ಯ ವಿಷಯದ ಮೇಲೆ ಶ್ರದ್ಧೆ ಅವಶ್ಯಕ. ಹಿಂದಿನ ಅನಾರೋಗ್ಯ ಸಮಸ್ಯೆಗಳು ಪುನರಾಗಮನಗೊಳ್ಳಲಿವೆ. ಭೌತಿಕ ಸುಖವನ್ನನುಭವಿಸುವಿರಿ ಜೀವನದಲ್ಲಿ ಹೊಸ ದೃಷ್ಟಿಕೋಣವನ್ನು ಅಳವಡಿಸಿಕೊಂಡು ಹೊಸ ತಿರುವನ್ನು ಅನುಭವಿಸುವಿರಿ. ಸೋದರರು. ಕುಟುಂಬ ಸದಸ್ಯರು ನಿಮಗೆ ಸಹಕಾರ ಕೊಡುವರು.

**ಮಿಥುನ**

ಬಹಳ ಗೌರವ, ಪ್ರತಿಷ್ಠೆ ಮತ್ತು ಸಮಾಜದಲ್ಲಿ ಒಳ್ಳೆಯ ಸ್ಥಾನವನ್ನು ತಂದು ಕೊಡುತ್ತದೆ. ಸಂತಾನ ಸೌಖ್ಯ ಪ್ರೇಮ ನಿಮಗಿರುತ್ತದೆ ನೀವು ನಿಮ್ಮ ಪ್ರಯತ್ನಗಳಲ್ಲಿ ವಿಜಯವನ್ನು ಸಾಧಿಸುವಿರಿ ಮತ್ತು ವ್ಯತಿರಿಕ್ತವನ್ನು ಬುಡ ಮೇಲು ಮಾಡುವಿರಿ.ಜೀವನವು ವಿಲಾಸಮಯವಾಗಿ ಮುಂದುವರೆಯುತ್ತದೆ.

**ಕರ್ಕಾಟಕ**

ಈ ಸಮಯ ಊಹಿಸದ ಲಾಭವನ್ನು ತರುತ್ತದೆ. ನೀವು ಕೆಲಸ ಮಾಡುವ ಸ್ಥಳದಲ್ಲಿ ಮೇಲಧಿಕಾರಿಗಳಿಂದ ಪ್ರಶಂಸೆ ಹೊಂದುವಿರಿ ವ್ಯಾಪಾರ ಸಹ ಲಾಭದಾಯಕವಾಗಿರುತ್ತದೆ ಮತ್ತು ಆದಾಯ ಅವಕಾಶಗಳು ದೊರಕುತ್ತವೆ. ಪದೋನ್ನತಿಯಿಂದ ಕೂಡಿದ ಸ್ಥಾನಮಾನಗಳನ್ನು ಆಶಿಸಬಹುದು.

**ಸಿಂಹ**

ಜೀವನದಲ್ಲಿ ಊಹಿಸಲಾಗದ ಲಾಭಗಳನ್ನು ತರುತ್ತದೆ. ಎಲ್ಲರ ಪ್ರಶಂಸೆಗೆ ಒಳಗಾಗುವಿರಿ. ವ್ಯಾಪಾರವೂ ಸಹಾ ಲಾಭದಾಯಕವಾಗಿರುತ್ತದೆ ಮತ್ತು ಆದಾಯ ಅವಕಾಶಗಳು ಹೆಚ್ಚುತ್ತವೆ. ಪದೋನ್ನತಿ ಇಲ್ಲವೇ ವೇತನ ಹೆಚ್ಚಳ ಅವಕಾಶಗಳು ಹೆಚ್ಚುತ್ತವೆ. ಪದೋನ್ನತಿ ಇಲ್ಲವೇ ವೇತನ ಹೆಚ್ಚಳ ಅವಕಾಶಗಳು ಸಹಾ ಒದಗಿ ಬರುತ್ತವೆ.

**ಕನ್ಯ**

ನಿಮಗೆ ಆರ್ಥಿಕ ಸಮಸ್ಯೆಗಳಿಂದ ಹೊರಬರುವ ಸಾಧ್ಯತೆಗಳಿವೆ. ಇದು ನಿಮಗೆ ಸಾಮಾಜಿಕ ಜೀವನ ವಿಕಸಿಸುವ ಕಾಲ. ಸಮಾಜದಲ್ಲಿ ಪ್ರಕಾಶಮಾನವಾದ ಸ್ಥಾನವನ್ನು ಹೊಂದುವ ಅವಕಾಶವಿದೆ. ಈ ಕಾಲದಲ್ಲಿ ನಿಮ್ಮ ಸ್ನೇಹಿತರು ಸಹಾ ನಿಮಗೆ ಸಹಕರಿಸುತ್ತಾರೆ ವಿವಾಹಿತರು ಸಹ ಆನಂದಕರವಾದ ಸಮಯವನ್ನು ಕಳೆಯುತ್ತಾರೆ.

**ತುಲಾ**

ನಿಮ್ಮನ್ನು ತೊಂದರೆಗೀಡು ಮಾಡುವ ಸಮಸ್ಯೆಗಳು, ಅಜೀರ್ಣ, ರಕ್ತ ಚಲನೆ ಸಂಬಂಧಿ ಹಾಗೂ ಮೂಲವ್ಯಾಧಿಯುಂಟಾಗುವ ಅವಕಾಶವಿದೆ. ಅನವಶ್ಯಕ ಖರ್ಚ ಹಾಗೂ ನಷ್ಟಗಳು, ಕೆಟ್ಟ ಸಹವಾಸಗಳಲ್ಲಿ ಪಾಲ್ಗೊಳ್ಳುವ ಅವಕಾಶ ವೃತ್ತಿವ್ಯಾಪಾರಗಳಲ್ಲಿ ಆರ್ಥಿಕ ಸಮಸ್ಯೆಗಳು ಹಣಕಾಸು ಸಂಸ್ಥೆಗಳಿಂದ ಸಾಲ ತೆಗೆದುಕೊಳ್ಳುವ ಅವಕಾಶ.

**ವೃಶ್ಚಿಕ**

ವಿದ್ಯೆ ಓದುಗಾರಿಕೆಯಲ್ಲಿ ಪುರೋಗತಿ ಒಳ್ಳೆಯ ಸೌಖ್ಯ ಯತ್ನಕಾರ್ಯಸಿದ್ಧಿ ಶರೀರವು ಶೋಭಾಯಮಾನವಾಗಿದ್ದು ಜೀವನ ಸೌಖ್ಯದಿಂದ ಕೊಡುತ್ತದೆ. ಎಲ್ಲಾ ಪ್ರಯತ್ನಗಳಲ್ಲೂ ವಿಜಯವನ್ನು ಸಾಧಿಸುವಿರಿ ಜ್ಞಾನವೃದ್ಧಿಯಾಗುತ್ತದೆ ನೀವು ಅನೇಕ ರೀತಿಯ ಬಹಳಾ ಪ್ರಯೋಜನಗಳನ್ನು ಹೊಂದಲಿದ್ದೀರಿ.

**ಧನಸ್ಸು**

ಆರೋಗ್ಯ ವಿಷಯಗಳಲ್ಲಿ ಸ್ವಾಸ್ಥ್ಯಕ್ಕೆಗೂಡಿ ಉಪಶಮನ ದೊರಕಲಿದೆ. ಸಂತೋಷಕರವಾದ ಹಾಗೂ ಅದೃಷ್ಟ ಕೈ ಹಿಡಿಯುವ ಕಾಲ ಶತ್ರು ಜಯವಾಗಲಿದೆ. ನಿಮ್ಮ ಪ್ರಯತ್ನಗಳು ವಿಜಯವನ್ನು ತಂದು ಕೊಡಲಿದೆ. ವ್ಯಾಜ್ಯಗಳಲ್ಲಿ ಸಹ ಉಪಶಮನ ದೊರಕಲಿದೆ.

**ಮಕರ**

ನೀವು ನಿಮ್ಮ ವೃತ್ತಿ ಜೀವನದಲ್ಲಿ ಸಮಸ್ಯೆಗಳನ್ನು ಎದುರು ಗೊಳ್ಳುವಿರಿ. ಮೇಲಧಿಕಾರಿಗಳಿಗೆ ನಿಮ್ಮ ವಿವರಣೆಗಳನ್ನು ಕೊಡುವ ಬಾಬತ್ತು ಬರಲಿದೆ. ಶತ್ರುಗಳು ಹಾಗೂ ಸ್ಪರ್ಧಿಗಳು ನಿಮ್ಮ ಎದುರು ನಿಲ್ಲುವ ಅವಕಾಶಗಳಿವೆ. ಮಾನಸಿಕ ಕ್ಷೋಭೆ ಉಂಟಾಗಲಿದೆ ವಿವಾದಗಳಿಂದ ದೂರವಿರಿ.

**ಕುಂಭ**

ಗೃಹ ವಾತಾವರಣವು ಅನುಕೂಲಕರವಾಗೇ ಇರುತ್ತದೆ. ಆಗಾಗ ಜ್ವರಬಾಧೆಗೆ ಒಳಗಾಗುವ ಅವಕಾಶಗಳಿಲ್ಲದಿಲ್ಲ. ಶುಭಕಾರ್ಯಗಳ ಸಿದ್ಧತೆಗಾಗಿ ಹಣವನ್ನು ವೆಚ್ಚಮಾಡಬೇಕಾಗುವುದು ಸಾಲ ತೆಗೆಯುವ ಸಾಧ್ಯತೆಗಳಿವೆ ಪದೋನ್ನತಿಯಿಂದ ಕೂಡಿದ ಸ್ಥಾನಪಲ್ಲಟವಾಗಬಹುದು.

**ಮೀನ**

ಪದೋನ್ನತಿ ಇಲ್ಲವೇ ವೇತನ ಹೆಚ್ಚಳವುಂಟಾಗುವುದು. ವೃತ್ತಿ ಉದ್ಯೋಗಗಳಲ್ಲಿ ಪ್ರಗತಿ. ಕುಟುಂಬದಲ್ಲಿ ಆನಂದ ಒಳ್ಳೆಯ ಆರೋಗ್ಯ ಮತ್ತು ಸಂಪದಗಳು ಬೆಳವಣಿಗೆಯ ಕಾಲ ಈ ಸಮಯದಲ್ಲಿ ಧೈರ್ಯಯುತವಾದ ಯಾವುದೇ ಪ್ರಯತ್ನವಾದರೂ ಅನುಕೂಲಕರವಾದ ಫಲಿತಾಂಶಗಳನ್ನು ತರುತ್ತದೆ ಸಂತಾನವೃದ್ಧಿ.

# ಸಂಸ್ಕೃತ ಕಲಿಯೋಣ...!!

## ಪಾಠ : 26

## षड्विंशः पाठः

ರಚನೆ:-ಕೆ. ಸೂರ್ಯನಾರಾಯಣ
ಅನುವಾದ: ವಿ. ಪ್ರದೀಪ್ ಕುಮಾರ್

चोष्यम् = ಹುಳಿ
गत्वा = ಹೋಗಿ
नीत्वा = ತೆಗೆದುಕೊಂಡು ಹೋಗಿ
गमनम् = ಹೋಗಬಲ್ಲನು
चुक्रम् = ಹುಣಿಸೆ ಹಣ್ಣು
सूपम् = ತವ್ವಿ
आगत्य = ಬಂದು
नेष्यति = ತೆಗೆದುಕೊಂಡು ಹೋಗಬಲ್ಲನು

गमिष्यति = ಹೋಗಬಲ್ಲನು नेष्यति = ತೆಗೆದುಕೊಂಡು ಹೋಗಬಲ್ಲನು आनयति = ತೆಗೆದುಕೊಂಡು ಬರುತ್ತಿದ್ದಾನೆ

### ಪ್ರಶ್ನೆ

1. चोष्ये लवणं नालम्।
2. सूपः सम्यगस्ति।
3. गृहे चुक्रमस्ति किम्?
4. त्वं तत्र गत्वा किञ्चित् चुक्रमानय।
5. रामः आनयतु। अहं रामठम् आनेष्यामि?
6. यूयम् अस्मद्गृहम् आगमिष्यथ किम्?
7. तथैवागमिष्यामः।
8. त्वं शीघ्रं गच्छ।
9. ते सर्वेऽपि अस्मद्गृहे भोजनार्थमागमिष्यन्ति।
10. सूपः अपि नास्ति, कथं करिष्यन्ति वा?

### ಉತ್ತರ

1. ನೀನು ಅಡಿಗೆ ಮಾಡು.
2. ನಾನು ನೀರನ್ನು ತರುತ್ತೇನೆ.
3. ಆದಮೇಲೆ ನೀವೆಲ್ಲರೂ ಸ್ನಾನ ಮಾಡಿ ಊಟ ಮಾಡಿರಿ.
4. ನೀವು ಹೋಗಿ ನಮ್ಮ ತಂದೆಯನ್ನು ಕರೆದುಕೊಂಡು ಬನ್ನಿ.
5. ನಾನು ಅಲ್ಲೇ ಇರುವೆನು.
6. ನೀವು ಇಲ್ಲಿ ಆಲಸ್ಯ ಮಾಡಬೇಡಿರಿ.
7. ಬೇಗ ಬನ್ನಿ
8. ನೀನು ನಮ್ಮ ಅಣ್ಣನನ್ನು ಕರೆದುಕೊಂಡು ಬಾ.
9. ಹುಡುಗರನ್ನು ಬೇಗನೆ ಕರೆದುಕೊಂಡು ಹೋಗಿ.
10. ಹಾಗೆಯೇ ಕರೆದುಕೊಂಡು ಬರಬಲ್ಲೆನು.


### ಪ್ರಶ್ನೆ

1. ಹುಳಿಯಲ್ಲಿ ಉಪ್ಪು ಸಾಲದು.
2. ತವ್ವೆ ಚನ್ನಾಗಿದೆ
3. ಮನೆಯಲ್ಲಿ ಹುಣಿಸೆಹಣ್ಣು ಇದೆಯಾ.
4. ನೀನು ಅಲ್ಲಿಗೆ ಹೋಗಿ ಸ್ವಲ್ಪ ಹುಣಿಸೆಹಣ್ಣನ್ನು ತೆಗೆದುಕೊಂಡು ಬಾ.
5. ರಾಮನು ತೆಗೆದುಕೊಂಡು ಬರಲಿ. ನಾನು ಹಿಂಗು ತರಬಲ್ಲೇನು.
6. ನೀವು ನಮ್ಮ ಮನೆಗೆ ಬರುತ್ತೀರಾ ಏನು?
7. ಹಾಗೆಯೇ ಬರುತ್ತೇವೆ.
8. ನೀನು ಬೇಗನೆ ಹೋಗು.
9. ಅವರೆಲ್ಲರೂ ನಮ್ಮ ಮನೆಗೆ ಊಟಕ್ಕೋಸ್ಕರ ಬರುತ್ತಾರೆ.
10. ತವ್ವೇ ಕೂಡಾ ಇಲ್ಲಾ ಹೇಗೆ ಮಾಡುತ್ತಾರೆ.

### ಉತ್ತರ

1. त्वं पाकं कुरु।
2. अहं जलम् अनेष्यामि।
3. तदनन्तरं यूयं सर्वे स्नानं कृत्वा भोजनं करिष्यथ।
4. यूयं गत्वा अस्मत्पितरं आनयथ।
5. अहं तत्रैव वसामि (भवामि)
6. यूयम् अत्र आलस्यं मा कुरुथ।
7. वेगेन (त्वरया) अगच्छथ। (शीघ्रं)
8. त्वं अस्मद् अग्रजम् आनय।
9. बालकान् शीघ्रं स्वीकृत्य गच्छथ।
10. तथैव स्वीकृत्य आनेष्यामि। (अस्तु स्वीकृत्य आनेष्यामि।)

# ಶ್ರೀವೇಂಕಟಾಚಲ ಮಹಾತ್ಮೆ





ತೆಲುಗು ಮೂಲ – ಆಚಾರ್ಯ ಕೆ. ಸರ್ವೋತ್ತಮ ರಾವ್,
ಅನುವಾದ – ಶ್ರೀಮತಿ. ಎಸ್. ಪಾರ್ವತಿ

**ಕಳೆದ ಸಂಚಿಕೆಯಿಂದ**

ಗರುಡನು ವಾಯುವೇಗದಲ್ಲಿ ವೈಕುಂಠಕ್ಕೆ ತೆರಳುತ್ತಿದ್ದಂತೆ ಹರಿಯು ತಾನೊಬ್ಬನೇ ಇರಬೇಕು ಎಂದು ಆಲೋಚಿಸಿದನು. ಕೊನೆಗೆ ಗೌತಮಿ ನದಿಯ ದಕ್ಷಿಣ ದಿಕ್ಕಿನಲ್ಲಿ 60 ಯೋಜನೆಗಳ ದೂರದಲ್ಲಿನ ಪೂರ್ವ ಸಮುದ್ರ ತೀರದ ಪಶ್ಚಿಮದಲ್ಲಿ ಐದು ಯೋಜನೆಗಳ ದೂರದಲ್ಲಿನ ಸುವರ್ಣಮುಖಿ ಶಿಖರದ ಉತ್ತರದ ಕಡೆಗಿನ ಪ್ರದೇಶವು ತನ್ನ ವಾಸಕ್ಕೆ ಯೋಗ್ಯವೆಂದು ಭಾವಿಸಿ, ಅಲ್ಲಿಯೇ ಇದ್ದು ಗರುಡನ ಆಗಮನಕ್ಕೆ ಕಾಯುತ್ತಿದ್ದನು.

ಭೂದೇವಿಯನ್ನು ಉದ್ಧರಿಸಿದ ಹರಿಯು ವೈಕುಂಠಕ್ಕೆ ತಕ್ಷಣವೇ ಹೋಗಲು ಇಚ್ಛಿಸಲಿಲ್ಲ. ತನ್ನ ರೂಪವನ್ನು ನೋಡಿ ಆದಿಲಕ್ಷ್ಮಿಯು ಜಿಗುಪ್ಸೆಗೊಳ್ಳುವಳು ಎಂದು ಅನುಮಾನಿಸಿದನು. ಅದಲ್ಲದೇ ತನ್ನನ್ನು ಕಾಮಿಸಿದ ಭೂದೇವಿಯೊಂದಿಗೆ ಇರಬೇಕೆಂದು ಕೊಂಡನು. ಆ ಕಾರಣಕ್ಕಾಗಿ ಗರುಡನನ್ನು ವೈಕುಂಠದಿಂದ ಕ್ರೀಡಾದ್ರಿಯನ್ನು ಭೂಲೋಕಕ್ಕೆ ತರಲು ಆಜ್ಞಾಪಿಸಿದನು.

ಸ್ವಾಮಿಯ ಆಪ್ತನಾದ ಗರುಡನು ಸರಿ ಎಂದು ವೈಕುಂಠಕ್ಕೆ ತೆರಳಿದನು. ಆದಿಲಕ್ಷ್ಮಿಯನ್ನು ಭೇಟಿ ಆದನು ನಂತರದ ಕಥೆ.

ಅಮ್ಮಾ! ಹರಿಯು ಭೂಲೋಕವನ್ನು ಸೇರಿ ಹಿರಣಾಕ್ಷನೆಂಬ ರಾಕ್ಷಸನನ್ನು ಸಂಹರಿಸಲು, ಸಮುದ್ರದಲ್ಲಿ ಮುಳುಗಿದ್ದ ಭೂಮಿಯನ್ನು ಉದ್ಧರಿಸಲು ವರಾಹರೂಪವನ್ನು ಧರಿಸಿದನು.ತನ್ನ ಆಯುಧಗಳಿಂದ ಹಿರಣ್ಯಾಕ್ಷನನ್ನು ಚೂರು ಚೂರು ಮಾಡಿದನು. ಆ ನಂತರ ಮುಳುಗಿದ್ದ ಭೂಮಿಯನ್ನು ಯಥಾಸ್ಥಿತಿಗೆ ಬರುವಂತೆ ಮಾಡಿದನು. ಅದಲ್ಲದೇ, ಪ್ರಸ್ತುತ ಹರಿಯು ಭೂಲೋಕದಲ್ಲಿರಲು ಇಚ್ಛಿಸಿದ್ದಾನೆ. ಆದ್ದರಿಂದ ವೈಕುಂಠದಲ್ಲಿರುವ ಕ್ರೀಡಾದ್ರಿಯನ್ನು ತರಲು ನನಗೆ ಆದೇಶಿಸಿದ್ದಾನೆ.

" ತಾಯಿ ! ನಿಮ್ಮ ಅನುಮತಿ ಇದ್ದಲ್ಲಿ ಕ್ರೀಡಾದ್ರಿಯನ್ನು ಭೂಲೋಕಕ್ಕೆ ತೆಗೆದುಕೊಂಡು ಹೋಗುತ್ತೇನೆ. ಅದಕ್ಕೇ ನಿಮ್ಮ ಸನ್ನಿಧಿಗೆ ಬಂದಿರುವೆ" ಎಂದು ಗರುಡನು ವಿನಯಪೂರ್ವಕವಾಗಿ ಹೇಳಿದನು.

ಆದಿಲಕ್ಷ್ಮಿಯು ಗರುಡನನ್ನು ಅನುಮಾನದಿಂದ ಗಮನಿಸಿದಳು. ಆತನ ಮಾತುಗಳನ್ನು ಶಾಂತಚಿತ್ತಳಾಗಿ ಕೇಳಿದಳು. ಅನಂತರ ಗರುಡನು "ಅಮ್ಮಾ! ಇನ್ನೊಂದು ವಿಷಯ ಸೂಕರರೂಪವನ್ನು ನೋಡಿ ತಾವು ಭಯಪಡುವಿರೆಂದು ಕೂಡಾ ತಮ್ಮ ಸಂದೇಹವನ್ನು ವ್ಯಕ್ತಿ ಪಡಿಸಿದ್ದಾರೆ." ಎಂದನು. ಆಗ ಆದಿಲಕ್ಷ್ಮಿಯು ನಾನು ಸ್ವಾಮಿಯನ್ನು ಎಂದಿಗೂ ಬಿಟ್ಟಿರುವವಳಲ್ಲ. ಸ್ವಾಮಿಗೆ ಕೂಡಾ ಈ ವಿಷಯ ತಿಳಿದಿದೆ. ಆದರೂ

ಸ್ವಾಮಿ ಹೀಗೆ ವಿಚಿತ್ರವಾಗಿ ಯೋಚಿಸಿರುವುದು ಸೋಜಿಗದ ವಿಷಯ. ಹರಿಯ ಯಾವ ರೂಪವನ್ನು ಧರಿಸಿದರೂ, ನಾನೂ ಆ ರೂಪದಲ್ಲಿಯೇ ಯಾವುದೋ ಮಾನಸಿಕ ವಿಕಾರಕ್ಕೆ ಆಸ್ಪದ ಕೊಡದೇ ಹರಿಯ ವಕ್ಷಸ್ಥಳದಲ್ಲಿರುತ್ತೇನೆ. ಈ ನನ್ನ ನಡೆಯ ಬಗ್ಗೆ ತಿಳಿದಿದ್ದರೂ, ಹರಿಯು ಹಾಗೇ ಮಾತನಾಡು ತ್ತಿರುವುದು ವಿಚಿತ್ರವಾಗಿದೆ.

ಹೋಗಲಿ! ಹರಿ ಆ ರೂಪದಲ್ಲಿ ವೈಕುಂಠಕ್ಕೆ ತಿರುಗಿ ಬರಲು ಇಚ್ಛಿಸದಿದ್ದಲ್ಲಿ ನಾನೇ ಧರಿಣಿಗೆ ಬರುತ್ತೇನೆ. ವರಾಹ ರೂಪದಲ್ಲಿರುವ ಆ ಹರಿಯ ವಕ್ಷ ಸ್ಥಳದಲ್ಲಿ ಸ್ವಲ್ಪ ಜಾಗ ಮಾಡಿ ಕೊಳ್ಳುತ್ತೇನೆ.ಆದರೂ ಖಗೇಂದ್ರ! ಒಂದು ಮಾತು, ಸಾವಧಾನ ವಾಗಿ ಕೇಳು!ಮತ್ಸ್ಯರೂಪದಲ್ಲಿ ಸಮುದ್ರದಲ್ಲಿ ಏಕಾಂಗಿ ಯಾಗಿದ್ದ ವೇಳೆಯಲ್ಲಿ ಕೂಡಾ ನಾನು ಹರಿಯ ವಕ್ಷಸ್ಥಳದಲ್ಲಿದ್ದೆ. ಕೂರ್ಮರೂಪದಲ್ಲಿ ಸಮುದ್ರದಲ್ಲಿ ಮುಳುಗಿ ಮಂಥರ ಪರ್ವತ ಹೊರುವ ವೇಳೆಯಲ್ಲಿಯೂ ನಾನು ಹರಿಯ ಜೊತೆಗೆ ಇದ್ದೆ. ಆಲದೆಲೆಯ ಮೇಲೆ ಅಂಗುಷ್ಟ ದೇಹದಲ್ಲಿ ಮಲಗಿದ್ದ ವೇಳೆಯೂ ನಾನು ಜೊತೆಯಲ್ಲಿದ್ದು ಚಂದ್ರನಿಂದ ಚಂದ್ರಿಕಳು ದೂರವಾ ಗದಿರುವಂತೆ ನಾನು ಯಾವಾಗಲೂ ಸ್ವಾಮಿಯೊಂದಿಗೆ ಇದ್ದೇನೆ ಎಂದಿಗೂ ಯಾವ ಅವತಾರದಲ್ಲಿಯೂ ಸ್ವಾಮಿ ಯನ್ನು ಬಿಟ್ಟಿಲ್ಲ. ಆದ್ದರಿಂದ ನಾನು ಈಗಲೇ ನನ್ನ ಪರಿವಾರ ಸಮೇತ ಭೂಲೋಕ ಸೇರಿ ಆ ವರಾಹ ರೂಪಧಾರಿಯ ವಕ್ಷ ಸ್ಥಳದಲ್ಲಿ ನೆಲೆಸುತ್ತೇನೆ. ಸ್ವಾಮಿ ಭಯಂಕರ ರೂಪಧರಿಸಿ ದರೂ ಸರಿ, ವಿಕೃತ ದೇಹದವನಾದರೂ ಸರಿ, ನನಗೆ ಯಾವ ಭಯವೂ ಇಲ್ಲ. ಅಭ್ಯಂತರವೂ ಇಲ್ಲ.

ಈ ವ್ಯವಹಾರಗಳನ್ನೆಲ್ಲ ಒದಿಗಿಡು. ಹರಿ ಭೂದೇವಿ ಯೊಂದಿಗೆ ಕ್ರೀಡಾದ್ರಿಯಲ್ಲಿ ವಿಹರಿಸಬೇಕೆನ್ನುವುದರಲ್ಲಿ ಯಾವುದೇ ತಪ್ಪು ಇಲ್ಲ. ಸ್ವಾಮಿಯ ಆಜ್ಞೆಯಂತೆ ವೈಕುಂಠ ದಲ್ಲಿರುವ ಕ್ರೀಡಾಚಲವನ್ನು ಭೂಲೋಕಕ್ಕೆ ಒಯ್ಯಿ-ಸ್ವಾಮಿ ಆಯ್ಕೆ ಮಾಡುವ ಸ್ಥಳದಲ್ಲಿ ಭೂದೇವಿಯೊಂದಿಗೆ ಹಾಯಾಗಿ ಕಾಲಕಳೆಯಲಿ ಎಂದಳು.

ನಂತರ ಲಕ್ಷ್ಮೀದೇವಿಯ ತನ್ನ ಛಾಯೆಯನ್ನು ವೈಕುಂಠ ದಲ್ಲಿ ಇರಿಸಿ,ಇನ್ನೊಂದು ಛಾಯೆಯೊಂದಿಗೆ ಭೂಲೋಕ ಸೇರಿ ದಳು.

ಸ್ವಾಮಿಯು ಕ್ರೀಡಾದ್ರಿಯನ್ನು, ಅದರೊಂದಿಗಿನ ನೀಳಾ ದೇವಿಯನ್ನು, ಶ್ರೀದೇವಿಯನ್ನು ದೂರದಿಂದ ನೋಡಿದನು. ಅದಲ್ಲದೇ ಶ್ರೀದೇವಿ ಪರಿವಾರವನ್ನೂ ಸಹ ನೋಡಿ ಇನ್ನೇನು! ನಾನು ಭೂಲೋಕದಲ್ಲಿ ಒಂಟಿಯಲ್ಲ. ವೈಕುಂಠದಲ್ಲಿನ ಪರಿ ವಾರವೆಲ್ಲಾ ಭೂಲೋಕಕ್ಕೆ ಬಂದಿದ್ದರಿಂದ ನಾನು ಪ್ರಸ್ತುತ ಸಂಸಾರಿಯಾದೆನು ಎಂದು ಬೇಸರಪಟ್ಟು ಕೊಂಡನು. ತನ್ನ ಸ್ವಯಂ ನಿರ್ಣಯದಂತೆ ಶ್ರೀದೇವಿ ಬಂದಿದ್ದರಿಂದ ಸಮಸ್ಯೆ ಗಳಿಗೆ ಅವಕಾಶವಿಲ್ಲವೆಂದು ಸಮಾಧಾನ ಪಟ್ಟುಕೊಂಡನು. ಇಳಿದು ಬಂದ ಗರುಡನನ್ನು ಕಂಡು ಸ್ವಾಮಿಯು ಪುಷ್ಕರಣಿಯ ಪಶ್ಚಿಮ ಭಾಗದಲ್ಲಿ ಇಡು ಎಂದನು. ವರಾಹ ರೂಪಧಾರಿ ಯಾದ ಸ್ವಾಮಿಯನ್ನು ದರ್ಶನ ಪಡೆಯಲು ದೇವತೆಗಳು ಭಯ, ವಿನಯ,ಸಂಭ್ರಮಗಳಿಂದ ಸ್ತುತಿಸಿದರು. ಆ ಸ್ತುತಿ ಯನ್ನು ತರಿಗೊಂಡ ವೆಂಗಮಾಂಬರವರು ದಂಡಕ ರೂಪದಲ್ಲಿ ರಚಿಸಿದ್ದಾರೆ.


ಶ್ರೀಮನ್ಮಹಾಶ್ವೇತ ಸತ್ಕ್ರೋಡ ರೂಪಾಯ
ನಿಕ್ಷೇಪ ! ಬೋಧ ಪ್ರದೀಪಾ ! ಪ್ರತಾಪೋ
ಜ್ಜ್ವಲಾ ! ಶ್ರೀಪ! ಹಿರಣ್ಯಾಕ್ಷ ಕಾಠಿಣ್ಯ
ದೇಹಾದ್ರಿ ದಂಭೋಳಿಧಾರಾ! ಸುರಾಧಾರ!
ಧಾತ್ರೇ ತಲೋದ್ಧಾರ! ಭರ್ಮಾದ್ರಿ ಧೀರಾ !
..................................................
..............................................
................................................
ಪೂರ್ಣಕಾಮ ಗುಣಸ್ತೋಮ ! ದೇವತ್ತಮಾ !
ದೇವತಾಸಾರ್ವಭೌಮಾ! ತರಿಗೊಂಡಧಾಮಾ
ನೃಸಿಂಹ ! ಹೃತಾಂಹಾ ! ವರಾಹಾವತಾರಾ!
ನಮಸ್ತೆ ನಮಸ್ತೆ ನಮಸ್ತೆ ನಮಃ

ಎಂದು ಸ್ತುತಿಸುತ್ತಿದ್ದಂತೆ ವರಾಹದೇವರು ದೇವತೆ ಗಳನ್ನೆಲ್ಲಾ ಸುಪ್ರಸನ್ನ ದೃಷ್ಟಿಯಿಂದ ನೋಡಿದನು. ದೇವತೆಗಳ ಸ್ತುತಿಗಳಿಗೆ ಪರವಶನಾದ ಸ್ವಾಮಿಯು ದೇವತೆಗಳೊಂದಿಗೆ ಹೀಗೆಂದನು.



(ಮುಂದುವರೆಯುತ್ತದೆ)

ನೀತಿಕಥೆ



# ಎಲ್ಲರನ್ನೂ ಪ್ರೀತಿಸೋಣ, ಮತ್ಸರವನ್ನು ಇಲ್ಲವಾಗಿಸೋಣ

**- ಕೃಪೆ**

ನೂರಾರು ವರ್ಷಗಳ ಹಿಂದಿನ ಕಥೆ. ಒಂದು ಚಿಕ್ಕ ಊರು. ಆ ಊರಿನಲ್ಲೊಂದು ಶ್ರೀಕೃಷ್ಣನ ದೇವಾಲಯ. ಅದರ ಎದುರಿನಲ್ಲೊಂದು ವಿಶಾಲವಾದ ಅಶ್ವತ್ಥ ವೃಕ್ಷ. ಆ ವೃಕ್ಷದ ಬುಡದಲ್ಲೊಬ್ಬ ಸನ್ಯಾಸಿ. ಸದಾ ಶ್ರೀ ಕೃಷ್ಣನ ನಾಮಾಮೃತ ಪಠಿಸುತ್ತಿದ್ದ. ಆತನ ಸ್ವರ ಶುದ್ಧವಾಗಿತ್ತು, ಸ್ಪಷ್ಟವಾಗಿತ್ತು, ಆಕರ್ಷಣೀಯವಾಗಿತ್ತು. ಹಾಗಾಗಿ ದೇವಸ್ಥಾನಕ್ಕೆ ಬಂದ ಭಕ್ತರೆಲ್ಲರೂ ದೇವರ ದರ್ಶನ ಪಡೆದು, ಹಿಂದಿರುಗಿ ಹೋಗುವ ಮೊದಲು ಆ ಸನ್ಯಾಸಿಯನ್ನು ಕಾಣುತ್ತಿದ್ದರು. ಹಿತೋಪದೇಶ ಬಯಸುತ್ತಿದ್ದರು. ಆ ಸನ್ಯಾಸಿ ತಾನು ತಿಳಿದಿರುವ, ಬದುಕ ನೆಮ್ಮದಿಗೆ ಪೂರಕ ಎನಿಸುವ ಹಲವಾರು ಕಥೆಗಳನ್ನು, ಘಟನೆಗಳನ್ನು ಹೇಳುತ್ತಿದ್ದ. ಆಲಿಸಿದವರೆಲ್ಲರೂ ಆನಂದಿಸುತ್ತಿದ್ದರು.ಕೇಳಿದ ವಿಷಯಗಳ ಪ್ರಭಾವದಿಂದ ತಮ್ಮ ಬದುಕಿನಲ್ಲೂ ಒಂದಿಷ್ಟು ಲೌಕಿಕ ಮಾರ್ಪಾಡಿಗೆ ನಿರ್ಧರಿಸುತ್ತಿದ್ದರು.

ಈ ಸನ್ಯಾಸಿಯ ಹಿತೋಪದೇಶದ ಕುರಿತು ಊರಿನವರಿಗೂ ತಿಳಿಯಿತು. ಸುದ್ದಿ ಸದ್ದಾಯಿತು. ಸುತ್ತಲಿನ ಊರುಗಳಲ್ಲೂ ಪ್ರತಿಧ್ವನಿಸಿತು. ದಿನಗಳೆದಂತೆ ಬರುವ ಭಕ್ತರ, ಆಲಿಸುವ ಶ್ರೋತೃಗಳ ಸಂಖ್ಯೆ ಹೆಚ್ಚಿತು. ಸನ್ಯಾಸಿಯ ಮಾತುಗಳನ್ನು ಆಲಿಸುತ್ತ ಕೇಳುಗರು ಮಂತ್ರಮುಗ್ಧರಾಗುತ್ತಿದ್ದರು.

ಒಮ್ಮೆ ಅಲ್ಲಿಗೆ ದೂರದ ಊರಿನಿಂದ ಸಾಧಕನೋರ್ವ ಬಂದ. ಸನ್ಯಾಸಿಯನ್ನೂ, ಆತನ ಮಾತಿನ ಮೋಡಿಗೆ ಒಳಗಾಗಿದ್ದ ದೊಡ್ಡ ಸಂಖ್ಯೆಯ ಜನರನ್ನೂ ಕಂಡ. ಹೊಟ್ಟೆಕಿಚ್ಚು ಪಟ್ಟ. ಆ ಸನ್ಯಾಸಿಯಲ್ಲಿ, ಬರಿಯ ಮಾತಿನಿಂದೇನು ಸಾಧಿಸಬಹುದು? ನಿನ್ನಲ್ಲಿ ದೈವಿಶಕ್ತಿ ಇದ್ದರೆ ವಿಶೇಷವನ್ನೇನಾದರೂ ಮಾಡಿ ತೋರಿಸು" ಎಂದ.

ಸನ್ಯಾಸಿ, "ನನಗೇನೂ ತಿಳಿಯದು. ತಾವೇನಾದರೂ ಮಾಡಿ ತೋರಿದರೆ ನಾನು ಖುಷಿಪಡುವೆ" ಎಂದ .

ಆ ಸಾಧಕ ನೋಡುನೋಡುತ್ತಲೇ ಎತ್ತರಕ್ಕೆ ಬೆಳೆದ. ಹಾಗೇ ಚಿಕ್ಕವನಾದ. ಬಹಳ ಅಗಲಕ್ಕೆ ಬೆಳೆದ, ಮತ್ತೆ ಮಾಮೂಲಿನಂತಾದ. ಎಲ್ಲೆಲ್ಲೂ ಕಾಣಿಸತೊಡಗಿದ, ಮತ್ತೆ ನಿಂತಲ್ಲಿ ಮಾತ್ರ ಕಂಡ ! ನೆರೆದವರು ಅಚ್ಚರಿಗೊಂಡರು. ಆತನ ಪವಾಡಕ್ಕೆ ಮಾರು ಹೋದರು. ಆ ಸಾಧಕ ಸನ್ಯಾಸಿಯಲ್ಲಿ," ನೀನೇನಾದದರೂ ಮಾಡಿ ತೋರಿಸು. ಸಾಧ್ಯವಾಗದಿದ್ದರೆ ಬರಿದೇ ಮಾತಿನಿಂದ ಜನರನ್ನು ಭ್ರಮೆಗೆ ಒಳಗಾಗಿಸುವುದನ್ನು ಬಿಟ್ಟು ಬಿಡು" ಎಂದು ಠೇಂಕರಿಸಿದ.


ಆಗ ಆ ಸನ್ಯಾಸಿ, "ನಾನೂ ಸಾಮಾನ್ಯದವ, ಹಸಿ ವಾದಾಗ ಉಣ್ಣುವೆ, ನಿಂದಿಸಿದಾಗ ಕ್ಷಮಿಸುವೆ. ನೊಂದಾಗ ಸಂತೈಸುವೆ. ಕಷ್ಟವನ್ನರಹುವಾಗ ಧೈರ್ಯ ತುಂಬುವೆ. ಸಾಧಿಸಿದಾಗ ಪ್ರೋತ್ಸಾಹಿಸುವೆ. ಕೆಲಸ ಮಾಡುವವರಿಗೆ ದುಡಿಮೆಯ ದಾರಿ ತೋರುವೆ. ನಿಂದೆ ಅಪಮಾನಗಳ ಲೆಕ್ಕಿಸದೇ ಇರುವೆ. ಅವರೇ ಅಪೇಕ್ಷಿಸಿ ಬಂದಾಗ ನನಗೆ ತಿಳಿದಿರುವುದನ್ನು ಹೇಳುವೆ. ಇದೇ ನನ್ನ ದೃಷ್ಟಿಯಲ್ಲಿ ನಿಜಪವಾಡ ಹಾಗೂ ಬದುಕಿನ ರೀತಿ " ಎಂದ ಸಾಧಕ ಮೌನವಾದ.

**ನೀತಿ:** ಏನೇನೋ ಮಾಡಿ ಭ್ರಮೆಗೊಳಪಡಿಸುವುದಕ್ಕಿಂತ ಎಲ್ಲರಲ್ಲಿ ಪ್ರೀತಿಯಿಂದ ಸ್ಪಂದಿಸಿದರೆ ಅದೇ ನಿಜ ಬದುಕು.

ಬಾ ಲ ವಿ ನೋ ದಿ ನಿ

ಈ ಗೊಂಬೆಗೆ ಬಣ್ಣವನ್ನು ತುಂಬಿರಿ.......

ಪಕ್ಕದಲ್ಲಿರುವ ಗೊಂಬೆಯನ್ನು ಬರಿಯೋಣ...





ನಾನಾ ವಿಧಾರಿ ಕೃತಬಾಧ ವಿದೂರ ಮೂರ್ತೇ ಶ್ರೀ
ವಿಷ್ಣುದಾಸ ಪರಿಪಂಥಿ ಜನಾರ್ತಿತಾರ್ತೇ!
ಸರ್ವಜ್ಞ ಪೂರ್ಣ ಬಲವೀರ್ಯ ವಿಶಾಲ ಕೀರ್ತೆ ಶ್ರೀ
ಭಾರತೀಶ ಮಮ ದೇಹಿ ಕರಾವಲಂಬಮ್ ॥11॥

ನಾನಾ ವಿಧ ಶತ್ರುಗಳಿಂದ ಉಂಟಾಗುವ ಬಾಧೆಗಳನ್ನು ನಿವಾರಿಸುವ, ಶ್ರೀ ವಿಷ್ಣುವಿನ ದಾಸರಾದ, ಶ್ರೀ ವಿಷ್ಣುಭಕ್ತರಾದ ಆರ್ತಜನರಿಗೆ ಮಾರ್ಗದರ್ಶಕರಾದ, ಸರ್ವಜ್ಞರಾದ, ಪೂರ್ಣವಾದ ಬಲವೀರ್ಯದಿಂದ ವಿಸ್ತಾರವಾದ ಕೀರ್ತಿಯುಳ್ಳ ಶ್ರೀ ಭಾರತೀಪತಿಯಾದ ವಾಯುದೇವರು ನಮ್ಮನ್ನು ಕಾಪಾಡಲಿ.

– ರಚನೆ : ವಿದ್ವಾನ್ ಆರಣಿ ವಾಸುದೇವಾಚಾರ್ಯ


ಈ ಅಕ್ಷರಗಳಲ್ಲಿ ಒಂದು ಗಾದೆ ಇದೆ ಕಂಡು ಹಿಡಿಯಿರಿ ನೋಡೋಣ....

ಳಿ ನ ರು ಬೆ ಗಾ ರೆ ಡೀ ತು

ಅ ಯ ಕು ಡು ಳ ದ ಕಂ

ಉತ್ತರಗಳು:

ಅಳಿಯನ ಕುರುಡು ಬೆಳಗಾದರೆ ಕಂಡೀತು



## ದಾರಿ ತೋರಿಸಿ

ಹನುಮಂತನು ಯಾವ ಹಾದಿಯಲ್ಲಿ ಹೋದರೆ ರಾಮನನ್ನು ದರ್ಶಿಸುತ್ತಾನೆ ಮಕ್ಕಳೇ ಹನುಮಂತನಿಗೆ ದಾರಿಯನ್ನು ತೋರಿಸಿ.

**ತಿರುಮಲ ತಿರುಪತಿ ದೇವಸ್ಥಾನಗಳು**

# ಮಕ್ಕಳೇ ಇದು ನಿಮಗಾಗಿ





## ಕ್ವಿಜ್

## ಸೂಚನೆಗಳು

1. ಈ ಕ್ವಿಜ್ 10-15 ವರ್ಷ ವಯಸ್ಸಿನ ಮಕ್ಕಳು ಹಿಂದೂವಾಗಿರಬೇಕು.
2. ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳುವ ಮಕ್ಕಳ ತಂದೆ ತಾಯಿ ತಪ್ಪದೇ ಸಪ್ತಗಿರಿ ಮಾಸ ಪತ್ರಿಕೆಯ ಚಂದಾ ದಾರರಾಗಿರಬೇಕು.
3. ಕ್ವಿಜ್ ಪ್ರಶ್ನಾಪತ್ರಿಕೆಯಲ್ಲಿ ತಪ್ಪದೇ ತಮ್ಮ ಚಂದಾ ಸಂಖ್ಯೆ, ಹೆಸರು, ವಿಳಾಸ, ಪಿನ್‌ಕೋಡ್,ಫೋನ್ ನಂಬರ್ ಸ್ಪಷ್ಟವಾಗಿ ಬರೆಯಬೇಕು.
4. ಕ್ವಿಜ್ ಉತ್ತರಗಳನ್ನು ಪ್ರಶ್ನೆಯ ಕೆಳಗೆ ನಿರ್ದೇಶಿಸಿದ ಸ್ಥಳದಲ್ಲಿಯೇ ಬರೆದು ಕಳುಹಿಸಬೇಕು.
5. ಕ್ವಿಜ್ ಉತ್ತರದ ಜೆರಾಕ್ಸ್ ಅನ್ನು ತೆಗೆದುಕೊಂಡು ಕಳಿಹಿಸಿದವರು ಖಚಿತವಾಗಿ ಚಂದಾನಂಬರ್‌ನ್ನು ಕಳು ಹಿಸಬೇಕು. ಒಬ್ಬ ಚಂದಾದಾರರು ಒಂದು ಉತ್ತರವನ್ನು ಮಾತ್ರವೇ ಕಳುಹಿಸತಕ್ಕದ್ದು.
6. ಉತ್ತರ ಬರೆಯುವಾಗ ಅಳಿಸುವುದು, ತಿದ್ದುವುದು ಮಾಡಬಾರದು.
7. ಉತ್ತರಗಳನ್ನು ನಮಗೆ ಕಳುಹಿಸುವ ಕೊನೆಯ ದಿನಾಂಕ 25.06.2023
8. ಈ ಕ್ವಿಜ್‌ನಲ್ಲಿ ಎಲ್ಲಾ ಉತ್ತರಗಳನ್ನು ಸರಿಯಾಗಿ ಬರೆದ ಮೂರು ಮಕ್ಕಳನ್ನು ಮಾತ್ರವೇ ವಿಜೇತರಾಗಿ ಲಕ್ಕಿ ಡಿಫ್ ಮುಖಾಂತರ ಆಯ್ಕೆ ಮಾಡಲಾಗುತ್ತದೆ.
9. ವಿಜೇತರಾದ ಮಕ್ಕಳ ಹೆಸರನ್ನು ಮುಂದಿನ ತಿಂಗಳ ಸಪ್ತಗಿರಿ ಮಾಸ ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.
10. ತಿ.ತಿ.ದೇ. ಪ್ರಧಾನ ಸಂಪಾದಕರ ಕಾರ್ಯಾಲಯದಲ್ಲಿ ಕೆಲಸ ಮಾಡುವ ಉದ್ಯೋಗಿಗಳ ಮಕ್ಕಳು ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳಬಾರದು.
11. ಕ್ವಿಜ್‌ಗೆ ಸಂಬಂಧಿಸಿದ ಯಾವ ಸಮಾಚಾರವನ್ನು ಫೋನ್ ಮುಖಾಂತರ ನೀಡಲಾಗು ವುದಿಲ್ಲ.

**ನಿಮ್ಮ ಉತ್ತರಗಳನ್ನು ಕಳುಹಿಸಬೇಕಾದ ವಿಳಾಸ**


ಪ್ರಧಾನ ಸಂಪಾದಕರು
ಸಪ್ತಗಿರಿ ಮಾಸಪ್ರತಿಕೆ
**ತಿ.ತಿ.ದೇ. ಪ್ರೆಸ್ ಕಾಂಪೌಂಡ್**
**ಕೆ.ಟಿ. ರಸ್ತೆ, ತಿರುಪತಿ : 517 507**
**ಆಂಧ್ರ ಪ್ರದೇಶ್**

# ರಸಪ್ರಶ್ನೆಗಳು

01. ಯಾವ ದಿನದಂದು ತಪ್ತ ಮುದ್ರಾಧಾರಣೆ ಮಾಡಿಸಿಕೊಳ್ಳಬೇಕು?........................................................................
02.ಸಾವಿತ್ರಿಯ ಪತಿಯ ಹೆಸರೇನು? ........................................................................
03.ವಿದ್ಯಾರಣ್ಯರು ಎಂದು ಸಾಯುಜ್ಯವನ್ನು ಹೊಂದಿದರು?........................................................................
04.ಮಣ್ಣೆತ್ತಿನ ಅಮಾವಾಸ್ಯೆಯಂದು ಯಾವುದರಿಂದ ಎತ್ತುಗಳನ್ನು ತಯಾರಿಸುತ್ತಾರೆ?........................................ ...........
05.ಎಷ್ಟು ದಿನ ಸ್ವಾಮಿಯು ಏಕಾಂತದಲ್ಲಿರುತ್ತಾನೆ? .................... ........................................................
06.ಚಂದ್ರನು ಯಾವಪಕ್ಷದಲ್ಲಿ ಕಳಾಹೀನನಾಗುತ್ತಾನೆ? ........................................ ............. ...............
07. ಅರಣ್ಯಕರು ನಿರಂತರವಾಗಿ ಯಾರ ಜಪ ಮಾಡಿದರು? ........................................ ......................
08. ನಾರಾಯಣಘಟ್ಟದ ಮತ್ತೊಂದು ದೇವಾಲಯ ಯಾವುದು?........................................ .................. .........
09. ಜೂನ್ 21 ರಂದು ಯಾವ ದಿನಾಚರಣೆಯನ್ನು ಆಚರಿಸುತ್ತಾರೆ ? ........................................ ......................
10. ಸಾಗರಕಟ್ಟೆ ಪ್ರದ್ಯುಮ್ನತೀರ್ಥರು ಎಂದು ಬೃಂದಾವನಸ್ಥರಾದರು? ........................................ ..................
11. ಯೋಗಾದಿನವನ್ನು ಎಂದು ಆಚರಿಸುತ್ತಾರೆ? ........................................................................
12.ಯಾರನ್ನು ನಂಬಿರಬೇಕು ಎಂದು ಶ್ರೀಪಾದರು ಹೇಳುತ್ತಾರೆ? ........................................ ......................
13.ತಿರುನರಯೂರ್‌ನಲ್ಲಿರುವ ಅಮ್ಮನವರು ಯಾರು? ........................................ .................. ................
14.ವಿಷ್ಣುವು ಆ ಸುಂದರಿಗೆ ಏನೆಂದು ಹೆಸರಿಟ್ಟನು?........................................................................
15.ಭೂಮಾತೆ ದೇವತೆಗಳು ಸೇರಿ ಎಲ್ಲಿಗೆ ಹೋದರು? ........................................................................

**ಹೆಸರು :**
**ಚಂದಾ ಸಂಖ್ಯೆ :**
**ತಂದೆಯ ಹೆಸರು :**
**ತಾಯಿಯ ಹೆಸರು:**
**ವಿಳಾಸ :**
**ದೂರವಾಣಿ ಸಂಖ್ಯೆ :**

ಇದರಲ್ಲಿ ಹೋಲಿಕೆ ಇಲ್ಲದ ಚಿತ್ರ ಯಾವುದು








..............................




..............................







..............................









..............................

ಪೂರಿ ಜಗನ್ನಾಥ, ಯೋಗ, ಏಕಾದಶಿ, ಸಂಗೀತ ವಾದ್ಯಗಳು ಇವುಗಳಿಗೆ ಸಂಬಂಧವಿಲ್ಲದ ಚಿತ್ರವನ್ನು ಕಂಡು ಹಿಡಿಯಿರಿ.



ಈ ಚಿತ್ರದಲ್ಲಿ ಒಟ್ಟು 7 ವ್ಯತ್ಯಾಸಗಳಿವೆ.


ಮಕ್ಕಳೇ ಇದನ್ನು ಕಂಡು ಹಿಡಿಯಿರಿ ನೋಡೋಣ.



ಮೋಡಗಳು, ಹೂವಿನ ಬುಟ್ಟಿ, ವೈಷ್ಣವರು, ಸೂರ್ಯ , ಮಂಟಪ , ಕಲ್ಲುಗಳು, ಪಕ್ಷಿಗಳು

# ಏಕಾದಶಿ

ಕಥೆ : ತೆಲುಗು ಮೂಲ : ಶ್ರೀನಿವಾಸ ದೀಕ್ಷಿತರು
ಅನುವಾದ : ಆರ್.ಕೆ.
ಚಿತ್ರಗಳು : ಕೆ.ದ್ವಾರಕಾನಾಥ್






**ಸರ್ವೇ ಜನಾಃ ಸುಖಿನೋ ಭವಂತು**

ತಿರುಮಲೆ ತಿರುಪತಿ ದೇವಸ್ಥಾನಗಳು. ತಿರುಪತಿ

# ಸಪ್ತಗಿರಿ

(ಆಧ್ಯಾತ್ಮಿಕ ಮಾಸಪತ್ರಿಕೆ)



## ಚಂದಾ ನಮೂನೆ ಪತ್ರ

ಹೆಸರು ಮತ್ತು ವಿಳಾಸ :
(ಬಿಡಿಬಿಡಿ ಅಕ್ಷರಗಳಲ್ಲಿ ಅರ್ಥವಾಗುವಂತೆ ಇಂಗ್ಲೀಷಿನಲ್ಲಿ ಬರಿಯಿರಿ. ಪಿನ್ ಕೋಡ್ ತಪ್ಪದೇ ನಮೂದಿಸಿ)

(ಪಿನ್ ಕೋಡ್ ತಪ್ಪದೇ ನಮೂದಿಸಿ)

ಬೇಕಾಗುವ ಭಾಷೆ : ☐ ಕನ್ನಡ ☐ ತೆಲುಗು ☐ ಹಿಂದೀ ☐ ತಮಿಳು ☐ ಇಂಗ್ಲೀಷು ☐ ಸಂಸ್ಕೃತ

ವಾರ್ಷಿಕ /ಆಜೀವಚಂದಾ : ☐ ರೂ.240/- ☐ ರೂ.2,400/-( 12 ವರ್ಷ),

ವಿದೇಶಿ ವಾರ್ಷಿಕ ಚಂದಾ ☐ ರೂ. 1030/-

ಚಂದಾ ನವೀಕರಣ :

(ಅ) ಚಂದಾ ನಂಬರು :

(ಆ) ಭಾಷೆ :

ಸಲ್ಲಿಸಿದ ಹಣ :

ಡಿ. ಡಿ. ಸಂಖ್ಯೆ/ಈ.ಎಂ.ಓ/ಐ.ಪಿ.ಓ./ ಅಟ್‌ಪರ್ ಚೆಕ್ಕು ಮಾತ್ರವೇ :

ಸ್ಥಳ :

ದಿನಾಂಕ: ಚಂದಾದಾರರ ಸಹಿ

ಸಪ್ತಗಿರಿ ವಾರ್ಷಿಕ ಚಂದಾ ರೂ.240/-, ಆಜೀವಚಂದಾ (12 ವರ್ಷ) ರೂ.2,400/- ಗಳು ಡಿ. ಡಿ. ಸಂಖ್ಯೆ/ಈ.ಎಂ.ಓ/ಐ.ಪಿ.ಓ./ ಅಟ್‌ಪರ್ ಚೆಕ್ಕು ಅನ್ನು ಪ್ರಧಾನ ಸಂಪಾದಕರು, ಸಪ್ತಗಿರಿ, ತಿ.ತಿ.ದೇ. ತಿರುಪತಿ. ಅವರ ಹೆಸರಿನಲ್ಲಿ ತೆಗೆಯ ಬೇಕು. ಸಪ್ತಗಿರಿ ಚಂದಾದಾರರಾಗಿ ಸೇರ ಬಯಸುವವರು/ತಮ್ಮ ಚಂದಾ ನವೀಕರಿಸುವವರು ಈ ಕೂಪನ್‌ನಲ್ಲಿ ಅಥವಾ ಬಿಳಿಹಾಳಿಯಲ್ಲಿ ಮೇಲೆ ತಿಳಿಸಿದಂತೆ ವಿವರಗಳನ್ನು ಬರೆದು ಕಳುಹಿಸಬೇಕು. ಎಂ.ಓ. ಕಳುಹಿಸುವವರು ಅದರಲ್ಲಿ ನಿಮ್ಮ ಚಂದಾ ವಿವರಗಳನ್ನು ಬರೆದು ಈ ಕೆಳಗಿನ ವಿಳಾಸಕ್ಕೆ ಕಳಿಸಿ.

ನಮ್ಮ ವಿಳಾಸ -"ಪ್ರಧಾನ ಸಂಪಾಕರು, ಸಪ್ತಗಿರಿ ಕಾರ್ಯಾಲಯ, ತಿ.ತಿ.ದೇ ಪ್ರೆಸ್ ಕಾಂಪೌಂಡ್, ಕೆ. ಟಿ.ರೋಡ್ಡು, ತಿರುಪತಿ - 517 507".

ಸಪ್ತಗಿರಿ ಚಂದಾ ವಿವರಣೆಗಾಗಿ ಪೋನ್‌ನಂಬರ್:0877- 2264359,0877-2264543

ತಿರುಮಲೆ ತಿರುಪತಿ ದೇವಸ್ಥಾನಗಳು

## ಟೋಲ್ ಫ್ರಿ ನಂಬರ್

ಸ್ವಾಮಿಯ ದರ್ಶನಾರ್ಥ ತಿರುಮಲೆಗೆ ಬರುವ ಭಕ್ತರ ಸೌಕರ್ಯಾರ್ಥಕ್ಕಾಗಿ ತಿರುಮಲೆ ತಿರುಪತಿ ದೇವಸ್ಥಾನದವರು ಟೋಲ್ ಫ್ರಿ ನಂಬರ್ ಅನ್ನು ಏರ್ಪಡಿಸಿದ್ದಾರೆ.

ಯಾತ್ರಿಕರು, ಭಕ್ತರು ದೇವಸ್ಥಾನಕ್ಕೆ ಸಂಬಂಧಿಸಿದ ಸೂಚನೆ /ದೂರುಗಳನ್ನು ಮತ್ತು ಇತರ ಸಮಾಚಾರಕ್ಕಾಗಿ ಈ ನಂಬರನ್ನು ಸಂಪರ್ಕಿಸಬಹುದು.

**ತಿರುಮಲೆ ತಿರುಪತಿ ದೇವಸ್ಥಾನವು ಯಾತ್ರಿಕರಿಗೆ ಮತ್ತಷ್ಟು ಸೇವೆಯನ್ನು ನೀಡಲು ನಿಮ್ಮ ಸೂಚನೆಗಳನ್ನು ನೀಡಿರಿ.**

**ಟೋಲ್ ಫ್ರಿ ನಂಬರ್**

**18004254141**


0877-2233333,

0877-2277777

Printed by Sri P. Ramaraju, M.A., and Published by Dr. K. Radha Ramana, M.A., M.Phil., Ph.D., on behalf of Tirumala Tirupati Devasthanams and Printed and Published at Tirumala Tirupati Devasthanams Press, K.T.Road, Tirupati - 517 507.
Editor : Dr. V. G. Chokkalingam, M.A., Ph.D.

# ಒಣಗಿದ ಹೂವುಗಳಿಂದ ತಯಾರಿಸಲಾದ ಉತ್ಪನ್ನಗಳು

## ಫೋಟೋ ಫ್ರೇಮ್‌ಗಳು ಮತ್ತು ಕೀಚೈನ್‌ಗಳು (ಡ್ರೈಫ್ಲವರ್, ಟೆಕ್ನಾಲಜಿ)













## ಅಗರ ಬತ್ತಿಗಳು (ಒಣಗಿದ ಹೂಗಳ ಉತ್ಪನ್ನಗಳು)
















SAPTHAGIRI (KANNADA) SPIRITUAL ILLUSTRATED MONTHLY Published by Tirumala Tirupati Devasthanams Printing on 25-05-2023 and Posting at Tirupati RMS.Regd. with the Registrar of Newspapers for India underRNI. No. APKAN/2021/80589. Postal Regd.No.TRP/156/2021-2023 "Licenced toPost Without Prepayment No. PMGK/RNP/WPP-04(6)/2021-2023" Posting on 20th of Every Month

